ಕನ್ನಡ ಸಾಹಿತ್ಯ

6

ಸಂಚಿಕೆ

ಸ್ನಾತಕೋತ್ತರ ಪದವಿ
ಪೂರ್ವಸಿದ್ಧತಾ ಕಾರ್ಯಕ್ರಮ

ಎಂಪಿಪಿ

MPP

MASTER'S PREPARATORY PROGRAMME

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮಾನಸ ಗಂಗೋತ್ರಿ, ಮೈಸೂರು - 570 006

ಉನ್ನತ ಶಿಕ್ಷಣಕ್ಕಾಗಿ ಇರುವ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ಮತ್ತು ಶಿಕ್ಷಣವನ್ನು ಪ್ರಜಾತಂತ್ರೀಕರಿಸುವುದಕ್ಕೆ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 1986

The Open University system has been initiated in order to augment opportunities for higher education and as instrument of democrating education.

National Education Policy 1986

ಮುಕ್ತ ವಿಶ್ವವಿದ್ಯಾನಿಲಯವು ದೂರಶಿಕ್ಷಣ ಪದ್ಧತಿಯಲ್ಲಿ ಬಹುಮಾಧ್ಯಮಗಳನ್ನು ಉಪಯೋಗಿಸುತ್ತದೆ. ....ವಿದ್ಯಾಕಾಂಕ್ಷಿಗಳನ್ನು ಜ್ಞಾನ ಸಂಪಾದನೆಗಾಗಿ ಕಲಿಕಾ ಕೇಂದ್ರಕ್ಕೆ ಕೊಂಡೊಯ್ಯುವ ಬದಲು, ಜ್ಞಾನ ಸಂಪತ್ತನ್ನು ವಿದ್ಯೆ ಕಲಿಯುವವರ ಬಳಿ ಕೊಂಡೊಯ್ಯುವ ವಾಹಕವಾಗಿದೆ.

ಡಾ. ಕುಳಂದೈಸ್ವಾಮಿ

"The Open University system makes use of Multimedia in distance education system. .... it is vehicle which transports knowledge to the place of learners rather than transport to the place of learning.

Dr. Kulandai Swamy

ವಿಶ್ವಮಾನವ ಸಂದೇಶ

ಪ್ರತಿಯೊಂದು ಮಗುವು ಹುಟ್ಟುತ್ತಲೇ - ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪ ಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು.

ಮನುಜ ಮತ, ವಿಶ್ವ ಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜ ಮತ. ಆ ಪಥ ಈ ಪಥ ಅಲ್ಲ; ವಿಶ್ವ ಪಥ. ಆ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಸಂಕುಚಿತ ಮತದ ಆಂಶಿಕ ದೃಷ್ಟಿ ಅಲ್ಲ; ಭೌತಿಕ ಪಾರಮಾರ್ಥಿಕ ಎಂಬ ಭಿನ್ನದೃಷ್ಟಿ ಅಲ್ಲ; ಎಲ್ಲವನ್ನು ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ.

ಕುವೆಂಪು

Gospel of Universal Man

Every Child, at birth, is the universal man. But, as it grows, we turn it into "a petty man". It should be the function of education to turn it again into the enlightened "universal man".

The Religion of Humanity, the Universal Path, the Welfare of All, Reconciliation, the Integral Vision- these *five mantras* should become View of the Future. In other words, what we want henceforth is not this religion or that religion, but the Religion of Humanity ; not this path or that path, but the Universal Path ; not the well-being of this individual or that individual, but the Welfare of All ; not turning away and breaking off from one another, but reconciling and uniting in concord and harmony ; and, above all, not the partial view of a narrow creed, not the dual outlook of the material and the spiritual, but the Integral Vision of seeing all things with the eye of the Divine.

Kuvempu

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ
ಮೈಸೂರು - 570 006

ಎಂ.ಪಿ.ಪಿ.
ಕನ್ನಡ ಸಾಹಿತ್ಯ

ಸಂಚಿಕೆಗಳು	ವಿಷಯಗಳು	
1	ಕನ್ನಡ ಸಾಹಿತ್ಯ ಚರಿತ್ರೆ ಹಳಗನ್ನಡ ಸಾಹಿತ್ಯ ಚಂಪೂ ಸಾಹಿತ್ಯ - ವಚನ ಸಾಹಿತ್ಯ	ಘಟಕ - 1 ಕನ್ನಡ ಸಾಹಿತ್ಯದ ಪ್ರಾಚೀನತೆ ಘಟಕ - 2 ೧ನೇ ನಾಗವರ್ಮ, ನಾಗಚಂದ್ರ, ನಯಸೇನ, ನೇಮಿಚಂದ್ರ, ರುದ್ರಭಟ್ಟ, ಜನ್ನ ಮತ್ತು ಆಂಡಯ್ಯ ಘಟಕ - 3 ವಚನ ಸಾಹಿತ್ಯ : ಹಿನ್ನೆಲೆ, ಉಗಮ, ಬೆಳವಣಿಗೆ, ಲಕ್ಷಣ ಘಟಕ - 4 ಪ್ರಮುಖ ವಚನಕಾರರು, ವಚನ ಸಾಹಿತ್ಯದ ಕೊಡುಗೆ
2	ಕನ್ನಡ ಸಾಹಿತ್ಯ ಚರಿತ್ರೆ ನಡುಗನ್ನಡ ಸಾಹಿತ್ಯ	ಘಟಕ - 1 ರಗಳೆ : ಸ್ವರೂಪ, ಪ್ರಭೇದಗಳು ಘಟಕ - 2 ಕವಿ ಹರಿಹರ ಮತ್ತು ಆತನ ಕೃತಿಗಳು ಘಟಕ - 3 ಷಟ್ಪದಿ ಸಾಹಿತ್ಯ - ಪರಿಚಯ, ರಾಘವಾಂಕ : ಕವಿ, ಕೃತಿಗಳು ಘಟಕ - 4 ಷಟ್ಪದಿ ಕವಿಗಳು : ಕುಮಾರವ್ಯಾಸ, ಚಾಮರಸ, ಕುಮಾರವಾಲ್ಮೀಕಿ
3	ಕನ್ನಡ ಸಾಹಿತ್ಯ ಚರಿತ್ರೆ ನಡುಗನ್ನಡ ಸಾಹಿತ್ಯ	ಘಟಕ - 1 ದಾಸ ಸಾಹಿತ್ಯ : ಶ್ರೀಪಾದರಾಜರು, ಪುರಂದರ, ಕನಕ, ಜಗನ್ನಾಥದಾಸರು ಮೊದಲಾದವರು ಘಟಕ - 2 ತ್ರಿಪದಿ ಸಾಹಿತ್ಯ : ಪರಿಚಯ, ಸರ್ವಜ್ಞ ಕವಿ ಘಟಕ - 3 ಸಾಂಗತ್ಯ ಸಾಹಿತ್ಯ - ೧ : ದೇಪರಾಜ, ಶಿಶುಮಾಯಣ, ನಿಜಗುಣಶಿವಯೋಗಿ, ಕನಕದಾಸರು ಘಟಕ - 4 ಸಾಂಗತ್ಯ ಸಾಹಿತ್ಯ - ೨ : ನಂಜುಂಡ ಕವಿ, ರತ್ನಾಕರವರ್ಣಿ, ಸಂಚಿಯ ಹೊನ್ನಮ್ಮ
4	ಕನ್ನಡ ಸಾಹಿತ್ಯ ಚರಿತ್ರೆ ಆಧುನಿಕ ಕನ್ನಡ ಸಾಹಿತ್ಯ	ಘಟಕ - 1 ಹೊಸಗನ್ನಡದ ಅರುಣೋದಯ : ಭಾಗ - ೧ ಘಟಕ - 2 ಹೊಸಗನ್ನಡ ಅರುಣೋದಯ : ಭಾಗ - ೨ ಘಟಕ - 3 ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯ ಘಟಕ - 4 ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯ
5	ಕನ್ನಡ ಸಾಹಿತ್ಯ ಚರಿತ್ರೆ ಆಧುನಿಕ ಕನ್ನಡ ಸಾಹಿತ್ಯ	ಘಟಕ - 1 ಭಾವಗೀತೆ, ಕಾದಂಬರಿ ಘಟಕ - 2 ಸಣ್ಣ ಕಥೆ : ಸ್ವರೂಪ, ಲಕ್ಷಣ ಮತ್ತು ಇತಿಹಾಸ ಘಟಕ - 3 ನಾಟಕ : ವಸ್ತು, ಸಂವಿಧಾನ, ರಂಗಭೂಮಿ, ನಾಟಕ ಪರಂಪರೆ ಘಟಕ - 4 ಪ್ರಬಂಧ, ವಿಮರ್ಶೆ
6	ಛಂದಸ್ಸು	ಘಟಕ - 1 ಲಯ, ಯತಿ, ಪ್ರಾಸ, ಪಾದ, ಮಾತ್ರಾಗಣ ಸ್ವರೂಪ, ಕನ್ನಡ ಛಂದೋಗ್ರಂಥಗಳ ಪರಿಚಯ ಘಟಕ - 2 ವರ್ಣವೃತ್ತಗಳು, ಖ್ಯಾತ ಕರ್ಣಾಟಕಗಳು; ಮಾತ್ರಾವೃತ್ತಗಳು, ಕಂದ, ರಗಳೆ;ಅಂಶವೃತ್ತಗಳು ಘಟಕ - 3 ಹೊಸಗನ್ನಡ ಛಂದಸ್ಸು - ೧: ಗಣವಿನ್ಯಾಸ, ಪ್ರಯೋಗಗಳು, ಸ್ವರಾಘಾತ, ಗಣಪರಿವೃತ್ತಿ ಘಟಕ - 4 ಹೊಸಗನ್ನಡ ಛಂದಸ್ಸು - ೨ : ಮಾತ್ರೆ, ಮುಡಿ, ಪದ್ಮಗಣ
7	ಭಾರತೀಯ ಕಾವ್ಯಮೀಮಾಂಸೆ	ಘಟಕ - 1 ಮೀಮಾಂಸೆಯ ಉಗಮ, ಕಾವ್ಯದ ಆಕರ, ಪರಿಕರ, ಸಹೃದಯ, ಕಾವ್ಯ ಲಕ್ಷಣ ಇತ್ಯಾದಿ ಘಟಕ - 2 ಪ್ರಸ್ಥಾನಗಳು : ಅಲಂಕಾರ, ರೀತಿ, ಧ್ವನಿ , ಔಚಿತ್ಯ, ಮೀಮಾಂಸಕರು ಘಟಕ - 3 ಧ್ವನಿ ಸಿದ್ಧಾಂತ, ಧ್ವನಿ ಪ್ರಭೇದಗಳು ಘಟಕ - 4 ರಸಸಿದ್ಧಾಂತ, ರಸಪ್ರಭೇದಗಳು ಘಟಕ - 5 ಔಚಿತ್ಯ ತತ್ವ
8	ಸಾಹಿತ್ಯ ವಿಮರ್ಶೆ	ಘಟಕ - 1 ಪಾಶ್ಚಿಮಾತ್ಯ ವಿಮರ್ಶಕರ ಪರಿಚಯ, ವಿಮರ್ಶೆಯ ಪರಿಚಯ ಘಟಕ - 2 ವಿಮರ್ಶೆಯ ಸ್ವರೂಪ ಘಟಕ - 3 ವಿಮರ್ಶೆಯ ವಿಧಾನಗಳು - 1 ಘಟಕ - 4 ವಿಮರ್ಶೆಯ ವಿಧಾನಗಳು - 2
9	ಕನ್ನಡ ಭಾಷೆಯ ಚರಿತ್ರೆ	ಘಟಕ - 1 ಭಾಷೆ : ಸ್ವರೂಪ, ಲಕ್ಷಣ, ವರ್ಗೀಕರಣ, ದ್ರಾವಿಡ ಭಾಷೆಗಳು, ದ್ರಾವಿಡ ಭಾಷಾವರ್ಗೀಕರಣ ಘಟಕ - 2 ಕನ್ನಡ ಕರ್ನಾಟಕ ಶಬ್ದ ನಿಷ್ಪತ್ತಿ, ಕನ್ನಡ ಸಂಸ್ಕೃತ - ಸಂಬಂಧ, ಪ್ರಾಂತ ಭೇದಗಳು ಇತ್ಯಾದಿ ಘಟಕ - 3 ವರ್ಣಮಾಲೆ, ನಾಮಪದ, ಲಿಂಗ, ವಚನ, ವಿಭಕ್ತಿ, ಕ್ರಿಯಾಪದ, ಗುಣವಾಚಕ, ಅವ್ಯಯ ಇತ್ಯಾದಿ ಘಟಕ - 4 ಶಬ್ದಕೋಶ ಬೆಳವಣಿಗೆ, ದೇಶ್ಯ - ಅನ್ಯದೇಶ್ಯ ಪದಗಳು
10	ವ್ಯಾಕರಣ	ಘಟಕ - 1 ಶಬ್ದಮಣಿದರ್ಪಣಂ : ವ್ಯಾಕರಣ ಪರಿಚಯ, ವರ್ಣಮಾಲೆ ಘಟಕ - 2 ಸಂಧಿಪ್ರಕರಣ, ನಾಮಪ್ರಕರಣ ಘಟಕ - 3 ಸಮಾಸ ಪ್ರಕರಣ, ತದ್ಧಿತ ಪ್ರಕರಣ ಘಟಕ - 4 ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ ಪ್ರಕರಣ

ಸಂಚಿಕೆ - 6

ಛಂದಸ್ಸು

ಘಟಕ - 1	ಲಯ, ಯತಿ, ಪ್ರಾಸ, ಪಾದ, ಮಾತ್ರಾಗಣ ಸ್ವರೂಪ, ಕನ್ನಡ ಛಂದೋಗ್ರಂಥಗಳ ಪರಿಚಯ	1
ಘಟಕ - 2	ವರ್ಣವೃತ್ತಗಳು, ಖ್ಯಾತ ಕರ್ಣಾಟಕಗಳು; ಮಾತ್ರಾವೃತ್ತಗಳು, ಕಂದ, ರಗಳೆ;ಅಂಶವೃತ್ತಗಳು	33
ಘಟಕ - 3	ಹೊಸಗನ್ನಡ ಛಂದಸ್ಸು - ೧ : ಗಣವಿನ್ಯಾಸ, ಪ್ರಯೋಗಗಳು, ಸ್ವರಾಘಾತ, ಗಣಪರಿವೃತ್ತಿ	75
ಘಟಕ - 4	ಹೊಸಗನ್ನಡ ಛಂದಸ್ಸು - ೨ : ಮಾತ್ರೆ, ಮುಡಿ, ಪದ್ಮಗಣ	85

ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

ಪ್ರೊ. ಬಿ.ಎನ್. ನಾಗರಾಜ ಭಟ್ — ಸಂಪಾದಕರು
ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು.

ಡಾ. ಡಿ.ಟಿ. ಬಸವರಾಜ್ — ಸಂಪಾದಕರು / ಸಂಯೋಜಕರು
ಅಧ್ಯಕ್ಷರು,
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು.

ಪಠ್ಯಕ್ರಮ ನಿರೂಪಕರು — ಸಂಚಿಕೆ - 6

ಡಾ. ಎ. ರಂಗಸ್ವಾಮಿ — ಘಟಕ 1 ಮತ್ತು 2
ಅಧ್ಯಾಪಕರು,
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

ಪ್ರೊ. ಬಿ.ಎನ್. ನಾಗರಾಜ ಭಟ್ — ಘಟಕ 3 ಮತ್ತು 4
ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

ಪ್ರಕಾಶಕರು

ಶ್ರೀ ವಿ. ರಾಮಣ್ಣ
ಕುಲಸಚಿವರು (ಆಡಳಿತ)

ಕ.ರಾ.ಮು.ವಿ.,ಯ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕೋರ್ಸ್‌ಗಳ ಹೆಚ್ಚಿನ ವಿವರಗಳನ್ನು
ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸಗಂಗೋತ್ರಿ, ಮೈಸೂರು - 570 006 ಇಲ್ಲಿಂದ ಪಡೆಯಬಹುದು.

ಪ್ರಿಯ ವಿದ್ಯಾರ್ಥಿ,

ಕನ್ನಡ ಎಂ.ಎ., ವ್ಯಾಸಂಗಕ್ಕಾಗಿ ನಮ್ಮ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಪಡೆದಿರುವ ತಮ್ಮನ್ನು ನಮ್ಮ ಕನ್ನಡ ವಿಭಾಗದ ಅಧ್ಯಾಪಕ ವೃಂದ ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ.

ತಮ್ಮ ಕೈಯಲ್ಲಿರುವ ಈ ಸಾಮಗ್ರಿಯು ನಮ್ಮಲ್ಲಿ 'ಮುಕ್ತ' ಪದ್ಧತಿಯಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆಂದೇ ವಿಶೇಷವಾಗಿ ಸಿದ್ಧಪಡಿಸಿದುದಾಗಿದೆ. ತಾವು ತಮ್ಮ ಸ್ವಂತ ಇಚ್ಛೆ ಮತ್ತು ಪರಿಶ್ರಮದಿಂದ ಕನ್ನಡ ಸಾಹಿತ್ಯವನ್ನು ವ್ಯಾಪಕವಾಗಿ ಓದಿಕೊಂಡಿದ್ದೀರಿ ಮತ್ತು ಅಭಿಮಾನವನ್ನೂ ಬೆಳೆಸಿಕೊಂಡಿದ್ದೀರಿ ಎಂದು ಭಾವಿಸಿದ್ದೇವೆ. ಇದನ್ನು ತುಂಬು ಮನಸ್ಸಿನಿಂದ ನಾವು ಗೌರವಿಸುತ್ತೇವೆ ಕೂಡ. ಈ ಬಗೆಯಲ್ಲಿ ತಾವು ಓದುವಿಕೆಯನ್ನು ಮಾಡಿದವರಾಗಿದ್ದರೂ ಅದು ಕೆಲವೂಮ್ಮೆ ಒಂದು ಶಿಸ್ತಿಗೆ ಒಳಪಟ್ಟ ಅಧ್ಯಯನವಾಗದೆಯೂ ಇರಬಹುದು. ಇಂತಹ ಸ್ಥಿತಿಯಿಂದ ನಿರ್ದಿಷ್ಟ ಶಿಸ್ತಿನ ಪದ್ಧತಿಗೆ ಪ್ರವೇಶ ಪಡೆದಾಗ ತಮಗೆ ಕೆಲಮಟ್ಟಿಗೆ ಶೈಕ್ಷಣಿಕ ತೊಡಕು (ಕೆಲವರಿಗಾದರೂ) ಎದುರಾಗಬಹುದು. ಈ ಕೊರತೆಯನ್ನು ನೀಗುವ ಸಲುವಾಗಿ *'ಸ್ನಾತಕೋತ್ತರ ಪದವಿ ಪೂರ್ವಸಿದ್ಧತಾ ಕಾರ್ಯಕ್ರಮ'* **[*Master's Preparatory Programe (MPP)*]** ವನ್ನು ಮುಕ್ತಪದ್ಧತಿಯ ವಿದ್ಯಾರ್ಥಿಗಳಿಗೆ ರೂಪಿಸಲಾಗಿದೆ. ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯಲ್ಲಿ ಒಬ್ಬ ವಿದ್ಯಾರ್ಥಿ (ಬಿ.ಎ., ಪದವಿಯವರೆಗೆ) ವ್ಯಾಸಂಗ ಮಾಡಿರುವ ವಸ್ತು-ವಿಷಯಗಳ ಸ್ಥೂಲ ಮಾಹಿತಿಯನ್ನು ಈ (ಎಂಪಿಪಿ) ಸಾಮಗ್ರಿಯಲ್ಲಿ ಅಳವಡಿಸಲಾಗಿದೆ. ಮುಕ್ತ ಪದ್ಧತಿಯಲ್ಲಿ ಪ್ರವೇಶ ಪಡೆದ ತಮಗೆ ಈ ಸಾಮಗ್ರಿಯು ಕನ್ನಡ ಎಂ.ಎ. ವ್ಯಾಸಂಗಕ್ಕೆ ಸೂಕ್ತ ತಳಹದಿಯನ್ನು ನೀಡುವುದರೊಂದಿಗೆ ಆತ್ಮವಿಶ್ವಾಸವನ್ನು ಮೂಡಿಸುತ್ತದೆ.

ಕನ್ನಡ ಸಾಹಿತ್ಯ ಕುರಿತ 10 ಸಂಚಿಕೆಗಳಲ್ಲಿ ಇದು 6 ನೆಯದು. ಇದರಲ್ಲಿ ಛಂದಶಾಸ್ತ್ರಕ್ಕೆ ಸಂಬಂಧಪಟ್ಟ, ಲಯ, ಯತಿ, ಪ್ರಾಸ, ಪಾದ, ಮಾತ್ರಾಗಣ ಸ್ವರೂಪ, ಕನ್ನಡ ಛಂದೋಗ್ರಂಥಗಳ ಪರಿಚಯ ; ವರ್ಣವೃತ್ತಗಳು, ಖ್ಯಾತ ಕರ್ಣಾಟಕಗಳು, ಮಾತ್ರಾವೃತ್ತಗಳು, ಕಂದ, ರಗಳೆ, ಅಂಶವೃತ್ತಗಳು ಹೊಸಗನ್ನಡ ಛಂದಸ್ಸಿಗೆ ಸಂಬಂಧಪಟ್ಟ ಗಣವಿನ್ಯಾಸ ಪ್ರಯೋಗಗಳು, ಸ್ವರಾಘಾತ, ಗಣಪರಿವೃತ್ತಿ, ಮಾತ್ರೆ, ಮುಡಿ, ಪದ್ಮಗಣ ಮೊದಲಾದ ಸಂಗತಿಗಳನ್ನು ಪ್ರಸ್ತಾಪಿಸಲಾಗಿದೆ.

ಈ ಸಾಮಗ್ರಿಯಲ್ಲಿನ ವಿಷಯಗಳನ್ನು ಸೂಕ್ಷ್ಮವಾಗಿ ತಾವು ಓದಬೇಕು, ಒಂದೊಂದು ಅಂಕಗಳಿಗೆ ಉತ್ತರಿಸಬಹುದಾದ 'ವಸ್ತುನಿಷ್ಠ' (Objective Type) ಪ್ರಶ್ನೆಗಳನ್ನು ತಾವೇ ಸಿದ್ಧಪಡಿಸಿಕೊಂಡು ಉತ್ತರಗಳನ್ನು ಕಂಡುಕೊಂಡು ಈ ಸಾಮಗ್ರಿ ಕುರಿತ ಪರೀಕ್ಷೆಗೆ ಸಿದ್ಧವಾಗಬೇಕು ಎಂದು ಸೂಚಿಸುತ್ತ; ಈ ಸಾಮಗ್ರಿಯ ಓದು ತಮಗೆ ಉದ್ದಿಷ್ಟಫಲವನ್ನು ನೀಡಲಿ ಎಂದು ಆಶಿಸುತ್ತೇವೆ.

ಅಧ್ಯಾಪಕ ವೃಂದದ ಪರವಾಗಿ

ತಮ್ಮ ವಿಶ್ವಾಸಿ

ಡಾ. ಡಿ.ಟಿ. ಬಸವರಾಜ್

ಅಧ್ಯಕ್ಷರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

ಸಂಚಿಕೆ - 6
ಛಂದಸ್ಸು

ಘಟಕ - 1
ಛಂದಸ್ಸು : ಲಯ, ಯತಿ, ಪ್ರಾಸ, ಪಾದ, ಮಾತ್ರೆ, ಗಣ ಸ್ವರೂಪ ಕನ್ನಡ ಛಂದೋಗ್ರಂಥಗಳ ಸಂಕ್ಷಿಪ್ತ ಚರಿತ್ರೆ

ಪರಿವಿಡಿ :

1.0 ಘಟಕದ ಉದ್ದೇಶ

1.1 ಪೀಠಿಕೆ

1.2 ಛಂದಸ್ಸು ಎಂದರೇನು

- 1.2.1 ಪ್ರಯೋಜನ

1.3 ಲಯ

1.4 ಯತಿ

1.5 ಪ್ರಾಸ

1.6 ಛಂದಸ್ಸಿನ ಪ್ರಮುಖ ಸಂಗತಿಗಳು ಪಾದ, ಮಾತ್ರೆ, ಗಣ

- 1.6.0 ಪಾದ
- 1.6.1 ಮಾತ್ರೆ, ಲಘು, ಗುರು, ಪ್ಲುತ
  - 1.6.1.0 ಲಘು
  - 1.6.1.1 ಗುರು
  - 1.6.1.2 ಪ್ಲುತ

1.7 ಗಣ

- 1.7.0 ವರ್ಣ ಗಣ
- 1.7.1 ಮಾತ್ರಾಗಣ
- 1.7.2 ಅಂಶ ಗಣ
  - 1.7.2.0 ಬ್ರಹ್ಮ ಗಣ
  - 1.7.2.1 ವಿಷ್ಣು ಗಣ
  - 1.7.2.2 ರುದ್ರ ಗಣ

1.8 ಕನ್ನಡ ಛಂದೋಗ್ರಂಥಗಳ ಸಂಕ್ಷಿಪ್ತ ಪರಿಚಯ

- 1.8.1 ಕವಿರಾಜಮಾರ್ಗ
- 1.8.2 ಗುಣಗಾಂಕಿಯಂ
- 1.8.3 ಛಂದೋಂಬುಧಿ
- 1.8.4 ಛಂದೋವಿಚಿತಿ

1.8.4 ಕವಿಜಿಹ್ವಾಬಂಧನಂ
1.8.5 ಛಂದಸ್ಸಾರ
1.8.6 ಷಟ್ಪ್ರತ್ಯಯ
1.8.7 ವೃತ್ತರತ್ನಾಕರ ಟೀಕೆ
1.8.8 ನಂದಿಛಂದಸ್ಸು
1.8.9 ಇತರೆ ಛಂದೋಗ್ರಂಥಗಳು
1.9 ಸ್ವಪರೀಕ್ಷಾ ಪ್ರಶ್ನೆಗಳು
1.10 ಸಾರಾಂಶ
1.11 ಸ್ವಪರೀಕ್ಷಾ ಪ್ರಶ್ನೆಗಳಿಗೆ ಉತ್ತರ
1.12 ಪರಾಮರ್ಶನ ಗ್ರಂಥಗಳು

1.0. ಘಟಕದ ಉದ್ದೇಶ

- ಈ ಘಟಕದ ಅಭ್ಯಾಸದಿಂದ ನೀವು ಛಂದಶ್ಶಾಸ್ತ್ರದ ಪರಿಚಯ ಮಾಡಿಕೊಳ್ಳುವಿರಿ.
- ಛಂದಸ್ಸಿನ ಉಗಮ, ನಿಷ್ಪತ್ತಿ ಮತ್ತು ಛಂದಸ್ಸಿನ ಅಧ್ಯಯನ ಅವಶ್ಯಕತೆ ಪ್ರಯೋಜನ ಮುಂತಾದ ವಿಚಾರಗಳ ಬಗ್ಗೆ ಸಾಮಾನ್ಯ ಪರಿಜ್ಞಾನವನ್ನು ಹೊಂದುವಿರಿ.
- ಲಯ, ಯತಿ, ಪ್ರಾಸ ಈ ಸಂಗತಿಗಳ ಬಗ್ಗೆ ತಿಳಿಯುವ ಸಾಮರ್ಥ್ಯ ಪಡೆಯುವಿರಿ.
- ಗಣ, ಮಾತ್ರೆ, ಲಘು, ಗುರು, ಪ್ಲುತ ಇವುಗಳ ಸಾಮಾನ್ಯ ಸ್ವರೂಪದ ಬಗ್ಗೆ ತಿಳಿವಳಿಕೆಯನ್ನು ಹೊಂದುವಿರಿ.
- ಲಘು, ಗುರು ವಿನ್ಯಾಸಗಳ ಪರಿಚಯದ ಹಿನ್ನೆಲೆಯಲ್ಲಿ ಪದ್ಯವೊಂದಕ್ಕೆ ಪ್ರಸ್ತಾರ ಹಾಕುವ ಜ್ಞಾನವನ್ನು ಸಂಪಾದಿಸುವಿರಿ.
- ವರ್ಣಗಣ, ಮಾತ್ರಾಗಣ, ಅಂಶಗಣಗಳ ಪರಿಚಯ ಮಾಡಿಕೊಳ್ಳುವಿರಿ.
- ಕನ್ನಡ ಛಂದೋ ಗ್ರಂಥಗಳ ಇತಿಹಾಸವನ್ನು ಸಂಕ್ಷಿಪ್ತವಾಗಿ ಗ್ರಹಿಸುವ ಸಾಮರ್ಥ್ಯ ಪಡೆಯುವಿರಿ.
- ಛಂದೋಶಾಸ್ತ್ರದ ಪ್ರವೇಶ ಹಾಗೂ ಪರಿಚಯಾತ್ಮಕ ಸಂಗತಿಗಳೊಂದಿಗೆ ಆ ಶಾಸ್ತ್ರದ ಪ್ರಾಥಮಿಕ ಅಂಶಗಳನ್ನು ಗುರುತಿಸಿ ವಿವರಿಸಲು ಶಕ್ತರಾಗುವಿರಿ.

1.1. ಪೀಠಿಕೆ

ಭಾಷೆಗೆ ವ್ಯಾಕರಣ ಹೇಗೋ ಹಾಗೆ ಕಾವ್ಯಕ್ಕೆ ಛಂದಸ್ಸು ಅಗತ್ಯ ಮತ್ತು ಅನಿವಾರ್ಯ. ವ್ಯಾಕರಣ ಶಾಸ್ತ್ರ ಗದ್ಯ ಪದ್ಯಗಳೆರಡಕ್ಕೂ ಸಂಬಂಧಿಸಿದ ವ್ಯವಸ್ಥಿತ ನಿಯಮಾವಳಿ. ಆದರೆ ಛಂದಸ್ಸು ಕೇವಲ ಪದ್ಯಗಳಿಗೆ ಮಾತ್ರ ಸೀಮಿತವಾದ ಶಾಸ್ತ್ರ. ಛಂದಸ್ಸು ಇಂದು ನಿನ್ನೆಯ ಶಾಸ್ತ್ರವಾಗಿ ಕಂಡುಬರುವುದಿಲ್ಲ. ಅದು ಬಹಳ ಪ್ರಾಚೀನವಾದ ಶಾಸ್ತ್ರ. ಶಿಕ್ಷೆ, ಛಂದಸ್ಸು, ವ್ಯಾಕರಣ, ನಿರುಕ್ತ, ಜ್ಯೋತಿಷ, ಕಲ್ಪ ಇವು ಆರು ವೇದಾಂಗಗಳೆಂದು ಪ್ರಸಿದ್ಧಿ ಪಡೆದಿವೆ. ಆದ್ದರಿಂದ ವೇದಾಭ್ಯಾಸಿಗಳಿಗೆ ಛಂದಸ್ಸಿನ ಪರಿಜ್ಞಾನ ಅತ್ಯಗತ್ಯವಾಗಿತ್ತು. ಅಂದಮೇಲೆ ಅಂದಿನಿಂದ ಇಂದಿನವರೆಗೂ ಛಂದಸ್ಸು ಒಂದು ಅಧ್ಯಯನ ಯೋಗ್ಯ ಶಾಸ್ತ್ರ ಸಂಗತಿಯಾಗಿ ಬೆಳೆದುಕೊಂಡು ಬಂದಿದೆ. ವ್ಯಾಪಕ ವಿಷಯಗಳನ್ನು ಸಂಗ್ರಹಿಸಿ ರಸವತ್ತಾದ ಅಂಶವನ್ನು ಸ್ವಾರಸ್ಯ ಮಾತುಗಳಿಂದ ಮನೋಹರವಾಗಿ ತಿಳಿಸಲು ಹಾಗೂ ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಲು ಪದ್ಯ ಬಹಳ ಅನುಕೂಲ. ಅಷ್ಟೇ ಅಲ್ಲದೆ, ರಾಗವಾಗಿ ಹಾಡಿ ತಾವೂ ಆನಂದ ಪಡಬಹುದು, ಇತರರನ್ನು ಆನಂದ ಪಡಿಸಬಹುದು. ಈ ತೆರನಾದ ಪದ್ಯಗಳ ರಚನಾಕ್ರಮದ ಬಗೆಗೆ ಲಕ್ಷಣ ಹಾಗೂ ನಿಯಮಗಳನ್ನು ಭಾಷಿಕವಾಗಿ ವಿವರಿಸುವುದೇ ಛಂದಶ್ಶಾಸ್ತ್ರ.

1.2 ಛಂದಸ್ಸು ಎಂದರೇನು ?

ವಿದ್ಯಾರ್ಥಿಮಿತ್ರರೆ, ನೀವೆಲ್ಲ ತಿಳಿದಿರುವ ಹಾಗೆ ಛಂದಸ್ಸು ಕಾವ್ಯವನ್ನು ಕುರಿತ ಶಾಸ್ತ್ರ. ಲಯದ ವ್ಯವಸ್ಥಿತ ರೂಪವೇ ಛಂದಸ್ಸು ಎಂದು ಹೇಳಿರುವುದರಿಂದ ಛಂದಸ್ಸು ಕಾವ್ಯ ಪ್ರಕಾರಕ್ಕೆ ಸಂಬಂಧಿಸಿದ್ದು ಎನ್ನುವುದರಲ್ಲಿ ಎರಡು ಮಾತಿಲ್ಲ. ಅಂದರೆ ಕಾವ್ಯ ನಿರ್ಮಿತಿಗೆ ಪೂರಕವಾಗುವ ಶಾಸ್ತ್ರವನ್ನು ಸಾಮಾನ್ಯವಾಗಿ ಛಂದಶ್ಶಾಸ್ತ್ರವೆಂದು ಕರೆಯುತ್ತೇವೆ. ಕಾವ್ಯದಲ್ಲಿ ಬಳಕೆಯಾಗಿರುವ ಪದ್ಯಪಾದಗಳ ಲಯಗಳನ್ನು ವಿನ್ಯಾಸವನ್ನು ತಿಳಿಯಲು ಬಳಸುವ ಮಾನದಂಡವೇ ಛಂದಸ್ಸು.

ಛಂದಸ್ಸು ಎಂಬ ಶಬ್ದದ ವ್ಯುತ್ಪತ್ತಿಯನ್ನು "ಛಂದ್" ಮತ್ತು "ಛದ್" ಎಂಬ ಎರಡು ಧಾತುಗಳಿಂದ ಸಾಧಿಸಲಾಗುತ್ತದೆ. ಆದರೂ ಈ ಎರಡು ಧಾತುಗಳ ಅರ್ಥ ನಿಷ್ಪನ್ನವೂ ಹೆಚ್ಚು ಕಡಿಮೆ ಒಂದೇ ಆಗಿದೆ ಎನ್ನುವುದನ್ನು ನೀವು ಗಮನಿಸಬೇಕು. "ಛಂದ್" ಮತ್ತು "ಛದ್" ಎಂದರೆ 'ಅಚ್ಛಾದಿಸು' ಅಥವಾ 'ಹೊದಿಸು' ಎಂದು ಅರ್ಥವಾಗುತ್ತದೆ.

ಪದ್ಯವನ್ನು ಗದ್ಯದಿಂದ ಬೇರ್ಪಡಿಸುವುದೇ ಛಂದಸ್ಸು . ಹಾಗಾಗಿ ಛಂದಸ್ಸನ್ನು ಕಾವ್ಯದ ಹೊದಿಕೆ ಅಥವಾ ಅದರ ರೂಪ ಇಲ್ಲವೇ ಮೇಲ್ಪದರ ಎನ್ನಬಹುದು. ಕಾವ್ಯಕ್ಕೆ ಸಹಜ ಸೌಂದರ್ಯ ಈ ಛಂದಸ್ಸಿನಿಂದ ಲಭಿಸುತ್ತದೆ. ಛಂದ ಎಂದರೆ ಸುಂದರ; ಮನೋಹರ; ಮನಸ್ಸಿಗೆ ಹಿಡಿಸುವಂತಹದ್ದು. ಕವಿತೆಗಳ ಸಾಲು ಮತ್ತು ಅದರ ನುಡಿಗಳನ್ನು ಕ್ರಮವರಿತ ನಿಟ್ಟಿನಲ್ಲಿ ಕೋದರೆ ಅದಕ್ಕೊಂದು ಸೌಂದರ್ಯ ಬರುತ್ತದೆ ಮತ್ತು ಅರ್ಥವಂತಿಕೆ ಹೆಚ್ಚಾಗುತ್ತದೆ. ಆದ್ದರಿಂದಲೇ "ಛಂದಸ್ಸೆಂದರೆ ಕಾವ್ಯಕ್ಕೆ ಒಂದು ವಾತಾವರಣ,ಒಂದು ಅಚ್ಛಾದನವಿದ್ದಂತೆ " ಎಂಬ ಅಭಿಪ್ರಾಯವನ್ನು ವಿದ್ವಾಂಸರು ವ್ಯಕ್ತಪಡಿಸಿರುವುದು.

"ಮಾತ್ರಾಕ್ಷರಗಳ ನಿಯಮದಿಂದ ಕೂಡಿದ ವಾಕ್ಕು ಛಂದಸ್ಸು; ಅಕ್ಷರ ಪರಿಮಿತಿಯೇ ಛಂದಸ್ಸು" ಎಂದು ಪದ್ಯ ರಚನೆಯ ವಿಧಿಗೆ ಅನ್ವಯಿಸಿ ಸಂಕೋಚವಾದ ಅರ್ಥದಲ್ಲಿ ಈ ಮಾತನ್ನು ಬಳಸಿರುವುದೂ ಉಂಟು. ಆದರೆ "ಚದಿ ಆಹ್ಲಾದೇ " ಎಂದರೆ ಆಹ್ಲಾದವನ್ನುಂಟು ಮಾಡುವುದು ಯಾವುದೋ ಅದು ಛಂದಸ್ಸು ಎನ್ನುವ ಮಾತೇ ಛಂದಸ್ಸಿನ ಸ್ವರೂಪಕ್ಕೆ ಹೆಚ್ಚು ಅನ್ವಯವಾಗುತ್ತದೆ. ಸ್ವರ ಸಂಯೋಜನೆಗಳ ನಿಯತವಾದ ಆವರ್ತನೆಯಿಂದ ಉಂಟಾಗುವ ಆಂದೋಲನದಿಂದ ಛಂದಸ್ಸು ನಿಜವಾಗಿಯೂ ಆನಂದವನ್ನು ಉಂಟುಮಾಡುತ್ತದೆ.

ಛಂದಸ್ಸು ಕಾವ್ಯದ ಪ್ರಾಣ. ಕಾವ್ಯಕ್ಕೆ ಚಲನೆಯುಂಟಾಗುವುದು ಛಂದಸ್ಸಿನಿಂದಲೇ. ಲಯವು ಛಂದಸ್ಸಿನ ಜೀವ ಜೀವಾಳ . ಛಂದಸ್ಸಿನ ನಿರ್ದಿಷ್ಟ ಬಂಧದ ಲಕ್ಷಣ ಅದು ಯಾವುದೇ ಇರಲಿ ಅದು ಲಯಾನುಸಾರಿಯಾಗಿಯೇ ಸಾಗುತ್ತದೆ, ಅಥವಾ ಸಾಗಿರುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಛಂದಸ್ಸು ಕಾವ್ಯದ ಸಹಜ ಸುಂದರ ಸ್ವರಾಂದೋಲನ. ಅದು ಪದ್ಯದ ಪ್ರಾಣ. ಕಾವ್ಯಕ್ಕೆ ಚಲನೆಯುಂಟಾಗುವುದು ಛಂದದಿಂದಲೇ. ಕಾವ್ಯದೇವಿಯ ಅಂತರಂಗವು ತರಂಗಿತವಾದಾಗ ಅವಳ ಅಂಗವು ಛಂದೋಭಂಗಿಯಲ್ಲಿ ಚಲಿಸುತ್ತದೆ. ಭಾಷೆ ಹೇಗೋ ಹಾಗೆ ಛಂದಸ್ಸು ಕಾವ್ಯ ಕನ್ನಿಕೆಯ ಮೈಯೂ ಅಲ್ಲ. ಭಾವ ಹೇಗೋ ಹಾಗೆ ಅವಳ ಆತ್ಮವೂ ಅಲ್ಲ. ಅದು ಅವಳ ಆತ್ಮಶ್ರೀಯನ್ನು

ಅಂಗಾಂಗಳ ಚಲನೆಯಿಂದ ಸುಳುಹುಗಾಣಿಸುವ ವಿಧಾನ ಎಂಬ ಡಿ.ಎಸ್. ಕರ್ಕಿಯವರ ಮಾತುಗಳಿಂದ ಛಂದಸ್ಸಿನ ಮಹತ್ತ್ವವನ್ನು ಮನಗಾಣಬಹುದು.

1.2.1 ಪ್ರಯೋಜನ

ಕಾವ್ಯ ನಿರ್ಮಿತಿಗೆ ಪೂರಕವಾದ ಶಾಸ್ತ್ರವನ್ನು ಛಂದಶ್ಶಾಸ್ತ್ರ ಎಂದು ಕರೆಯುತ್ತೇವೆ ಎಂದು ಈ ಹಿಂದೆ ಹೇಳಿದ ಮಾತು ನಿಮಗೆ ನೆನಪಿರಬೇಕು ಅಲ್ಲವೇ. ಅಂದರೆ ಕಾವ್ಯ ರಚನೆಯಲ್ಲಿ ತೊಡಗುವ ಕವಿಗೆ ಛಂದಸ್ಸಿನ ಪರಿಜ್ಞಾನ ಅತ್ಯಗತ್ಯ ಎಂದಂತಾಯಿತು. ಆದ್ದರಿಂದಲೇ ನಾಗವರ್ಮ ಛಂದಸ್ಸನ್ನು "ಕವಿಯ ಕಣ್ಣಿನ ಬೆಳಕು" ಎಂದಿದ್ದಾನೆ . ಅಲ್ಲದೇ ಛಂದಸ್ಸನ್ನು ತಿಳಿಯದೆ ಕಾವ್ಯರಚನೆಗೆ ತೊಡಗುವ ಕವಿಯನ್ನು ಆತ ಕಣ್ಣುಕಾಣದ ಕುಕವಿ (ಛಂದಮನರಿಯದೆ ಕವಿತೆಯ ದಂದುಗದೊಳ್ ತೊಡರ್ದು ಸುಳಿವ ಕುಕವಿಯೆ ಕುರುಡಂ) ಎಂದು ಜರಿದಿದ್ದಾನೆ. ಕಾವ್ಯವನ್ನು ಕಟ್ಟುವ ಜಾಣ್ಮೆಯಲ್ಲಿ ಛಂದಸ್ಸು ಎದ್ದು ಕಾಣುವ ಅಂಶವೆಂದೂ " ಕವಿರಾಜಮಾರ್ಗ" ದ ಕರ್ತೃ ಶ್ರೀ ವಿಜಯ ಪ್ರತಿಪಾದಿಸಿದ್ದಾನೆ. ಛಂದಸ್ಸು ಕೇವಲ ಜಾಣ್ಮೆಯಲ್ಲ. ಮಾತಿಗೆ ಬಲ್ಮೆಯುಂಟಾಗಬೇಕಾದರೆ ಅದು ಅವಶ್ಯಕವೂ ಹೌದು ಎಂಬುದನ್ನು ಕವಿಕಾಮನು ತನ್ನ "ಶೃಂಗಾರ ರತ್ನಾಕರ" ಕೃತಿಯಲ್ಲಿ ಹೇಳಿದ್ದಾನೆ . ಈ ಮಾತುಗಳನ್ನು ಗಮನಿಸಿದಾಗ ನಿಮಗೆ ತಿಳಿದು ಬರುವ ಸಂಗತಿಯೇನೆಂದರೆ ಛಂದಸ್ಸಿನ ಪರಿಜ್ಞಾನ ಕವಿಗೆ ಹೇಗೆ ಅವಶ್ಯಕ ಎಂದು ಹೇಳಿದ್ದಾರೋ ಹಾಗೆಯೇ ಆ ಕವಿಯ ಕಾವ್ಯವನ್ನು ಓದುವ, ವಿಮರ್ಶಿಸುವ, ಸಹೃದಯರಿಗೂ ಇರಬೇಕಾದುದ್ದು ಅತ್ಯಗತ್ಯ ಎಂಬುದು ಮನದಟ್ಟಾಗಿರಲಿಕ್ಕೂ ಸಾಕು.

ಒಂದು ಕಾವ್ಯವನ್ನು ಓದಿ ವಿಮರ್ಶಿಸಬೇಕಾದರೆ, ಆ ಒಂದು ಕೃತಿ ಯಾವ ರೂಪ ಅಥವಾ ಬಂಧದಲ್ಲಿದೆ ಎನ್ನುವುದು ಮುಖ್ಯವಾಗುತ್ತದೆ. ಆ ಸಂಗತಿಯನ್ನರಿಯದೆ ಓದುವ, ವಿಮರ್ಶಿಸುವ ಪ್ರವೃತ್ತಿಗೆ ಜೋತುಬಿದ್ದರೆ ಕವಿ ಕೃತಿಗೆ ಅಪಚಾರ ಎಸಗಿದಂತೆ ಆಗುತ್ತದೆ. ಅಲ್ಲದೆ ಕೃತಿಯೊಂದು ಬಿಟ್ಟುಕೊಡಬಹುದಾದ ಸತ್ಯವನ್ನು ಗ್ರಹಿಸುವಲ್ಲಿಯೂ ವಿಫಲರಾಗುವುದು ಸಹಜವೇ . ಈ ದೃಷ್ಟಿಯಿಂದ ನೋಡಿದಾಗ ಕಾವ್ಯಾಭ್ಯಾಸಿಗಳಿಗೆ ಛಂದಸ್ಸಿನ ಪರಿಜ್ಞಾನ ಹೆಚ್ಚು ಅತ್ಯವಶ್ಯಕ ಎನಿಸುತ್ತದೆ. ಹೀಗೆ ಹೇಳುವಾಗಲೂ ಒಂದು ಅಂಶವನ್ನು ನೆನಪಿಟ್ಟುಕೊಳ್ಳುವುದು ಒಳ್ಳೆಯದು. "ಛಂದಸ್ಸು ಕಾವ್ಯದ ಪ್ರಾಣ. ಕಾವ್ಯಕ್ಕೆ ಚಲನೆಯುಂಟಾಗುವುದು ಛಂದಸ್ಸಿನಿಂದಲೆ" ಎನ್ನುವುದೇನೋ ನಿಜ. ಛಂದಸ್ಸು ಕವಿಪ್ರತಿಭೆಯ ಸಹಜ ಬೆಳಕಿನಲ್ಲಿ ಮೂಡಿ ಬಂದಾಗ ಇದಕ್ಕೇನೂ ಬಾಧಕವಿಲ್ಲ. ಆದರೆ ಪಾಂಡಿತ್ಯದ ನೆರಳಿನಲ್ಲಿ ಸಿಕ್ಕಿ ಅಸಹಜತೆಯ ಸೋಂಕು ತಗುಲಿದರೆ ಕಾವ್ಯದಲ್ಲಿ ಅಸಹಜತೆ ಗೋಚರಿಸಿ ಛಂದಸ್ಸು ಕಾವ್ಯಕ್ಕೆ ಮಾರಕವೆನಿಸುವ ಪರಿಸ್ಥಿತಿಯೂ ತಲೆದೋರುವ ಸಂದರ್ಭವೂ ಇಲ್ಲದಿಲ್ಲ. ಅಂದರೆ: ಕಾವ್ಯ ಸೌಂದರ್ಯ ವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸುವ ಛಂದಸ್ಸನ್ನು ಕವಿ ಉದ್ದೇಶಪೂರ್ವಕವಾಗಿಯೇ ತರಲು ಪ್ರಯತ್ನಿಸುವುದರಿಂದ ಕಾವ್ಯದಲ್ಲಿ ಅಸಹಜತೆ ಎದ್ದು ಕಾಣುವುದು. ಇಂತಹ ಸಂದರ್ಭಗಳಲ್ಲಿ ಛಂದಸ್ಸು ಕಾವ್ಯ ಸೌಂದರ್ಯವರ್ಧನೆಯನ್ನು ಇಮ್ಮಡಿಸುವ ಬದಲಾಗಿ ಮಾರಕವಾಗಿ [illegible]ಬಹುದು. ಹಾಗೆಂದ ಮಾತ್ರಕ್ಕೆ ಛಂದಸ್ಸಿನ [illegible] ಬಂದ ಕಾವ್ಯಗಳೆಲ್ಲ ಉತ್ತಮ ಕಾವ್ಯಗಳಾಗಲು ಸಾಧ್ಯವಿದೆ ಎಂದರ್ಥವಲ್ಲ. ಛಂದಸ್ಸು ಕಾವ್ಯಕ್ಕೆ ಸಹಜ ಶರೀರವಾಗಿರಬೇಕು. ಏಕೆಂದರೆ ಕಾವ್ಯಕ್ಕೆ ಛಂದಸ್ಸಿನಿಂದ ಹೃದ್ಯತೆಯುಂಟಾಗುತ್ತದೆ. ಬಿಟ್ಟಿನಲ್ಲಿ ಛಂದಸ್ಸಿನಿಂದಾಗುವ ಪ್ರಯೋಜನಗಳನ್ನು [illegible]

1. ಕವಿ ಹೃದಯವು ಕಂಡುಕೊಂಡಿರುವ ಅತಿ ಸೂಕ್ಷ್ಮವೂ, ವ್ಯಾಪಕವೂ ಆವೇಶಯುತವೂ ಆದ ಅನುಭವ ವಿಶೇಷಗಳನ್ನು ಅತಿ ಸಂಕ್ಷಿಪ್ತವಾಗಿ ಸಮರ್ಥವಾಗಿ ಅಭಿವ್ಯಕ್ತಪಡಿಸಿ ಸಹೃದಯರಿಗೆ ಹೃದಯಸಂವೇದನೆಯಾಗುವಂತೆ ಮಾಡುವುದಕ್ಕೆ ಛಂದಸ್ಸು ಅತ್ಯಂತ ಸಮರ್ಥವಾದ ಮಾಧ್ಯಮವಾಗಿದೆ.

2. ಉಕ್ಕಂದವೂ ಅತಿಶಯವೂ ಆಗಿ ಹರಿಯುವ ಭಾವಗಳನ್ನು ನಿಯತವಾದ ಚೌಕಟ್ಟಿನಲ್ಲಿ ಅಡಕ ಮಾಡಲು ಈ ಮಾಧ್ಯಮ ಸಹಕಾರಿ ಎನ್ನಿಸಿದೆ.

3. ಕಾವ್ಯದಲ್ಲಿ ಗೇಯಾಂಶವನ್ನೂ ನಾಟ್ಯಾಂಶವನ್ನೂ ತರುವುದಕ್ಕೆ ಛಂದಸ್ಸು ಸಹಕಾರಿಯಾಗಿದೆ. ವಿವಿಧ ಲಯಗತಿಯಿಂದ ಕಾವ್ಯದಲ್ಲಿನ ಏಕತಾನತೆಯನ್ನು ನೀಗಿ ಆನಂದಾತಿ ವಿಸ್ಮಯಗಳನ್ನು ಉಂಟುಮಾಡುತ್ತದೆ.

4. ಛಂದಸ್ಸಿನ ಬಿಗಿ ಮತ್ತು ಅಡಕ ಗುಣಗಳಿಂದಾಗಿ ಶೈಲಿಗೊಂದು ವಿಶಿಷ್ಟತೆ ಪ್ರಾಪ್ತವಾಗುತ್ತದೆ. ಪದಗಳಲ್ಲಿ ಮತ್ತು ಅಭಿವ್ಯಕ್ತಿಯಲ್ಲಿ ಒಂದು ಆಯ್ಕೆ ಮತ್ತು ಅಚ್ಚುಕಟ್ಟು ಸಾಧಿತವಾಗುತ್ತದೆ. ತನ್ಮೂಲಕವಾಗಿ ಮನುಷ್ಯನ ಉತ್ಕೃಷ್ಟವಾದ ಉಕ್ತಿಯು ಸಾರವನ್ನು ಹಿಡಿದಿಟ್ಟಂತಾಗುತ್ತದೆ.

5. ಸುಲಭ ಸ್ಮರಣೆಗೆ ಈ ಮಾಧ್ಯಮ ತುಂಬಾ ಸಹಕಾರಿ. ಅಂದರೆ ಪ್ರಾಚೀನ ಅರ್ವಾಚೀನ ಕಾವ್ಯಗಳನ್ನು ಛಂದಸ್ಸಿನ ನೆರವಿನಿದ ಸುಲಭವಾಗಿ ನೆನಪಿಟ್ಟುಕೊಳ್ಳಬಹುದಾಗಿದೆ.

ಒಟ್ಟಿನಲ್ಲಿ ಛಂದಸ್ಸಿನಿಂದ ನಾವು ಪದ್ಯಗಳನ್ನು ಸುಲಭವಾಗಿ ನೆನಪಿಟ್ಟುಕೊಳ್ಳಬಹುದು. ಭಾವ, ನಾದ, ಲಯಗಳ ಸಮ್ಮಿಳನದಿಂದಾಗಿ ಶೈಲಿಗೊಂದು ನಾವೀನ್ಯತೆ ಸಿದ್ಧಿಸುತ್ತದೆ. ತನ್ಮೂಲಕ ಕಾವ್ಯಕ್ಕೆ ಒಂದು ಅಭೌತಿಕ ಆವರಣ ನಿರ್ಮಾಣಗೊಳ್ಳುತ್ತದೆ. ಹಾಗಾಗಿ ಗದ್ಯಕ್ಕಿಂತ ಪದ್ಯವನ್ನು ಹೃದ್ಯವಾಗಿಸುವತ್ತ, ಜೀವ ತುಂಬುವತ್ತ ಛಂದಸಸಿನ ಕೈವಾಡ ಅಮೋಘವಾದುದ್ದಾಗುತ್ತದೆ.

ಛಂದಸ್ಸಿನ ಸಂಬಂಧದಲ್ಲಿ ಎರಡು ದೃಷ್ಟಿಗಳನ್ನು ಕಾಣುತ್ತೇವೆ. ಒಂದು ಸೌಂದರ್ಯ ದೃಷ್ಟಿ: ಇನ್ನೊಂದು ಪ್ರಯೋಜನ ದೃಷ್ಟಿ. ಛಂದಸ್ಸು ಕಾವ್ಯದ ಸೌಂದರ್ಯಕ್ಕೆ ಕಳೆಕಟ್ಟಿ ಆನಂದವನ್ನುಂಟುಮಾಡುತ್ತದೆ ಎಂಬುದು ಸೌಂದರ್ಯ ದೃಷ್ಟಿ. ಕಾವ್ಯಕ್ಕೆ ಪ್ರವಹಿಸಲು ನೆರವಾಗುತ್ತದೆ ಅಥವಾ ಜ್ಞಾಪಕಕ್ಕೆ ಅನುಕೂಲವಾಗುತ್ತದೆ ಎಂಬುದು ಪ್ರಯೋಜನ ದೃಷ್ಟಿ . ಕಾವ್ಯವು ಸಂಗೀತ ನೃತ್ಯ ಕಲೆಗಳ ಸಂಪರ್ಕದಿಂದ ಕಲೆಯ ಛಾಯೆಯನ್ನುಳ್ಳದೆಂಬುದು ಸೌಂದರ್ಯ ದೃಷ್ಟಿ. ಮಾತ್ರೆ ಗಣ, ಚರಣ, ಯತಿ ಪ್ರಾಸಗಳ ಲೆಕ್ಕಾಚಾರದಿಂದೊಡಗೂಡಿದ ಶಾಸ್ತ್ರ ಎಂಬುದು ಪ್ರಯೋಜನ ದೃಷ್ಟಿ. ಇವೆರಡೂ ದೃಷ್ಟಿಗಳು ಬೇರೆಬೇರೆಯಲ್ಲ. ಒಂದಕ್ಕೊಂದು ಪರಸ್ಪರ ಪೂರಕವಾದವುಗಳು. ಏಕೆಂದರೆ ಸೌಂದರ್ಯವು ನಿರುಪಯೋಗವಾದುದಲ್ಲ. ಬಲ್ಲವರಿಗೆ ಸೌಂದರ್ಯದಲ್ಲಿ ಪ್ರಯೋಜನವುಂಟು. ಪ್ರಯೋಜನದಲ್ಲಿ ಸೌಂದರ್ಯ ಲೀನವಾಗಬಹುದು.

1.3. ಲಯ

ಇಲ್ಲಿಯವರೆಗೆ ನಾವು ಛಂದಸ್ಸಿನ ಉಗಮ ನಿಷ್ಪತ್ತಿ ಹಾಗೂ ಅದರ ಪ್ರಯೋಜನಗಳ ಬಗ್ಗೆ ತಿಳಿದುಕೊಂಡೆವು. ಈಗ ಛಂದಸ್ಸಿನ ಮುಖ್ಯ ಅಂಗವಾದ ಲಯದ ಬಗ್ಗೆ ತುಸು ಪರಿಚಯ ಮಾಡಿಕೊಳ್ಳೋಣ. ಛಂದಸ್ಸಿನ ಅಂದರೆ ಬಂಧದ ಲಕ್ಷಣ ಏನೇ ಇದ್ದರೂ ಅಲ್ಲಿ ಯಾವುದೋ ಒಂದು ಲಯದ ಅನುಸರಣೆ ಕಾಣುತ್ತದೆ. ಯಾವುದೋ ಒಂದು ಲಯವನ್ನು ಚೌಕಟ್ಟಾಗಿಟ್ಟುಕೊಂಡು ಛಂದಸ್ಸು ಬಗೆ ಬಗೆಯಾಗಿ ರೂಪು ತಳೆಯಬಹುದು . ಕೆಲವೊಮ್ಮೆ ಸೂಕ್ಷ್ಮವಾದ ವ್ಯತ್ಯಾಸಗಳಿಂದ ಹೊಂದಿಕೆಗಳಿಂದ ಲಯದಲ್ಲಿ ವೈವಿಧ್ಯತೆ ಸಾದಿತವಾದರೆ ಪದ್ಯದ ಸೊಗಸು ಹೆಚ್ಚುತ್ತದೆ. ಏಕತಾನತೆ ಹೋಗುತ್ತದೆ . ಅಂದರೆ : ಭಾವ ದೃಷ್ಟಿಗಳ ಕವಿ ಸಂದರ್ಭಕ್ಕೆ ತಕ್ಕಂತೆ ಪದಗಳನ್ನು ಖಚಿತ ಮಾತ್ರೆಗಳ ಚೌಕಟ್ಟಿಗೆ ಒಳಪಡಿಸುವುದರಿಂದ ವಿವಿಧ ಲಯಚೌಕಟ್ಟು ಏರ್ಪಟ್ಟು ಭಾವೋಜ್ವಲಕ್ಕೆ ಪೂರಕವಾಗುತ್ತದೆ. ಇಂಥ ಭಾವೋಜ್ವಲಕ್ಕೆ ಅನಿವಾರ್ಯವಾದ ಈ ಲಯದ ಮೇಲಿನ ಹಿಡಿತ ಸಮರ್ಥನಾದ ಪ್ರತಿಭಾ ಪೂರ್ಣ ಕವಿಯಿಂದ ಮಾತ್ರ ಸಾಧ್ಯವಾಗುತ್ತದೆ. ಕವಿಯಾದವನ ಅನುಭವ ಪ್ರಕಟಣೆ ಅರ್ಥಯುಕ್ತವಾದ ಧ್ವನಿಗಳ ರೂಪದಲ್ಲಿಯೂ ಆಗುವುದು ಸಾಧ್ಯವಾದುದರಿಂದ, ಧ್ವನಿಗಳು ಕವಿ ಹೃದಯದ ಮಿಡಿತವನ್ನು ಉಲ್ಲಾಸದ ಉನ್ಮೇಷವನ್ನು ಅವಲಂಬಿಸಿ ಹೊಮ್ಮಿದ ರಸಲಿಪ್ತ ಭಾವನೆಗಳ ಭಾರದಿಂದ ವಿಶಿಷ್ಟವಾದ ರೀತಿಯಲ್ಲಿ ಏರುತ್ತಾ ಇಳಿಯುತ್ತಾ ಸರಣಿಗೊಂಡು ಮುನ್ನಡೆಯುತ್ತವೆ. ಹಾಗೆಯೇ ಮುನ್ನಡೆಯುವ ಧ್ವನಿತರಂಗಗಳ ಏರಿಳಿತಗಳನ್ನು ಎಂದರೆ ಒಂದಕ್ಕೊಂದು ಇರುವ ವಿವಿಧ ಕಾಲ ಪ್ರಮಾಣದ ಅಂತರವನ್ನು "ಲಯ" ಎಂದು ಹೇಳಬಹುದು. ಇನ್ನು ಸರಳವಾಗಿ ನಿಮಗೆ ತಿಳಿಸಬೇಕೆಂದರೆ ಲಘು ಗುರುಗಳಿಂದಾದ ಕೆಲವು ಮಾತ್ರ ಘಟಕಗಳ ಗುಂಪಿನಿಂದ ಹೊರಡುವ ವಿಶಿಷ್ಟವಾದ ನಾದವನ್ನೆ "ಲಯ" ಎಂದು ಕರೆಯುತ್ತಾರೆ.

"ಪದ್ಯದ ಪ್ರಪಂಚದಲ್ಲಿ ಲಯದ ಸ್ಥಾನ ಗಣ್ಯವಾದದ್ದು ; ಲಯದ ಘಟಕಗಳು ರೂಪಿಸುವ ಗಣ ಘಟಕಗಳು ಕವಿಯ ಭಾವದ ಏರಿಳಿತಕ್ಕೆ ತಕ್ಕಂತೆ ಏರುತ್ತಾ ಇಳಿಯುತ್ತಾ ಹೋಗುತ್ತವೆ. ಈ ಗಣ ಘಟಕಗಳು ಒಂದು ಗೊತ್ತಾದ ಪ್ರಮಾಣದಲ್ಲಿ ಬಂದು ಪದ್ಯ ಪಾದವನ್ನು ರೂಪಿಸುತ್ತವೆ. ಗಣಗಳ ನಡೆಯ ಕ್ರಮಾನುಗತವಾದ ಪರಂಪರೆಯಿಂದ ಒದಗುವ ಹಿತವಾದ ಅನುಭವವೇ ಲಯದ ಅಸ್ತಿತ್ವವನ್ನು ನಮ್ಮ ಗಮನಕ್ಕೆ ತರುತ್ತದೆ. ಇಂಥ ಲಯವನ್ನು ನಿಷ್ಪನ್ನಗೊಳಿಸಲು ಶಕ್ತವಾದ ಗಣಗಳು ಒಂದು ಗೊತ್ತಾದ ಪ್ರಮಾಣದಲ್ಲಿ ಕಟ್ಟುವ ವಿಶಿಷ್ಟವಾದ ಪದ ರಚನೆಯಿಂದ ಕೂಡಿದ ಪದ್ಯಪಾದ ಒಂದು ಛಂದೋಮಾನವೆನಿಸುತ್ತದೆ. ಇಂಥ ಪದ್ಯಪಾದಗಳು ಒಂದು ಗೊತ್ತಾದ ಪ್ರಮಾಣದಲ್ಲಿ ಹಾಗೂ ಕ್ರಮದಲ್ಲಿ ಯೋಜನೆಗೊಂಡು ಪದ್ಯ ಸಿದ್ಧವಾಗುತ್ತದೆ" ಎನ್ನಬಹುದಾದರೂ ಲಯ ಮತ್ತು ಛಂದಸ್ಸುಗಳ ನಡುವೆ ಗೆರೆಯೆಳೆದು ತೋರಿಸುವುದು ಕಷ್ಟ. ಆದ್ದರಿಂದ ಲಯವನ್ನು ಛಂದಸ್ಸಿನ ತಂದೆಯೆಂದೂ ಆ ಎರಡು ಗಂಡು ಹೆಣ್ಣುಗಳೆಂದೂ ಕೆಲವರು ಭಾವಿಸಿರುವುದುಂಟು . ಈಗಾಗಲೇ ನಾವು ಲಯವನ್ನು ಛಂದಸ್ಸಿನ ಜೀವಾಳವೆಂದು ತಿಳಿದಿದ್ದೇವೆ. ನಿರ್ದಿಷ್ಟವಾದೊಂದು ಛಂದಸ್ಸಿನಲ್ಲಿ ಅದರ ಬಂಧದ ಲಕ್ಷಣ ಏನೇ ಇದ್ದರೂ ಅಲ್ಲಿ ಯಾವುದೋ ಒಂದು ರೀತಿಯ ಲಯದ ಅನುಸರಣೆ ಕಾಣುತ್ತದೆ.

1.4. ಯತಿ

ಛಂದಶಾಸ್ತ್ರದ ಅಧ್ಯಯನ ಸಂದರ್ಭದಲ್ಲಿ "ಯತಿ" ಎಂಬ ಮಾತು ಪದೇ ಪದೇ ಕೇಳಿಬರುತ್ತದೆ. ಆದ್ದರಿಂದ "ಯತಿ" ಎಂದರೇನು? ಎಂಬ ಪ್ರಶ್ನೆ ಸಹಜವಾಗಿಯೇ ನಿಮ್ಮನ್ನು ಕಾಡುತ್ತದೆ. ಈ ಪ್ರಶ್ನೆಗೆ ಸೂಕ್ತ ಉತ್ತರವನ್ನು ಈ ಘಟಕಾಂಶದಲ್ಲಿ ದೊರಕಿಸಿಕೊಳ್ಳಲು ಪ್ರಯತ್ನಿಸೋಣ ಅಲ್ಲವೇ ವಿದ್ಯಾರ್ಥಿ ಮಿತ್ರರೇ.

'ಯತಿ' ಎಂಬುದು ವಿರಾಮ ಅಥವಾ ನಿಲುಗಡೆಯ ಸ್ಥಾನವನ್ನು ಸೂಚಿಸಲು ಬಳಸುವ ಪದವಾಗಿದೆ. ಕಾವ್ಯಗಳಲ್ಲಿ ಪದ್ಯಗಳನ್ನು ಓದುವಾಗ ಅರ್ಥಸ್ಫೂರ್ತಿ ಕೆಡದಂತೆ ಪದ್ಯಪಾದದ ನಿಯತವಾದ ಒಂದೊಂದೆಡೆಯಲ್ಲಿ ನಿಲ್ಲಿಸಬೇಕಾಗುತ್ತದೆ. ಅಂದರೆ: ವಿರಾಮ ಕೊಟ್ಟು ಅಥವಾ ಉಸಿರು ತೆಗೆದುಕೊಂಡು ಓದಬೇಕಾಗುತ್ತದೆ. ಇದಕ್ಕೆ ಛಂದಸ್ಸಿನ ಪರಿಭಾಷೆಯಲ್ಲಿ ಯತಿ ಎಂದು ಕರೆಯುತ್ತೇವೆ. ಕವಿರಾಜಮಾರ್ಗದ ಕರ್ತೃ ಶ್ರೀ ವಿಜಯ ಯತಿಯ ಪ್ರಸ್ತಾಪ ಮಾಡಿದ್ದು 'ಯತಿಯೆಂಬುವುದುಸಿರ್ವತಾಣಂ' ಎಂದು ಹೇಳಿದ್ದಾನೆ. ನಾಗವರ್ಮ ಕೂಡ ತನ್ನ 'ಛಂದೋಂಬುಧಿ' ಗ್ರಂಥದಲ್ಲಿ 'ಯತಿಯೆಂಬುದು ಗಣ ನಿಯಮ ಪ್ರತೀತಿಗುಸಿರ್ದಾಣಮಪ್ಪುದು' ಎಂದೂ ಹೇಳಿದ್ದಾನೆ. ಯತಿಯ ವಿಚಾರ ಕುರಿತ ಅವನ ಒಂದು ಪದ್ಯ ಹೀಗಿದೆ ಗಮನಿಸಿ:

ಯತಿಯೆಂಬುದು ಗಣನಿಯಮ
ಪ್ರತೀತಯೆಂದರೆಬರೊಲ್ವರಂತದನೆ ಕೆಲರ್
ಶ್ರುತಿಸುಭಗಂ ಸ್ವಚ್ಛಂದಂ
ಯತಿಯೆಂದರ್ ಕಪಿಲಪಿಂಗಳಾದಿಗಳೆಲ್ಲರ್

ಯತಿಯ ಪಾಲನೆ ಸಂಸ್ಕೃತದಲ್ಲಿ ಅನಿವಾರ್ಯ. ಆದರೆ ಕನ್ನಡಕ್ಕೆ ಅದು ಅಸಹಜ. ಅಂದರೆ: ಸಂಸ್ಕೃತದಲ್ಲಿ ಪದ್ಯಪಾದಗಳು ದೀರ್ಘವಾಗಿರುವುದರಿಂದ ಉಚ್ಚಾರಣೆಯ ದೃಷ್ಟಿಯಿಂದ ಒಂದೆಡೆಯಲ್ಲಿ ನಿಲ್ಲಿಸಿ ಉಸಿರು ತೆಗೆದುಕೊಳ್ಳಬೇಕಾದುದ್ದು ಅತ್ಯಗತ್ಯ. ಓದುವವರ ಸ್ವೇಚ್ಛೆಗನುಗುಣವಾಗಿ ಯತಿ ನಿಲುಗಡೆ ಆಗದಿರುವಂತೆ ಸಂಸ್ಕೃತ ಲಾಕ್ಷಣಿಕರು ಆಯಾಯ ವೃತ್ತ ಜಾತಿಯ ಲಕ್ಷಣಕ್ಕನುಗುಣಾವಾಗಿ ಯತಿಯ ಸ್ಥಾನವನ್ನು ನಿರ್ದೇಶಿಸಿದರು. ಕವಿಗಳು ಕೂಡ ಸಂಸ್ಕೃತ ವರ್ಣವೃತ್ತಗಳನ್ನು ರಚಿಸುವ ಸಂದರ್ಭದಲ್ಲಿ ನಿರ್ದಿಷ್ಟಪಡಿಸಿದ ಸ್ಥಾನದಲ್ಲಿ ಯತಿಯನ್ನು ತಂದರು. ಹಾಗಾಗಿ ಸಂಸ್ಕೃತದಲ್ಲಿ ಯತಿಯ ಪಾಲನೆ ಕಡ್ಡಾಯವಾಯಿತು. ಆದರೆ ಕನ್ನಡದ ಮಟ್ಟಿಗೆ ಅದು ಐಚ್ಛಿಕವಾಗಿಯೇ ಉಳಿಯಿತೇ ಹೊರತು ಕಡ್ಡಾಯವಾಗಲಿಲ್ಲ; ಪರಿಣಾಮವಾಗಿ ಕನ್ನಡದಲ್ಲಿ ಕಾಣಿಸುವ ಯತಿ ಸ್ವಚ್ಛಂದವಾದದ್ದು ; ಶ್ರುತಿಸುಭಗವಾದದ್ದು. ಅದು ಇದ್ದೂ ಇಲ್ಲದಂತಿರುತ್ತದೆ. ಆದ್ದರಿಂದಲೇ ಕೇಶಿರಾಜ ತನ್ನ 'ಶಬ್ದಮಣಿದರ್ಪಣಂ' ಎಂಬ ಕೃತಿಯಲ್ಲಿ ಕನ್ನಡದ ಅಸಾಧಾರಣ ಲಕ್ಷಣಗಳಲ್ಲಿ 'ಯತಿವಿಲಂಘನ' ವೂ ಒಂದೂ ಎಂದು ತಿಳಿಸುವ ಸಂದರ್ಭದಲ್ಲಿ 'ಯತಿವಿಲಂಘನದಿಂದ ಜಿದಲ್ತೆ ಕನ್ನಡಂ' ಎಂದೂ ತಿಳಿಯಪಡಿಸಿದ್ದಾನೆ. ಈ ಮಾತನ್ನು ಗಮನಿಸಿದಾಗ ಕನ್ನಡದಲ್ಲಿ ಯತಿಪಾಲನೆ ಕಡ್ಡಾಯವಲ್ಲವೆಂದು ತಿಳಿದುಬರುತ್ತದೆ ಅಲ್ಲವೇ. ತ್ರಿಪದಿಗಳಲ್ಲಿ ಕಂದಪದ್ಯಗಳಲ್ಲಿ ಹಾಗೂ ಸರ್ವಜ್ಞನ ವಚನಗಳಲ್ಲಿ ಯತಿನಿಯಮ ಪಾಲಿತವಾಗಿರುವುದು ಕಂಡುಬರುತ್ತದೆ. ಕೆಲವೊಮ್ಮೆ ಕನ್ನಡ ಕವಿಗಳು

ಪ್ರಾಸಕ್ಕೆ ಹೆಚ್ಚು ಮಹತ್ತ್ವ ಕೊಟ್ಟಿರುವುದರಿಂದಲೋ ಏನೋ 'ಯತಿವಿಲಂಘನೆ' ಮಾಡಿರುವಂತೆ ತೋರುತ್ತದೆ. ಅದ್ದರಿಂದಲೇ ಶ್ರೀವಿಜಯನೆಂಬ 'ಕವಿ ಪೂರ್ವಾಚಾರ್ಯರ್ ದೇಸಿಯನಿಱಿಸಿ ಪಿಂಡ ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್' ಎಂದೂ ಕನ್ನಡ ಯತಿಯ ವಿಷಯದ ಬಗ್ಗೆ ಸ್ಪಷ್ಟವಾಗಿ ತಿಳಿಸಿದ್ದಾನೆ.

ಇಷ್ಟು ವಿಚಾರಗಳನ್ನು ತಿಳಿದ ಬಳಿಕ ಯತಿ ಎಂದರೆ ವಿಶ್ರಾಂತಿಯ ಸ್ಥಾನ, ಪದ್ಯಗಳನ್ನು ಓದುವಾಗ ನಿಯತವಾದ ಸ್ಥಾನದಲ್ಲಿ ನಿಲ್ಲಿಸಿ ಓದುವುದಕ್ಕೆ ಯತಿ ಎನ್ನುತ್ತೇವೆ. ಸಂಸ್ಕೃತದಲ್ಲಿ ಯತಿ ಕಡ್ಡಾಯ ವಾಗಿ ಪಾಲಿತವಾಗಿದೆ. ಕನ್ನಡದಲ್ಲಿ ಯತಿ ಕಡ್ಡಾಯವಾಗಿ ಪಾಲಿತವಾಗಿಲ್ಲ ಎಂಬ ಅಂಶವನ್ನು ಮನನ ಮಾಡಿಕೊಂಡಿದ್ದೀರಿ ಎಂದು ಭಾವಿಸಿದ್ದೇನೆ.

1.5. ಪ್ರಾಸ

ಕಾವ್ಯಗಳನ್ನು ಅಥವಾ ಪದ್ಯಗಳನ್ನು ಓದುವಾಗ ಪ್ರಾಸದ ಬಳಕೆ ಆಗಿರುವುದನ್ನು ನೀವು ಗಮನಿಸುತ್ತೀರಿ. 'ಪ್ರಾಸ' ಎಂಬ ಮಾತು ಕಾವ್ಯ ಪ್ರಪಂಚದಲ್ಲಿ ಪ್ರಚಲಿತದಲ್ಲಿದ್ದು, ಅದರಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ. ಪದ್ಯದ ನಡಿಗೆಯಲ್ಲಿ, ಲಯದ, ಗೇಯತೆಯ ಇಂಪಿಗೆ ಪ್ರಾಸದ ಕೊಡುಗೆ ಅಪಾರ. ಅಂದರೆ : ಪದ್ಯದ ಅಥವಾ ಕಾವ್ಯದ ಸ್ವಾರಸ್ಯ ಇದರಿಂದ ಹೆಚ್ಚುತ್ತದೆ. 'ಪ್ರಾಸವಿಲ್ಲದ ಪದವ ತಾಸು ಹಾಡಿದರೇನು? ಎಂಬ ಸರ್ವಜ್ಞನ ಮಾತು ಪ್ರಾಸದ ಮಹತ್ತ್ವವನ್ನು ಅರಿಯುವಲ್ಲಿ ಹೆಚ್ಚು ಸಹಾಯಕವಾಗುತ್ತದೆ. ಪ್ರಾಸದ ಬಳಕೆ ನಿಯತವಾಗಿ ಪಾಲಿತವಾಗಿರುವುದನ್ನು ಹಿಂದಿನ ಕಾವ್ಯ ಕೃತಿಗಳ ಅಧ್ಯಯನ ಸಂದರ್ಭದಲ್ಲಿ ನೀವು ಮನಗಾಣುತ್ತೀರಿ.

ಅಂದಮೇಲೆ, ಈಗ 'ಪ್ರಾಸ ' ಎಂದರೇನು? ಎಂಬ ವಿಚಾರಕ್ಕೆ ಬರೋಣ. ಪದ್ಯದ ಪ್ರತಿಪಾದದಲ್ಲಿ ನಿರ್ದಿಷ್ಟವಾದ ಜಾಗದಲ್ಲಿ ಒಂದೇ ವಿಧವಾದವ್ಯಂಜನ ಪುನರಾವರ್ತನೆಯಾಗುವುದಕ್ಕೆ ಪ್ರಾಸ ಎಂದು ಹೆಸರು.

ಪ್ರಾಸದಲ್ಲಿ 'ಆದಿಪ್ರಾಸ ' 'ಅಂತ್ಯಪ್ರಾಸ ' ಹಾಗೂ 'ಅನುಪ್ರಾಸ ' ವೆಂದು ಮೂರು ಬಗೆ. ಪದ್ಯದ ಪ್ರಾರಂಭದಲ್ಲಿ ಮೊದನೆಯ ಎರಡು ಸ್ವರಗಳ ನಡುವೆ ಬರುವ ಒಂದೇ ಬಗೆಯ ವ್ಯಂಜನ ಉಳಿದೆಲ್ಲ ಪದ್ಯಪಾದಗಳಲ್ಲಿ ಕ್ರಮವಾಗಿ ಬಂದರೆ ಅದಕ್ಕೆ 'ಆದಿಪ್ರಾಸ ' ವೆಂದು ಹೆಸರು. ಹಾಗೆಯೇ ಪದ್ಯದ ಪ್ರತಿಪಾದಗಳ ಕೊನೆಯಲ್ಲಿ ಬರುವ ಅಕ್ಷರವು ಒಂದೇ ಆಗಿದ್ದರೆ ಅದಕ್ಕೆ 'ಅಂತ್ಯಪ್ರಾಸ' ವೆಂದು ಹೆಸರು. ಪ್ರತಿಪದ್ಯ ಪಾದದಲ್ಲಿ ಒಂದೇ ವಿಧವಾದ ಅಕ್ಷರ ಸರಣಿಗೊಂಡಂತೆ ಮೇಲಿಂದ ಮೇಲೆ ಬಂದರೆ ಅದಕ್ಕೆ 'ಅನುಪ್ರಾಸ ' ಎಂದು ಹೇಳುತ್ತೇವೆ.

ಪ್ರಾಚೀನ ಸಾಹಿತ್ಯ ದೃಷ್ಟಿಯಿಂದ ಆದಿಪ್ರಾಸ ವಿಶೇಷ ಉಪಯೋಗಿಸಲಾಗುತ್ತಿತ್ತು. ನಾಗವರ್ಮನ ಪ್ರಕಾರ ಆದಿ ಪ್ರಾಸದಲ್ಲಿ ಆರು ಒಳಭೇದಗಳಿವೆ. ೧. ಸಿಂಹ ೨. ಗಜ ೩. ವೃಷಭ ೪. ಅಜ ೫. ಹಯ ೬. ಶರಭ ಎಂಬುದಾಗಿ ಈ ಪ್ರಾಸಭೇದಗಳನ್ನು ಅವನು ಹೆಸರಿಸಿದ್ದಾನೆ.

1.6. ಛಂದಸ್ಸಿನ ಪ್ರಮುಖ ಸಂಗತಿಗಳು ಪಾದ, ಮಾತ್ರೆ, ಗಣ.

ಛಂದಶ್ಶಾಸ್ತ್ರದಲ್ಲಿ ಪ್ರಮುಖವಾಗಿ ತಿಳಿದಿರಲೇಬೇಕಾದ ಪಾದ, ಮಾತ್ರೆ, ಗಣಗಳ ಸ್ವರೂಪವನ್ನು ಈ ಘಟಕಾಂಶದಲ್ಲಿ ನಾವು ಪರಿಚಯ ಮಾಡಿಕೊಳ್ಳೋಣ.

ಪದ್ಯಗಳು ಪಾದಗಳಿಂದ ಕೂಡಿರುತ್ತವೆ. ಪಾದಗಳು ಗಣ, ಪ್ರಾಸ ಛಂದಸ್ಸು ನಿಯಮವನ್ನು ಒಳಗೊಂಡಿರುವ ಶಬ್ದಗುಚ್ಛಗಳು . ಪದ್ಯಪಾದಗಳು ಗಣವಿಭಜನೆಯಲ್ಲಿ ವಿಭಿನ್ನ ರೀತಿಯಿಂದ ಕೂಡಿರುತ್ತವೆ. ಅದಕ್ಕನುಗುಣವಾಗಿ ಪಾದಗಳು ವರ್ಣಗಣ ಮಾತ್ರಾಗಣ ಅಂಶಗಣಗಳಿಂದ ಕೂಡಿರುತ್ತವೆ.

ಹಾಗಾಗಿ ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಛಂದಸ್ಸಿನ ನಿಯಮಕ್ಕೆ ಒಳಪಟ್ಟ ಕಾವ್ಯಗಳು ಇವೆ. ಹಾಗೆಯೇ ಕನ್ನಡ ಛಂದಸ್ಸಿನ ನಿಯಮಕ್ಕೆ ಒಳಪಟ್ಟ ಕಾವ್ಯಗಳೂ ಇವೆ. ಪರಿಣಾಮವಾಗಿ ಕನ್ನಡ ಛಂದಸ್ಸಿನಲ್ಲಿ ಅಕ್ಷರ ಛಂದಸ್ಸು, ಮಾತ್ರಾ ಛಂದಸ್ಸು, ಅಂಶ ಛಂದಸ್ಸುಗಳೆಂದು ಮೂರು ವಿಧಗಳು ಕಂಡುಬರುತ್ತವೆ.

1.6.0 ಪಾದ

ಪದ್ಯದಲ್ಲಿನ ಗೊತ್ತಾದ ಸಾಲುಗಳಿಗೆ '<u>ಪಾದ</u>' ಎಂದು ಕರೆಯುವರು . ಪ್ರತಿಯೊಂದು ಪದ್ಯದಲ್ಲಿ ಕಂಡುಬರುವ ಪಾದಸಂಖ್ಯೆಗೆ ಅನುಗುಣವಾಗಿ ಆಯಾಯ ಪದ್ಯಗಳ ಹೆಸರನ್ನು ಕರೆಯಲಾಗುತ್ತದೆ. ಉದಾಹರಣೆಗೆ: ಒಂದು ಪದ್ಯದಲ್ಲಿ ಎರಡು ಪಾದಗಳಿದ್ದರೆ ಅದನ್ನು ದ್ವಿಪದಿ ಎಂದೂ ಮೂರು ಪಾದಗಳಿದ್ದರೆ ತ್ರಿಪದಿ ಎಂದೂ ನಾಲ್ಕು ಪಾದಗಳಿದ್ದರೆ ಚೌಪದಿ ಎಂದೂ ಆರು ಪಾದಗಳಿದ್ದರೆ ಷಟ್ಪದಿ ಹಾಗೂ ಹದಿನಾಲ್ಕೂ ಪಾದಗಳಿದ್ದರೆ ಅಷ್ಟಷಟ್ಪದಿ ಎಂದೂ ಹೇಳುವುದುಂಟು. ಅಂತೂ ಪದ್ಯದ ರಚನೆಯಲ್ಲಿ ಪಾದಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂಬುದು ಗಮನಾರ್ಹ ಸಂಗತಿ.

ಪ್ರತಿಯೊಂದು ಪಾದದಲ್ಲಿರುವ ಅಕ್ಷರ ಅಥವಾ ಮಾತ್ರೆಗಳ ಗುಂಪನ್ನು ಗಣ ಎನ್ನುವರು. ಅಂದರೆ: ಪದ್ಯದ ಪ್ರತಿಯೆಂದೂ ಪಾದದಲ್ಲೂ ವಿಭಾಗಿಸುವ ಅಕ್ಷರ, ಮಾತ್ರೆ , ಅಂಶಗಳ ಗುಂಪಿಗೆ ಗಣ ಎಂದು ಹೇಳುತ್ತೇವೆ. ಪದ್ಯದ ಪಾದದಲ್ಲಿನ ಗಣಗಳನ್ನು ಅಕ್ಷರಗಳ ಲೆಕ್ಕಾಚಾರದಿಂದ ವಿಭಾಗಿಸುವ ಗಣಕ್ಕೆ <u>ಅಕ್ಷರಗಣ</u>ವೆಂದೂ ಪದ್ಯದ ಪಾದಗಳಲ್ಲಿನ ಗಣಗಳನ್ನು ಮಾತ್ರೆಗಳ ಆಧಾರದ ಮೇಲೆ ವಿಂಗಡಿಸುವುದಕ್ಕೆ <u>ಮಾತ್ರಾಗಣ</u>ವೆಂದೂ ಅಂತೆಯೇ ಪದ್ಯದ ಪಾದಗಳನ್ನು ಅಂಶಗಳ ಆಧಾರದ ಮೇಲೆ ವಿಂಗಡಿಸುವುದಕ್ಕೆ <u>ಅಂಶಗಣ</u>ವೆಂದೂ ಕರೆಯುತ್ತೇವೆ. ಪ್ರತಿಯೊಂದು ಪಾದದಲ್ಲಿನ ಲಘುಗುರುಗಳನ್ನು ಗುರುತಿಸುವುದಕ್ಕೆ ಭಾಷಿಕ ಛಂದೋ ಬೆಲೆ ಬೇಕು. ಆ ಛಂದೋ ಬೆಲೆಯೇ ಮಾತ್ರೆ.

1.6.1. ಮಾತ್ರೆ : ಲಘು, ಗುರು, ಪ್ಲುತ

ಈಗ ಮಾತ್ರೆ ಎಂದರೇನು? ಎಂಬ ಪ್ರಶ್ನೆಯನ್ನು ನಿಮಗೆ ಕೇಳಬಯಸುತ್ತೇನೆ. ಮಾತ್ರೆ ಎಂದರೆ ಇದು ಔಷಧಿಯ ಮಾತ್ರೆ (ಟ್ಯಾಬ್ಲೆಟ್ಸ್) ಅಲ್ಲ. ಛಂದಶ್ಯಾಸ್ತ್ರದಲ್ಲಿ ಒಂದು ಅಕ್ಷರವನ್ನು ಉಚ್ಚಾರಣೆ ಮಾಡಲು ತೆಗೆದುಕೊಳ್ಳುವ ಕಾಲಕ್ಕೆ 'ಮಾತ್ರೆ' ಎಂದು ಹೇಳುತ್ತೇವೆ. ನಿಮಗೆ ತಿಳಿದಿರುವ ಹಾಗೆ ಅಕ್ಷರಗಳಲ್ಲಿ ಹ್ರಸ್ವಸ್ವರಗಳು ದೀರ್ಘಸ್ವರಗಳು ಎಂದು ಎರಡು ಬಗೆಗಳಿವೆ. ಹಾಗಾಗಿ ಹ್ರಸ್ವಸ್ವರಗಳನ್ನು 'ಲಘು' ಎಂದೂ ದೀರ್ಘಸ್ವರಗಳನ್ನು 'ಗುರು' ಎಂದೂ ಗುರುತಿಸಲಾಗುತ್ತದೆ. ಕೆಲವೊಮ್ಮೆ ದೀರ್ಘಸ್ವರಗಳನ್ನು ಮೂರು ಮಾತ್ರೆಯ ಕಾಲದಷ್ಟು ಎಳೆದು ಉಚ್ಚರಿಸಬೇಕಾಗುತ್ತದೆ. ಆಗ ಅದಕ್ಕೆ 'ಪ್ಲುತ' ಎಂದು ಹೇಳುತ್ತೇವೆ. ಅಂತೂ ಮಾತ್ರೆಗಳಲ್ಲಿ ಲಘು, ಗುರು , ಪ್ಲುತ ಎಂದು ಮೂರು ಬಗೆಗಳು ಕಂಡು ಬರುತ್ತವೆ .

1.6.1.0. ಲಘು

ಒಂದು ಮಾತ್ರಾಕಾಲದಲ್ಲಿ ಉಚ್ಚಾರ ಮಾಡುವ ಅಕ್ಷರಗಳು ಹ್ರಸ್ವಾಕ್ಷರಗಳು ಇವೇ ಲಘು. ಲಘುವನ್ನು ಛಂದಶಾಸ್ತ್ರ 'U' ಈ ಚಿಹ್ನೆಯಿಂದ ಗುರುತಿಸುವುದು ವಾಡಿಕೆ. ಹಾಗಾಗಿ ಹ್ರಸ್ವ ಅಕ್ಷರಗಳೆಲ್ಲವೂ ಒಂದು ಮಾತ್ರೆಯ ಬೆಲೆಯನ್ನು ಹೊರುತ್ತವೆ. ಲಘು: ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷಗಳು ಅ,ಇ,ಉ,ಎ,ಒ,ಕ,ಚಿ,ಕು,ಚೆ,ಪೊ, ಕ್ಕ, ಕ್ರೆ, ಕ್ರೊ, ಸು, ಸೊ, ಟ್ಪೆ, ಪ್ಪೊ, ನ್ನ ಇವು ಲಘು ಅಕ್ಷರಗಳು. ಇಲ್ಲಿ ಉಲ್ಲೇಖಿಸಿರುವ ಹ್ರಸ್ವಸ್ವರ ಮತ್ತು ಹ್ರಸ್ವಸ್ವರದಿಂದ ಕೂಡಿದ ಗುಣಿತಾಕ್ಷರಗಳೆಲ್ಲವೂ ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳಾಗಿವೆ. ಇವುಗಳನ್ನು ಛಂದಶಾಸ್ತ್ರದಲ್ಲಿ 'U' ಈ ಚಿಹ್ನೆಯಿಂದ ಗುರುತಿಸಲಾಗುತ್ತದೆ. ಇದೇ ಲಘು.

1.6.1.1. ಗುರು

ಒಂದು ಮಾತ್ರೆಗಳ ಕಾಲ ಉಚ್ಚರಿಸುವ ಅಕ್ಷರಕ್ಕೆ ಲಘು ಎಂದು ತಿಳಿದಿದ್ದೇವೆ ಅಲ್ಲವೇ ವಿದ್ಯಾರ್ಥಿ ಮಿತ್ರರೇ. ಅದೇ ರೀತಿ ಗುರು ಎಂದರೇನು? ಎಂಬುದು ನಿಮಗೆ ತಿಳಿದಿರಲಿಕ್ಕೆ ಸಾಕು. ಎರಡು ಮಾತ್ರೆಗಳ ಕಾಲ ಉಚ್ಚರಿಸಲ್ಪಡುವ ಅಕ್ಷರಗಳೆಲ್ಲವೂ ಗುರು ಎನಿಸುತ್ತವೆ. 'ಗುರು' ವನ್ನು ಛಂದಶ್ಯಾಸ್ತ್ರದಲ್ಲಿ ' - ' ಈ ಚಿಹ್ನೆಯಿಂದ ಗುರುತಿಸುವುದು ವಾಡಿಕೆ. ಸಾಮಾನ್ಯವಾಗಿ ದೀರ್ಘಸ್ವರ ಹಾಗೂ ದೀರ್ಘಾಕ್ಷರಗಳೆಲ್ಲವೂ ಗುರುವಾಗುತ್ತವೆ. ಇನ್ನು ಕೆಲವು ಸಂದರ್ಭಗಳಲ್ಲಿ ಛಂದಶ್ಯಾಸ್ತ್ರ ನಿಯಮಕ್ಕನುಗುಣವಾಗಿ ಗುರುವಾಗುವ ಅಕ್ಷರಗಳೂ ಇವೆ. ಅವುಗಳನ್ನು ಈಗ ಇಲ್ಲಿ ಒಂದೊಂದಾಗಿ ತಿಳಿದುಕೊಳ್ಳೋಣ ಅಲ್ಲವೇ.

೧. ದೀರ್ಘಸ್ವರಗಳು ಮತ್ತು ದೀರ್ಘಾಕ್ಷರಗಳು ಸಹಜವಾಗಿಯೇ ಗುರುವಾಗುತ್ತವೆ . ಉದಾ: ಆ, ಈ, ಊ, ಏ, ಓ ಕಾ, ಕೀ, ಚೂ ಚೇ, ಚೋ ಇವು ಗುರುವಿನ ಬೆಲೆ ಹೊರುತ್ತವೆ.

೨. ಸಂಧ್ಯಕ್ಷರಗಳಾದ 'ಐ' ಮತ್ತು 'ಔ' ಗಳು ಗುರುವಾಗುತ್ತವೆ.

ಉದಾಹರಣೆಗೆ:

U -U-U - - UU -

ಲೋಕೈರವೀರ ಕೌರವೇಂದ್ರ

ಇಲ್ಲಿ ಕ್+ಐ=ಕೈ, ಕ್+ಔ=ಕೌ ಇವು ಗುಣಿತಾಕ್ಷರಗಳು. ಇವುಗಳ ಮೇಲೆ ಸಂಧ್ಯಾಕ್ಷರಗಳಾದ ಐ ಮತ್ತು ಔ ಹತ್ತಿರವಿರುವುದರಿಂದ ಇವು ಗುರುವಿನ ಬೆಲೆ ಪಡೆಯುತ್ತವೆ.

೩. ಅನುಸ್ವಾರದಿಂದ ಕೂಡಿದ ಅಥವಾ ಅನುಸ್ವಾರದ ಹಿಂದಿನ ಅಕ್ಷರ ಗುರುವಾಗುತ್ತದೆ.

ಉದಾ.

-U -UU

ಕಂದ , ಚಂದನ

ಇಲ್ಲಿ ಕ್+ಅ+ಮಂ = ಕಂ, ಚ್+ಅ+ಮ್ = ಚಂ ಇಲ್ಲಿ ಒಂದು ವ್ಯಂಜನ +ಒಂದು ಹ್ರಸ್ವಸ್ವರ +ಒಂದು ವ್ಯಂಜನ ಇದೆ. ವ್ಯಂಜನಗಳು ಸ್ವತಂತ್ರವಾಗಿ ಉಚ್ಚರಿಸಲ್ಪತ್ತದೆ ಸ್ವರದ ಸಹಾಯದಿಂದ ಉಚ್ಚರಿಸ್ಪಡುತ್ತವೆ. ಕ್ +ಅ = ಕ ಆಗುತ್ತದೆ. ಇದು ಹ್ರಸ್ವಾಕ್ಷರವಾದ್ದರಿಂದ ಲಘು ಆಗುತ್ತದೆ. ಇದರೊಂದಿಗೆ ಮ್ ಎಂಬ ವ್ಯಂಜನವೂ ಇದೆ. ವ್ಯಂಜಗಳು ಸ್ವತಂತ್ರವಾಗಿ ಉಚ್ಚರಿಸಲ್ಪಡದೆ ಇರುವುದರಿಂದ ಅವು ಅರ್ಧಮಾತ್ರೆಯ ಬೆಲೆಯನ್ನು ಹೋರುತ್ತವೆ. ಆದ್ದರಿಂದ ಅನುಸ್ವಾರದಿಂದ ಕೂಡಿದ ಅಕ್ಷರಗಳನ್ನು 'ಗುರು' ಎಂದು ತಿಳಿಯಲಾಗುತ್ತದೆ.

೪. ವಿಸರ್ಗದ ಹಿಂದಿನ ಅಕ್ಷರ ಗುರುವಾಗುತ್ತದೆ.

ಉದಾಹರಣೆಗೆ : - - -U

ಪ್ರಾತಃ ಕಾಲ

ಇಲ್ಲಿ 'ತ ' ಎಂಬ ಅಕ್ಷರ ವಿಸರ್ಗದಿಂದ ಕೂಡಿದೆ. ಆದ್ದರಿಂದ 'ತಃ' ಗುರುವಾಗುತ್ತದೆ.

೫. ಸಂಯುಕ್ತಾಕ್ಷರ ಅಥವಾ ಒತ್ತಕ್ಷರದ ಹಿಂದಿರುವ ಅಕ್ಷರ ಗುರುವಾಗುತ್ತದೆ.

ಉದಾಹರಣೆಗೆ : U-U U -U

ನೆಲಕ್ಕೆ ಚಲಕ್ಕೆ

೬ ಇಲ್ಲಿ' ಕ್ಕೆ ' ಅಕ್ಷರ ಒತ್ತಕ್ಷರ. ಇದರ ಹಿಂದಿರುವ 'ಲ' ಹ್ರಸ್ವಾಕ್ಷರ. ಆದರೆ ಇದು ಒತ್ತಕ್ಷರದ ಹಿಂದಿನ ಅಕ್ಷರವಾದ್ದರಿಂದ ಗುರು.

೭. ಅರ್ಕಾವತ್ತು ಬಂದಾಗ ಅರ್ಕಾವತ್ತಿನ ಹಿಂದಿನ ಅಕ್ಷರ ಗುರುಬಾಗುತ್ತದೆ. ಅಂತೆಯೇ ವ್ಯಂಜನದ ಹಿಂದಿನ ಅಕ್ಷರ ಗುರುವಾಗುತ್ತದೆ.

ಉದಾರಹಣೆಗೆ:

- UU - UUUU -
ಅನಜಿವೆಂ ಪೃಥೆಯಜಿವಳ್

- UUUUUUU - U U U -
ದಾನವರಿಪುವಜಿವನರ್ಕನಜಿವೆಂ

ಇಲ್ಲಿ 'ಕ' ಅರ್ಕಾವತ್ತಿನಿಂದ ಕೂಡಿದೆ (ರ್ಕೊ) ಇದರ ಹಿಂದಿರುವ ಅಕ್ಷರ 'ಸ' ಇದು ಹ್ರಸ್ವಸ್ವರ. ಆದರೆ ನಿಯಮದ ಪ್ರಕಾರ ಅರ್ಕಾವತ್ತಿನ ಹಿಂದಿನ ಅಕ್ಷರ ಗುರುವಾಗುವುದರಿಂದ ಇಲ್ಲಿ ಸ ಗುರು ಆಗಿದೆ.

೮. ಒಂದು ಅಕ್ಷರ ಗುರುವಾಗಲು ಹಲವು ಕಾರಣಗಳಿದ್ದರೂ ಆ ಅಕ್ಷರವನ್ನು ಒಂದೇ ಗುರುವೆಂದು ಪರಿಗಣಿಸಬೇಕು . ಉದಾಹರಣೆಗೆ : 'ಕಾನ್ತಿ' ಗಾಂಧಾರಿ.
ಇಲ್ಲಿ 'ಕಾ' ಮತ್ತು 'ಗಾ' ದೀರ್ಘಸ್ವರವಾಗಿರುವುದರಿಂದ ಸಹಜವಾಗಿಯೇ ಗುರುವಾಗುತ್ತವೆ. ಇವುಗಳ ಮುಂದೆ ಕ್ರಮವಾಗಿ ಒತ್ತಕ್ಷರ ಹಾಗೂ ಅನುಸ್ವಾರ ಇರುವುದರಿಂದಲೂ ಗುರುವಾಗುತ್ತದೆ. ಹೀಗೆ 'ಕಾ' ಮತ್ತು 'ಗಾ' ಗುರುವಾಗಲು ಎರಡು ಕಾರಣಗಳಿದ್ದರೂ ಅದು ಒಂದೇ ಗುರು ಆಗುತ್ತದೆ.

೯. ಈಗ ನಾವು ತಿಳಿದ ಹಾಗೆ ಒತ್ತಕ್ಷರ ಅಥವಾ ಸಂಯುಕ್ತಾಕ್ಷರ ಹಿಂದಿನ ಅಕ್ಷರ ಅರ್ಕಾವತ್ತಿನ ಹಿಂದಿನ ಅಕ್ಷರ ಗುರುವಾಗುತ್ತದೆ ಎಂದು ಭಾವಿಸಿದ್ದೇವೆ ಅಲ್ಲವೇ . ಆದರೆ ಕೆಲವು ಸಂದರ್ಭಗಳಲ್ಲಿ ಇದಕ್ಕೆ ಅಪವಾದವುಂಟು. ಅಂದರೆ: ಕೆಲವು ಸಂದರ್ಭಗಳಲ್ಲಿ ಅರ್ಕಾವತ್ತಿನ ಹಿಂದಿನ ಅಕ್ಷರ ಗುರುವಾಗುವುದಿಲ್ಲ ಹಾಗೂ ದ್ವಿತ್ವಾಕ್ಷರದ ಅಥವಾ ಒತ್ತಕ್ಷರ ಹಿಂದಿನ ಅಕ್ಷರ ಗುರುವಾಗುವುದಿಲ್ಲ. ಅದರ ಬದಲಿಗೆ ಲಘುವಾಗಿಯೆ ಉಳಿಯುತ್ತದೆ.
ಉದಾಹರಣೆಗೆ ನೋಡಿ:

UU U U - U U U U UUU
ಏರ್ದೆ, ಕುಳಿರ್ಗಾಳಿ ಅಮರ್ದು ನೆಗಟ್ಟ್ಗೆ

ಇಲ್ಲಿ ನಿಯಮದ ಪ್ರಕಾರ 'ಎ' 'ಳಿ' 'ಮ' 'ಗ' ಅಕ್ಷರಗಳು ಗುರುವಾಗಬೇಕಿತ್ತು. ಆದರೆ ಇವು ಶಿಥಿಲದ್ವಿತ್ವಕ್ಕೆ ಉದಹಾರಣೆಯಾದ್ದರಿಂದ ಗುರುವಾಗುವುದಿಲ್ಲ. ಕೇಶಿರಾಜ ಹೇಳಿರುವ ಪ್ರಕಾರ (ಶಿಥಿಲದ್ವಿತ್ವದ ಹಿಂದಿನ ಅಕ್ಷರ ಗುರುವಿಗೆ ಬದಲು ಲಘುವಾಗುತ್ತದೆ) ಶಿಥಿಲದ್ವಿತ್ವವೆಂದರೆ ಒತ್ತಿ ಉಚ್ಚರಿಸಿದೆ ತೇಲಿಸಿ ಉಚ್ಚರಿಸುವ ಒತ್ತಕ್ಷರ. ಆದ್ದರಿಂದ ('ರ್ದೆ 'ರ್ಗಾ 'ರ್ದು 'ಟ್ಗೆ) ಇವುಗಳ ಹಿಂದಿನ ಅಕ್ಷರ ಗುರುವಾಗುವುದಿಲ್ಲ. ಅಂದರೆ: ಇವುಗಳ ಮುಂದೆ ಬರುವ ಅರ್ಕಾವತ್ತನ್ನು ಮತ್ತು 'ಗ' ಒತ್ತನ್ನು ಒತ್ತಿ ಉಚ್ಚರಿಸಬಾರದು, ತೇಲಿಸಿ ಉಚ್ಚರಿಸಬೇಕು. ಈ ನಿಯಮದಿಂದಾಗಿ 'ಎ' 'ಳಿ' 'ಮ' 'ಗ' ಅಕ್ಷರಗಳು ಲಘುವಾಗುತ್ತವೆ.

1.6.1.2. ಪ್ಲುತ (S)

ಲಘು ಗುರು ಈ ಸಂಜ್ಞೆಗಳ ವಿಚಾರವನ್ನು ಈ ಹಿಂದಿನ ಘಟಕಾಂಶಗಳಲ್ಲಿ ಓದಿ ತಿಳಿದಿದ್ದೀರಿ. ಈಗ ಪ್ಲುತ ಎಂದರೇನು? ಎಂಬ ಸಂಗತಿಯ ಬಗ್ಗೆ ತಿಳಿದುಕೊಳ್ಳಲು ತೊಡಗೋಣ.

ಸ್ವಲ್ಪಕಾಲ ಉಚ್ಚರಿಸುವ ಅಕ್ಷರಕ್ಕೆ ಲಘುವೆಂತಲೂ ದೀರ್ಘಕಾಲ ಉಚ್ಚರಿಸುವ ಅಕ್ಷರಕ್ಕೆ ಗುರುವೆಂತಲೂ ತಿಳಿದಿದ್ದೀವೆ. ಆದರೆ ಕೆಲವು ಸಂದರ್ಭಗಳಲ್ಲಿ ದೀರ್ಘಾಕ್ಷರವನ್ನು ತುಸು ಎಳೆದು ಉಚ್ಚರಿಸಬೇಕಾಗುತ್ತದೆ. ಆಗ ಆ ಅಕ್ಷರದ ಉಚ್ಚಾರಣೆಯ ಕಾಲ ಎರಡು ಮಾತ್ರೆಗಳ ಕಾಲವನ್ನು

ಮೀರಿ ಮೂರು ಮಾತ್ರೆಗಳ ಕಾಲವನ್ನು ತೆಗೆದುಕೊಳ್ಳುತ್ತದೆ. ಒಂದು ದೀರ್ಘಾಕ್ಷರವನ್ನು ಎರಡು ಮಾತ್ರೆಗಳಿಗಿಂತಲೂ ಅಧಿಕ ಕಾಲವನ್ನು (ಅಂದರೆ ಮೂರು ಮಾತ್ರೆಗಳ ಕಾಲವನ್ನು) ತೆಗೆದುಕೊಂಡರೆ ಅದನ್ನು ಪ್ಲುತ ಎಂದು ಗುರುತಿಸುತ್ತವೆ. ಲಘು ಒಂದು ಮಾತ್ರೆ ಬೆಲೆಯುಳ್ಳದಾದರೆ, ಗುರು ಎರಡು ಮಾತ್ರೆ ಬೆಲೆಯುಳ್ಳದ್ದು, ಪ್ಲುತ ಮೂರು ಮಾತ್ರೆಗಳ ಬೆಲೆಯುಳ್ಳದ್ದಾಗಿರುತ್ತದೆ. ಪ್ಲುತಕ್ಕೆ ಉದಾಹರಣೆ ಕೊಕೋಕ್ಕೋ ಎಂದು ಕೋಳಿ ಕೂಗಿದವಾಗಳ್ ಚಿಹ್ನೆಯಿಂದ ಗುರುತಿಸಲಾಗುತ್ತದೆ. ಆಧುನಿಕ ಕಾವ್ಯದಲ್ಲಿ ಪ್ಲುತದ ಪ್ರಯೋಗ ಹೆಚ್ಚಾಗಿ ಕಂಡುಬರುತ್ತದೆ. ಇದಕ್ಕೆ ಇನ್ನೊಂದು ಉತ್ತಮ ಉದಾಹರಣೆಯನ್ನು ಗಮನಿಸಬಹುದು.

ಮಾತ್ರೆ ಬೆಲೆಯುಳ್ಳದ್ದು, ಪ್ಲುತ ಮೂರು ಮಾತ್ರೆಗಳ ಬೆಲೆಯುಳ್ಳದ್ದಾಗಿರುತ್ತದೆ. ಪ್ಲುತಕ್ಕೆ ಉದಾಹರಣೆ ಕೊಕೋಕ್ಕೋ ಎಂದು ಕೋಳಿ ಕೂಗಿದವಾಗಳ್ ಚಿಹ್ನೆಯಿಂದ ಗುರುತಿಸಲಾಗುತ್ತದೆ. ಆಧುನಿಕ ಕಾವ್ಯದಲ್ಲಿ ಪ್ಲುತದ ಪ್ರಯೋಗ ಹೆಚ್ಚಾಗಿ ಕಂಡುಬರುತ್ತದೆ. ಇದಕ್ಕೆ ಇನ್ನೊಂದು ಉತ್ತಮ ಉದಾಹರಣೆಯನ್ನು ಗಮನಿಸಬಹುದು.

ಹಿಂದೆ ಸೆರೆಗೆ ಸಿಲುಕುತ
ಕಂಸ ಭಯಕೆ ನಡುಗುತ
"ಹಡೆದ ಕೂಸು ಬಾಳ್ವೆದೆಂತು" ಎನುತ /ತs/ ಲ್ಲಣಿಸು /ತs/

ಮೂರು ಮಾತ್ರೆಯ ಲಯವುಳ್ಳ ಈ ಪದ್ಯಭಾಗದಲ್ಲಿ 'ತs' ಎಂಬುದು ಮೂರು ಮಾತ್ರೆಯ ಮೌಲ್ಯವನ್ನು ಪಡೆದು ಒಂದು ಗಣವಾಗಿ ಪರಿಣಮಿಸಿದೆ. ಇಲ್ಲಿ 'ತs' ಎಂಬುದನ್ನು ಮೂರು ಮಾತ್ರೆಯ ಕಾಲಕ್ಕೆ ಎಳೆದು ಪಲುಕಿಸುವುದರಲ್ಲೆ ತಲ್ಲಣದ ನಡಕವು ಸೂಚಿತವಾಗುತ್ತದೆ. ಪ್ಲುತವನ್ನು 'ತs' ಎಂಬಂತೆ ಗುರುತಿಸುವುದು ರೂಢಿಯಲ್ಲಿದೆ.

1.7. ಗಣ

ಛಂದಸ್ಸಿನ ಪ್ರಮುಖ ಸಂಗತಿಗಳೆನಿಸದ ಪಾದ ಮಾತ್ರೆಗಳ ವಿಚಾರ ತಿಳಿದುಕೊಂಡ ಬಳಿಕ 'ಗಣ' ಎಂದರೇನು? ಎಂಬುದನ್ನು ಕುರಿತು ಚರ್ಚೆಗೆ ಎತ್ತಿಕೊಳ್ಳೋಣ ಅಲ್ಲವೇ. ಈಗ 'ಗಣ' ಎಂದರೇನು? ಎಂಬ ಪ್ರಶ್ನೆಗೆ ನೀವು ಗುಂಪು ಎಂತಲೋ ಭೂತ ಎಂತಲೋ ದೇವತೆ ಎಂತಲೋ ಉತ್ತರ ನೀಡಿದರೆ ಆಶ್ಚರ್ಯವಿಲ್ಲ . ಆದರೆ ಛಂದಸ್ಸಿನ ಪರಿಭಾಷೆಯಲ್ಲಿ ಇದಕ್ಕಿರುವ ಅರ್ಥವೇ ಬೇರೆ.

ಛಂದಸ್ಸು ಕಾವ್ಯವನ್ನು ಕುರಿತಾದ ಶಾಸ್ತ್ರ ಪದ್ಯ ತಾಳಲಯನುಸಾರಿಯಾದದ್ದು. ಕ್ರಿಯಾಪರಂಪರೆ ಹಾಗೂ ನಿರ್ದಿಷ್ಟವಾದ ಕಾಲದ ಅಂತರ ಇವುಗಳಿಂದ ಲಯ್ಯದ ಪ್ರತೀತಿಯಾಗುತ್ತದೆ. ಈ ಲಯದ ಪ್ರತೀತಿಗೆ ತಾಳವು ಮುಖ್ಯ. ಆದ್ದರಿಂದ 'ಎರಡು ತಾಳಗಳ ನಡುವೆ ಬರುವ ಅಕ್ಷರಗಳ ಸಮೂಹಕ್ಕೆ ನಿಯಮಗಳಿಗೆ ಅನುಸಾರವಾಗಿ ವಿಂಗಡಿಸಿದ ಅಕ್ಷರಗಳ ಗುಂಪನ್ನು, ಮಾತ್ರೆಗಳ ಕಟ್ಟನ್ನು, ಅಂಶಗಳ ಸಮೂಹವನ್ನು ನಾವು ಗಣ ಎಂದು ಕರೆಯುತ್ತೇವೆ. ಛಂದಸ್ಸಿನ ವ್ಯವಸ್ಥೆಯಲ್ಲಿ ಗಣ ನಿಯಮ ಅತ್ಯಂತ ಪ್ರಧಾನವಾದದ್ದು. ಈ ಗಣ ವ್ಯವಸ್ಥೆಯು ಪ್ರಧಾನವಾಗಿ

೧. ವರ್ಣಗಣ
೨. ಮಾತ್ರಾಗಣ
೩. ಅಂಶಗಣ

ಈ ಮೂರು ರೀತಿಯಿಂದ ಕೂಡಿರುತ್ತದೆ.ವರ್ಣಗಳಿಗೆ ಅನುಗುಣವಾದ ವೃತ್ತಗಳನ್ನು ವರ್ಣವೃತ್ತಗಳೆಂದೂ ಮಾತ್ರೆಗಳಿಗೆ ಅನುಗುಣವಾದ ವೃತ್ತಗಳನ್ನು ಮಾತ್ರಾವೃತ್ತಗಳೆಂದೂ, ಅಂಶಗಳಿಗೆ ಅನುಗುಣವಾದ ವೃತ್ತಗಳನ್ನು ಅಂಶವೃತ್ತಗಳೆಂದು ಹೆಸರಿಸಿರುವುದು ಸಾಮಾನ್ಯವಾಗಿ ಇಲ್ಲಿ ಕಂಡುಬರುತ್ತದೆ.

1.7.0. ವರ್ಣಗಣ

ವರ್ಣಗಳಿಂದ ಕೂಡಿ ಆದ ಗಣಕ್ಕೆ ವರ್ಣಗಣ ಅಥವಾ ಅಕ್ಷರಗಣ ಎಂದು ಹೆಸರು. ಇಲ್ಲಿ ಗಣವ್ಯವಸ್ಥೆಯಲ್ಲಿ ಮಾತ್ರೆಗಳಾಗಲಿ ಅಂಶಗಳಾಗಲಿ ಪ್ರಧಾನವಾಗಿರದೆ ಅಕ್ಷರಗಳೇ ಪ್ರಧಾನವಾಗಿರುತ್ತವೆ. ಅದರಂತೆ ವರ್ಣಗಣದಲ್ಲಿ ಮೂರು ಮೂರು ಅಕ್ಷರಗಳಿಗೆ ಅನುಗುಣವಾಗಿ ಗಣವಿಭಜನೆ ನಡೆಯುತ್ತದೆ. ವರ್ಣಗಣದ ವಿನ್ಯಾಸ ಕೂಡ ಮ, ನ, ಭ, ಯ , ಜ , ರ ,ಸ, ತ ಈ ಸಂಜ್ಞೆಗಳಿಗೆ ಅನುಗುಣವಾಗಿ ಎರಡು ಬಗೆಯದಾಗಿರುತ್ತದೆ. ಈಶ್ವರ ಕವಿಯು ತನ್ನ 'ಕವಿಜಿಹ್ವಾಬಂಧನ' ಎಂಬ ಕೃತಿಯಲ್ಲಿ ಇಲ್ಲಿನ ಗಣ ವಿನ್ಯಾಸದ ಬಗೆಯನ್ನು ಪದ್ಯವೊಂದರ ಮೂಲಕ ಹೀಗೆ ಸೂಚಿಸಿದ್ದಾನೆ.

	UUU	- - -
ಗುರು ಲಘು ಮೂರಿರೆ ಮನಗಣ	ಮಗಣ	ನಗಣ
	-U U	U - -
ಗುರು ಲಘು ಮೊದಲಲ್ಲಿ ಬರಲು ಭಯಗಣಮಕ್ಕುಂ	ಭಗಣ	ಯಗಣ
	U - U	- U -
ಗುರು ಲಘು ನಡುವಿರೆ ಜರಗಣ	ಜಗಣ	ರಗಣ
	U U-	U U -
ಗುರು ಲಘು ಕಡೆಯಲ್ಲಿ ಬರಲು ಸತಗಣಮಕ್ಕುಂ	ಸಗಣ	ತಗಣ

ಇದಲ್ಲದೆ 'ಯಮಾತಾರಾಜಭಾನಸಲಗಂ' ಈ ಸೂತ್ರದ ನೆರವಿನಿಂದಲೂ ಈ ಎಂಟು ಬಗೆಯ ಗಣವಿನ್ಯಾಸವನ್ನು ತಿಳಿದುಕೊಳ್ಳಬಹುದಾಗಿದೆ. ಈ ಸೂತ್ರದ ಮೂರು ಮೂರು ಅಕ್ಷರಗಳನ್ನು ವಿಂಗಡಿಸಿ ಪ್ರಸ್ತಾರ ಹಾಕಿದರೆ ಸೂತ್ರದ ಮೊದಲನೆಯ ಅಕ್ಷರವು ಗಣದ ಹೆಸರನ್ನು ಸೂಚಿಸುತ್ತದೆ. ಉದಾಹರಣೆಗೆ

U - -	- - -
ಯ ಮಾತಾ	ಮಾತಾರಾ

ಮೊದಲನೆಯದು ಭಗಣವಾದರೆ ಎರಡನೆಯದು ಮಗಣ ಆಗಿದೆ.(ಇದೇ ರೀತಿ ಇಡೀ ಸೂತ್ರಕ್ಕೆ ಅನ್ವಯಿಸಿದಂತೆ ಮೂರು ಮೂರು ಅಕ್ಷರಗಳನ್ನು ಆಯ್ದುಕೊಂಡು ಪ್ರಸ್ತಾರ ಹಾಕಿ ಗಣವನ್ನು ಗುರುತಿಸಿ). ಉದಾಹರಣೆಯಾಗಿ ಗದಾಯುದ್ಧದಲ್ಲಿ ಬರುವ ಈ ಪದ್ಯಕ್ಕೆ ಪ್ರಸ್ತಾರ ಹಾಕಿ ಯಾವ ವೃತ್ತದಲ್ಲಿದೆ ಎಂಬುದನ್ನು ತಿಳಿದುಕೊಳ್ಳೋಣ ಅಲ್ಲವೇ.

ನ	ಜ	ಭ	ಜ	ಜ	ಜ	ರ
U UU U	-U	- U U	U - U	U -U	U - U	- U -
ಕು ರ ಪ ತಿ	ನಿನ್ನ	ಪೊಕ್ಕತೊ	ಱೆಗಳ್ಮೊ	ದಲಾಗಿ	ರೆ ಬ ತ್ತಿ	ದಪ್ಪುವೀ

ನ	ಜ	ಭ	ಜ	ಜ	ಜ	ರ
U U U	U - U	- UU	U - U	U - U	U - U	- U-
ದೊರೆಯ	ದುರಾತ್ಮ	ಸಂ ಖಳ	ನನಾಸೊ	ಳ ಕೊಂಡೊ	ಡೆಭೀಮ	ನಿಸರೋ

ನ	ಜ	ಭ	ಜ	ಜ	ಜ	ರ
U U U	U _U	-U U	U -U	U - U	U - U	- U -
ವರ ಮು	ಮನೆಮ್ಮು	ಮಂ ಕದ	ಡುಗುಂ ಪು	ಗದಿ ತ್ರ್ಗ	ಲಗೆಂದು	ಬಗ್ಗಿಪಂ

ನ	ಜ	ಭ	ಜ	ಜ	ಜ	ರ
U U U	U -U	-U U	U - U	U - U	U - U	- U -
ತಿರೆ ನೆ	ಗೆದ ತ್ತ	ನೇಕ ಬ	ಕ ಕೋಕ	ಮರಾಳ	ವಿ ಹಂಗ	ಮಸ್ತನಂ

ಇದು ಚಂಪಕಮಾಲಾವೃತ್ತ, ಪ್ರತಿ ಪಾದದಲ್ಲಿಯ್ಯೂ ನ ಜ ಭ ಜ ಜ ಜ ರ ಈ ರೀತಿಯ ಗಣ ವಿನ್ಯಾಸವಿದೆ. ಇದೇ ರೀತಿಯಾಗಿ ಕೆಲವು ವೃತ್ತಗಳನ್ನು ಪ್ರಾಚೀನ ಕಾವ್ಯಗಳಿಂದ ಆಯ್ದುಕೊಂಡು ಪ್ರಸ್ತಾರ ಹಾಕಿ ಗಣ ವಿಂಗಡಿಸುವುದನ್ನು ಕಲಿಯಿರಿ.

1.7.1. ಮಾತ್ರಾಗಣ

ವರ್ಣಗಣದಲ್ಲಿ ಗಣವಿಂಗಡಣೆ ವರ್ಣಗಳನ್ನು ಆಧರಿಸಿ ನಡೆಯುತ್ತದೆ. ಎಂಬುದನ್ನು ನೀವು ಬಲ್ಲರಿ. ಆದರೆ ಮಾತ್ರಾಗಣದಲ್ಲಿ ಗಣ ವಿಂಗಡಣೆಗೆ ಮಾತ್ರೆಗಳನ್ನು ಆಧರಿಸಿ ನಡೆಯುತ್ತದೆ. ಮಾತ್ರಾ ಗಣದಲ್ಲಿ ಅತಿಚಿಕ್ಕದಾದ ಗಣ ವ್ಯವಸ್ಥೆ ಎಂದರೆ ಎರಡು ಮಾತ್ರೆಯದು. ದೊಡ್ಡದೆಂದರೆ ಆರುಮಾತ್ರೆಯವರೆಗೆ ಇರುತ್ತದೆ. ಸಾಮಾನ್ಯವಾಗಿ ಮಾತ್ರಾಗಣದಲ್ಲಿ ಮೂರು ಬಗೆಯ ಗಣವಿನ್ಯಾಸ ಹೆಚ್ಚಾಗಿ ಕಂಡು ಬರುತ್ತದೆ. ಅದೆಂದರೆ:

೧ ಮೂರು ಮಾತ್ರೆಯ ಗಣ
೨ ನಾಲ್ಕು ಮಾತ್ರೆಯ ಗಣ
೩. ಐದು ಮಾತ್ರೆ ಗಣ

1.7.1.1. ಮೂರು ಮಾತ್ರೆಯ ಗಣದಲ್ಲಿ ಮೂರು ವಿಧಗಳಿವೆ

ಉದಾಹರಣೆಗೆ:

U U U	U -	U -
೧ ಉಡುಗೆ	೨, ನನ್ನಿ	೩. ಲತಾ

1.7.1.1 ನಾಲ್ಕು ಮಾತ್ರೆಯ ಗಣದಲ್ಲಿ ಐದು ವಿಧ ಕಂಡುಬರುತ್ತದೆ

UUUU	-UU	U-U	--	UU--
ಅ) ಸುಲಲಿತ	ಆ) ಸಂದಸ	ಇ) ಮುರಾರಿ	ಈ) ಜ್ವಾಲಾ	ಉ) ಜಲದೊಳ್

1.7.2 ಐದು ಮಾತ್ರೆಯ ಗಣ ಎಂಟು ವಿಧವಾಗಿ ಕಂಡುಬರುತ್ತದೆ.

UUUUU	-UUU	UUU--	--U	UU--
ಅ) ಕಮಲಮುಖಿ	ಆ) ದಾನವರು	ಇ) ನಿನಗೆಸಾನ್	ಈ) ಕಾವ್ಯಾಕ್ಷಿ	ಉ) ಕವಿರಾಜ

-U-	U-U-	U--
ಊ) ಚಂದನಂ	ಋ) ಅದಾವುದೊ	ೠ) ಮಹೇಶಾ

ಹೊಸ ಕನ್ನಡ ಛಂದಸ್ಸಿನಲ್ಲಿ ಆರು ಮಾತ್ರೆಗಳ ಗಣ ವಿನ್ಯಾಸವು ಇರುವುದನ್ನು ತೀ.ನಂ.ಶ್ರೀ ಅವರು ವಿಶೇಷವಾಗಿ ಗುರುತಿಸಿ ತೋರಿಸಿದ್ದಾರೆ.

-UUUU	-UUUU	UUUUUU	UUUU
ಚೆಲ್ವಿನ ನೆ ಲೆ	ಕಣ್ಣಳ ಬಲೆ	ಸುಖದೊಱತೆಯ	ಬನವಾಸೀ

ಮಾತ್ರಾಗಣದಲ್ಲಿ ನಿರ್ದಿಷ್ಟ ಮಾತ್ರೆಗಳ ಸಂಖ್ಯೆಗೆ ಅನುಗುಣವಾಗಿ ಗಣವಿಭಜನೆ ನೆಡೆಯುತ್ತದೆ. ಗಣಗಳ ಅನುಕ್ರಮದಲ್ಲಿ ಪಾದದಿಂದ ಪಾದಕ್ಕೆ ಸಾಮ್ಯವಿರಬಹುದು, ವ್ಯತ್ಯಾಸವಿರಬಹುದು. ಆದರೆ ಅವುಗಳಲ್ಲಿ ಗಣಗಳನ್ನು ಕಟ್ಟುವ ಮಾತ್ರಾಸಂಖ್ಯೆ ಸಮನಾಗಿರುತ್ತದೆ. ಇದಕ್ಕೆ ಕಂದ, ರಗಳೆ ಷಟ್ಪದಿ ಪದ್ಯಗಳೇ ಉತ್ತಮ ಉದಾಹರಣೆಗಳಾಗಿ ಕಂಡು ಬರುತ್ತವೆ. ಮಾತ್ರಾವೃತ್ತಗಳಲ್ಲಿ ಮುಖ್ಯವಾಗಿ ವೃತ್ತಪಾದದ ಗಣಗಳಲ್ಲಿ ಗಣಗಳ ಕಟ್ಟುಕೆಡಬಾರದು ಅಂದರೆ ಎರಡು ಗಣಗಳ ನಡುವೆ ಒಂದು ಗುರುವನ್ನು ತಂದು ಅದರ ಎರಡು ಮಾತ್ರೆಗಳನ್ನು ಅಚೀಚೆಯ ಗಣಗಳಿಗೆ ಹಂಚಬಾರದು ಉದಾಹರಣೆ ಗುಣವೊಳ್ಳಿತು ಎಂಬಲ್ಲಿರುವ 'ಮೊ' ವಿನ ಎರಡು ಮಾತ್ರೆಗಳಲ್ಲಿ ಒಂದು ಹಿಂದಿನ ಗಣಕ್ಕೂ ಇನ್ನೊಂದನ್ನು ಮುಂದಿನ ಗಣಕ್ಕೂ ಸೇರಿಸಿ ಹಂಚುವಂತಿರಬಾರದು. ಅಂದರೆ ಇಲ್ಲಿ ಗುಣವೊ ಇದು ನಾಲ್ಕು ಮಾತ್ರೆಯ ಗಣವೆಂದು ಪರಿಗಣಿಸಿಳ್ಳಿತು ಎಂಬುದನ್ನು ಮುಂದಿನ ಮಾತ್ರೆಗಳೊಡನೆ ಸೇರಿಸಿ ಗಣವೆಂದು ಪರಿಗಣಿಸಬೇಕು. ಮಾತ್ರಾಗಣಕ್ಕೆ ಉದಾಹರಣೆಯಾಗಿ ಈ ಪದ್ಯವನ್ನು ಗಮನಿಸಬಹುದು.

UUUU	U-U	UUUU
ನೆಲಕಿಱಿ	ವೆನೆಂದು	ಬಗೆವಿರೆ

UUUU	- -	UUUU	-UU	UU-
ಛಲಕಿಱಿ	ವೆಂ ಪಾಂ	ಡುಸುತರೊ	ಳೀ ನೆಲ	ನಿದು ಪಾ

UUUU	UUUU	UU-
ಟ್ನೆಲನೆನ	ಗೆ ದಿನ ಪ	ಸು ತನಂ

UUUU	UUUUU	U - U	U U -	U U -
ಕೊಲಿಸಿದ	ನೆಲಸೊಡ	ನೆ ಮತ್ತೆ	ಪುದುವಾ	ಟ್ಟಿಪೆನೇ

ಇದು ಕಂದ ಪದ್ಯ. ೧ ಮತ್ತು ೩ ನೇ ಪಾದಗಳಲ್ಲಿ ೪ ಮಾತ್ರೆಯ ೩ ಗಣಗಳು ೨ ಮತ್ತು ೪ನೆಯ ಪಾದಗಳಲ್ಲಿ ೪ ಮಾತ್ರೆಯ ೫ ಗಣಗಳು ಬಂದಿವೆ. (ಇದೇ ರೀತಿ ಬೇರೆ ಪದ್ಯಗಳನಾಯ್ದುಕೊಂಡು ಪ್ರಸ್ತಾರ ಹಾಕಿ ಮಾತ್ರಾ ಗಣದ ವೈಶಿಷ್ಟ್ಯವನ್ನು ತಿಳಿಯಿರಿ)

1.8.2. ಅಂಶಗಣ

ಈ ಹಿಂದೆ ಗಮನಿಸಿದಂತೆ ಈ ಗಣದಲ್ಲಿ ಮಾತ್ರೆ ಮುಖ್ಯವಲ್ಲ, ಅಕ್ಷರ ಮುಖ್ಯವಲ್ಲ, ಅಂಶವೇ ಮುಖ್ಯ. ಇಲ್ಲಿಯ ಗಣವಿಂಗಡಣೆ ಅಂಶಗಳನ್ನು ಆಧರಿಸಿದ್ದು, ಅಂಶ ಎಂದರೇನು? ಎಂಬುದು ನಿಮ್ಮ ಪ್ರಶ್ನೆ ಅಲ್ಲವೇ. ಅಂಶ ಎಂದರೆ ಅಚ್ಚ ಕನ್ನಡ ಛಂದಸ್ಸಿನ ಪದ್ಯಪಾದಗಳ ಗಣಗಳಲ್ಲಿ ಹಾಡಿನ ಗತಿಯನ್ನನುಸರಿಸಿ ತಾಳಲಯಗಳು ಸರಿಯಾಗಿ ಹೊಂದಿಕೊಳ್ಳಲು ಮಾತ್ರಾ ಪರಿಮಾಣವು ಹಿಗ್ಗಿ ಅಥವಾ ಕುಗ್ಗಿ ಹೊಂದಿಕೆಗೆ ಅನುವಾಗುವ ಅಕ್ಷರ. ಇಂತಹ ಅಂಶಗಳಿಂದ ಕಟ್ಟದ ಗಣವೇ ಅಂಶಗಣ. ಗಣದ ಮೊದನೆಯ ಅಂಶ ಒಂದು ಗುರು ಇಲ್ಲವೇ ಎರಡು ಲಘುಗಳು ಆಗಿರುತ್ತದೆ. ಅನಂತರ ಬರುವ ಒಂದು ಗುರು ಒಂದು ಲಘು ಒಂದೊಂದು ಅಂಶವೆಂದು ಪರಿಗಣಿತವಾಗುತ್ತದೆ. ಆದರೆ ಒಂದು ಗಣವಲ್ಲಿ ಆದಿಯಲ್ಲಿ ಮಾತ್ರ ಒಂದು ಗುರು ಬರಬೇಕು. ಇಲ್ಲದಿದ್ದರೆ ಅದರ ಬದಲಿಗೆ ಎರಡು ಲಘುಗಳು ಬರಲೇಬೇಕು. ಅಂದರೆ: ಒಂದು ಗಣದ ಮೊದಲಲ್ಲಿ ಒಂದು ಲಘು ಬಂದು ಅದರ ಪಕ್ಕದಲ್ಲೇ ಒಂದು ಗುರು ಬರಬಾರದು, ಮತ್ತೊಂದು ಲಘುವೇ ಬರಬೇಕು. ಉದಾಹರಣೆ ವಿವಸ್ವತಿ ಇದು ಅಂಶಗಣದ ರಚನೆಗೆ ಸರಿಹೊಂದುವುದಿಲ್ಲ. ಇಲ್ಲಿ ಒಂದು ಲಘುವಾದ ಬಳಿಕವೇ ಒಂದು ಗುರು ಬಂದಿದೆ. ತಾರಾಂಬರ ಪದನೋಡಿ, ಮೊದಲು ಎರಡು ಗುರು ಬಂದಿದೆ. ಒಂದೊಂದು ಗುರು ಒಂದೊಂದು ಅಂಶದ ಹಾಗೆ ಎರಡು ಅಂಶ. ಅನಂತರ ಬರುವ ಒಂದೊಂದು ಲಘು ಒಂದೊಂದು ಅಂಶವಾದ್ದರಿಂದ 'ತಾರಾಂಬರ' ಪದದಲ್ಲಿ ಒಟ್ಟು ನಾಲ್ಕು ಅಂಶಗಳು ಇವೆ. ಜಲಜ ಪದ ನೋಡಿ. ಮೂರು ಲಘು ಇವೆ. ಮೊದಲ ಎರಡು ಲಘು ಜಲ ಒಂದು ಅಂಶ ಅನಂತರ ದ ಜ ಒಂದು ಅಂಶ. ಒಟ್ಟು ಎರಡು ಅಂಶಗಳನ್ನು ಈ ಪದ ಹೊಂದಿದೆ ಆದ್ದರಿಂದ ಒಂದು ಗಣದ ಮೂಲಾಂಶ ಎರಡು ಲಘು (UU) ಅಥವಾ ಒಂದು ಗುರು ಆಗಿರುತ್ತದೆ. ಅಂಶಗಳ ವಿನ್ಯಾಸ ಪ್ರಧಾನವಾಗಿ ಮೂರು ಬಗೆಯಾಗಿರುತ್ತದೆ.

೧. ಬ್ರಹ್ಮ ಗಣ
೨. ವಿಷ್ಣುಗಣ
೩. ರುದ್ರ ಗಣ

ಇದರಲ್ಲಿ ಬ್ರಹ್ಮಗಣ ಎರಡು ಅಂಶಗಳನ್ನೂ ವಿಷ್ಣುಗಣ ಮೂರು ಅಂಶಗಳನ್ನೂ ರುದ್ರಗಣ ನಾಲ್ಕು ಅಂಶಗಳನ್ನೂ ಒಳಗೊಂಡಿರುತ್ತದೆ.

1.7.2. ಬ್ರಹ್ಮಗಣ (೨ ಅಂಶಗಳು UU. U. -. -;)

ಬ್ರಹ್ಮಗಣ ೨ ಅಂಶಗಳಿಂದ ಕೂಡಿರುತ್ತದೆ. ಒಂದು ಗುರು ಅಥವಾ ಎರಡು ಲಘುಗಳಾದ ಮೇಲೆ ಒಂದು ಲಘುವಾಗಲಿ ಅಥವಾ ಒಂದು ಗುರುವಾಗಲಿ ಬಂದರೆ ಬ್ರಹ್ಮಗಣ ಎನಿಸುವುದು.

1.7.2.1. ವಿಷ್ಣುಗಣ (೩ ಅಂಶಗಳು UU, U,U; -, -, U.)

ಒಂದು ವಿಷ್ಣುಗಣ ೩ ಅಂಶಗಳಿಂದ ಕೂಡಿರುತ್ತದೆ. ಒಂದು ಗುರು ಅಥವಾ ಎರಡು ಲಘುಗಳಾದ ಮೇಲೆ ಎರಡು ಲಘುಗಳಾಗಲಿ ಅಥವಾ ಎರಡು ಗುರುವಾಗಲಿ ಅಥವಾ ಒಂದು ಗುರು ಒಂದು ಲಘುವಾಗಲಿ ಅಥವಾ ಒಂದು ಲಘು ಗುರುವಾಗಲಿ ಎರಡು ಅಂಶಗಳು ಬಂದರೆ ಅದು ವಿಷ್ಣುಗಣವೆಂಬುದು. ವಿಷ್ಣುಗಣದ ವಿನ್ಯಾಸ ಎಂಟು ಬಗೆಯಾಗಿರುತ್ತದೆ.

1.7.2.2. ರುದ್ರಗಣ (೪ ಅಂಶಗಳು - - - -; UU, -,U.)

ರುದ್ರಗಣ ೪ ಅಂಶಗಳಿಂದ ಕೂಡಿರುತ್ತದೆ. ಗುರು ಲಘುಗಳ ವಿನ್ಯಾಸದ ಆಧಾರದ ಮೇಲೆ ಬ್ರಹ್ಮಗಣ ನಾಲ್ಕು ಬಗೆಯಾಗಿದ್ದರೆ, ವಿಷ್ಣುಗಣ ಎಂಟು ಬಗೆಯಾಗಿದ್ದರೆ, ರುದ್ರಗಣ ಹದಿನಾರು ಬಗೆಯಾಗಿರುತ್ತದೆ.

ಇವುಗಳಿಗೆ ಉದಾಹರಣೆಗಳಾಗಿ ಪಿರಿಯಕ್ಕರದ ಲಕ್ಷಣ ಪದ್ಯದ ಒಂದು ಸಾಲನ್ನು ಗಮನಿಸಿ

ಬ್ರ ವಿ ವಿ ವಿ ವಿ ವಿ ರು
U U U UUU- -UU - - U -U U -UU -U - -
ಮೊದಲೊ ಳಜಗಣಂ ಕುಂದದೆ ಬರ್ಕುತ್ತ ಮಯ್ಯುಗ ಣಂಗಳೆ ವಿಷ್ಣುವಕ್ಕುಂ

ಇಲ್ಲಿ ನೋಡಿ ಬ್ರಹ್ಮಗಣ ೨ ಅಂಶಗಳನ್ನು, ವಿಷ್ಣುಗಣ ೩ ಅಂಶಗಳನ್ನು ರುದ್ರಗಣ ೪ ಅಂಶಗಳನ್ನು ಒಳಗೊಂಡಿರುವುದು ಕಂಡುಬರುತ್ತದೆ.

ಈ ಮೇಲಿನ ಉದಾಹರಣೆಗಳಿಂದ ನಮಗೆ ಸ್ಪಷ್ಟವಾದ ಸಂಗತಿಯೇನೆಂದರೆ ಅಂಶಗಣಗಳನ್ನು ಮಾತ್ರೆಗಳ ಮೂಲಕವಾಗಲಿ, ಅಕ್ಷರಗಳ ಮೂಲಕವಾಗಲಿ ಅಳೆಯಲು ಬರುವುದಿಲ್ಲವೆಂದಾಯಿತು ಬ್ರಹ್ಮಗಣ ೩ರಿಂದ ೪ ರವರೆಗೆ ಮಾತ್ರೆಗಳನ್ನು ಒಳಗೊಳ್ಳುತ್ತದೆ, ೨ ರಿಂದ ೩ ಅಕ್ಷರಗಳನ್ನು ಒಳಗೊಳ್ಳುತ್ತದೆ. ವಿಷ್ಣುಗುಣ ೪ ರಿಂದ ೬ ರವರೆಗೆ ಮಾತ್ರೆಗಳನ್ನು ಒಳಗೊಂಡು ೩ ರಿಂದ ೪ರವರೆಗೆ ಅಕ್ಷರಗಳನ್ನು ಒಳಗೊಂಡು ಅಂದರೆ ಲಯಕ್ಕೆ ಹೇಗೆ ಬೇಕೋ ಹಾಗೆ ಈ ಗಣಗಳು ಹೆಚ್ಚು ಕಡಿಮೆ ಉಚ್ಚಾರಾಂಶಗಳನ್ನು ಕೊಡುತ್ತದೆ. ಆದ್ದರಿಂದ ಅಂಶಗಣಗಳನ್ನು ಅಕ್ಷರಗಳು ಬಿಗಿಯಾಗಿ ಸೇರದೆ ಲಯಕ್ಕನುಸಾರವಾಗಿ ಹಿಗ್ಗಿಯೋ ಕುಗ್ಗಿಯೋ ಹೊಂದಿಕೊಳ್ಳುತ್ತವೆ. ಆದ್ದರಿಂದಲೇ ಲಯಕ್ಕನುಸಾರವಾಗಿ ಹೊರಡುವ ಗಣಗಳು ಸ್ವರ ವಿಸ್ತಾರದ ದೃಷ್ಟಿಯಿಂದ ಸಮಸಮನಾಗಿದ್ದರೂ ಅವುಗಳಲ್ಲಿ ಸೇರಿದ ಅಕ್ಷರಗಳು ಸಮವಾಗಿರದಿದ್ದ. ಅಕ್ಷರಗಳು ಸಮಾಗಿರದಿದ್ದ ಮೇಲೆ ಮಾತ್ರೆಗಳು ಸಮವಾಗುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಿದ್ದೇವೆ.

1.8 ಕನ್ನಡ ಛಂದೋಗ್ರಂಥಗಳ ಸಂಕ್ಷಿಪ್ತ ಪರಿಚಯ

ಇದುವರೆಗೆ ಛಂದಸ್ಸಿನ ಕೆಲವು ಪ್ರಾಥಮಿಕ ಸಂಗತಿಗಳನ್ನು ಮನವರಿಕೆ ಮಾಡಿಕೊಂಡೆವು ಈಗ ನಾವು ಕನ್ನಡದಲ್ಲಿ ಛಂದಸ್ಸನ್ನು ಕುರಿತು ಬಂದಿರುವ ಗ್ರಂಥಗಳ ಪರಿಚಯವನ್ನು ಸ್ವಲ್ಪಮಟ್ಟಿಗೆ ಮಾಡಿಕೊಳ್ಳೋಣ.

ಕನ್ನಡ ಸಾಹಿತ್ಯದ ಮೊತ್ತ ಮೊದಲ ಉಪಲಬ್ಧ ಗ್ರಂಥ ಕವಿರಾಜಮಾರ್ಗ. ಇದರ ಕಾಲ ಸು.೮೫೦. ಕರ್ತೃ ಶ್ರೀ ವಿಜಯನೆಂದು ತಿಳಿಯಲಾಗಿದೆ. ಕವಿರಾಜಮಾರ್ಗ ಮುಖ್ಯವಾಗಿ ಒಂದು ಅಲಂಕಾರಶಾಸ್ತ್ರ ಗ್ರಂಥ. ಆದರೂ ಇದರಲ್ಲಿ ವ್ಯಾಕರಣ ಮತ್ತು ಛಂದಸ್ಸುಗಳಿಗೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ಕೂಡ ಪ್ರಸ್ತಾಪಿಸಲಾಗಿದೆ. ಆದ್ದರಿಂದ ಕನ್ನಡ ಛಂದೋಗ್ರಂಥಗಳ ಚರಿತ್ರೆ ಕವಿರಾಜಮಾರ್ಗ ಕೃತಿಯಿಂದಲೇ ಆರಂಭವಾಗುತ್ತದೆ. ಮೊದಲಿಗೆ ಆ ಕೃತಿ ಸಂಗತಿಗಳನ್ನಿಲ್ಲಿ ಗಮನಿಸೋಣ.

1.8.0. ಕವಿರಾಜಮಾರ್ಗ

ಈಗಾಗಲೇ ನೀವು ತಿಳಿದಿರುವಂತೆ ಶ್ರೀ ವಿಜಯಕೃತ ಕವಿರಾಜಮಾರ್ಗವು ಒಂದು ಅಲಂಕಾರ ಗ್ರಂಥ. ಇದೊಂದು ಲಾಕ್ಷಣಿಕ ಗ್ರಂಥವಾದರೂ ಕನ್ನಡ ನಾಡು ನುಡಿಗಳಿಗೆ ಸಂಬಂಧಿಸಿದ ಕೆಲವು ವಿಚಾರಗಳು ಹೇಗೆ ಪ್ರಸ್ತಾಪಿಸಲ್ಪಟ್ಟಿವೆಯೋ ಹಾಗೆಯೇ ಛಂದಸ್ಸು ವಿಚಾರಕ್ಕೆ ಸಂಬಂಧಿಸಿದಂತೆ ಕೆಲವು ಸಂಗತಿಗಳು ಪ್ರಸ್ತಾಪಿತವಾಗಿವೆ. ಕೃತಿಯ ಮೂರು ಪರಿಚ್ಛೇದಗಳಲ್ಲಿ ಸ್ವಲ್ಪಮಟ್ಟಿಗೆ ಛಂದಸ್ಸಿನ ವಿಷಯಗಳು ಬಂದಿರುತ್ತವೆ. ಇವು ಮುಖ್ಯವಾಗಿ ಕವಿತ್ವ ರಚನೆಯಲ್ಲಿ ಅನುಸರಿಸಬೇಕಾದ ಕೆಲವು ಸಾಮಾನ್ಯ ತತ್ತ್ವಗಳಿಗೆ ಸಂಬಂಧಿಸಿದವಾಗಿದ್ದು, ಛಂದಸ್ಸಿನ ಸಂಜ್ಞಾ ಪ್ರಕರಣದ ವಿಷಯವನ್ನೊಳಗೊಂಡಿವೆ. ಮೊದಲನೆಯ ಪರಿಚ್ಛೇದದಲ್ಲಿ ಯತಿ ವಿಚಾರ, ಛಂದೋಭಂಗ ವಿಷಯ, ಗುರು ಲಘು ದೋಷ ವಿಚಾರ ಬಂದಿದ್ದರೆ, ಎರಡನೆಯ ಪರಿಚ್ಛೇದದಲ್ಲಿ ಪ್ರಾಸ ವಿಚಾರ ಉಲ್ಲೇಖಿತವಾಗಿದೆ. ಮೂರನೆಯ ಪರಿಚ್ಛೇದದಲ್ಲಿ ದ್ವಿಪ್ರಾಸ ದ್ವಂದ್ವಪ್ರಾಸ, ತ್ರಿಪಾಸ ಮತ್ತು ಅಂತ್ಯಾದಿ ಪ್ರಾಸ ವಿಚಾರಗಳು ಎಡೆ ಪಡೆದುಕೊಂಡಿವೆ. ಆದ್ದರಿಂದ ಕನ್ನಡ ಛಂದೋಗ್ರಂಥಗಳ ಅಭ್ಯಾಸದಲ್ಲಿ ಕವಿರಾಜಮಾರ್ಗವನ್ನು ಅವಶ್ಯಕವಾಗಿ ಗಮನಿಸಬೇಕಾಗಿರುತ್ತದೆ.

1.8.1. ಗುಣಗಾಂಕಿಯಂ

ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ಈ ಕೃತಿಗೆ ಮಹತ್ತ್ವದ ಸ್ಥಾನವಿದೆ. ಏಕೆಂದರೆ ಕನ್ನಡ ಛಂದಸ್ಸನ್ನು ಕುರಿತಾದ ಮೊತ್ತಮೊದಲ ಸ್ವತಂತ್ರ ಕೃತಿ ಎಂಬ ಹೆಗ್ಗಳಿಕೆ ಇದಕ್ಕೆ ಸಲ್ಲುವ ಕಾರಣವಿಂದಾಗಿ. ಆದರೆ ಈ ಕೃತಿ ಇನ್ನೂ ಉಪಲಬ್ಧವಿಲ್ಲ. ಇದರ ಕರ್ತೃ ನಮಗೆ ಯಾರೆಂದು ತಿಳಿಯದು. 'ಯಾಪ್ಪರುಂಗಲಕ್ಕಾರಿಹೈ' ಎಂಬ ಛಂದೋಗ್ರಂಥವೊಂದು ತಮಿಳು ಭಾಷೆಯಲ್ಲಿದೆ. ಇದರ ಕರ್ತೃ ಸುಮಾರು ೧೧ನೆಯ ಶತಮಾನದಲ್ಲಿ ಬದುಕಿದ್ದನೆನ್ನಲಾದ ಅಮೃತಸಾಗರ. ಇವರ 'ಯಾಪ್ಪರುಂಗಲಕ್ಕಾರಿಹೈ' ಕೃತಿಗೆ ಸುಮಾರು ೧೨ನೆಯ ಶತಮಾನದಲ್ಲಿ ಇದ್ದನೆನ್ನಲಾದ ಗುಣಸಾಗರನು ವ್ಯಾಖ್ಯಾನವನ್ನು ಬರೆದಿದ್ದಾನೆ. ಇದರ ಪೀಠಿಕಾ ಭಾಗದಲ್ಲಿ ಬೇರೆ ಕೆಲವು ಕೃತಿಗಳ ಜೊತೆಗೆ 'ಗುಣಗಾಂಕಿಯಂ' ಎಂಬ ಕನ್ನಡ ಛಂದೋಗ್ರಂಥದ ಹೆಸರನ್ನು ಹೇಳಿರುವುದನ್ನು ನೋಡಿ ಇದು ಕನ್ನಡದ ಮೊದಲ ಛಂದೋಗ್ರಂಥವೆಂದೂ ತಿಳಿಯಲಾಗಿದೆ. ಇದರ ಕಾಲ ಸುಮಾರು ೮೪೪ರಿಂದ ೮೮೮ ಇರಬೇಕೆಂದು ತೀರ್ಮಾನಿಸಲಾಗಿದೆ. ಆದರೆ ಈವರೆಗೆ ಈ ಕನ್ನಡ ಛಂದೋಗ್ರಂಥ ದೊರೆಯದೆ ಇರುವ ಕಾರಣ ಈ ಗ್ರಂಥದ ಅಸ್ತಿತ್ವ, ಸ್ವರೂಪ ಇವನ್ನು ತಿಳಿಸಲು ಬೇರೆ ಯಾವ ಆಧಾರಗಳು ಇರದಿರುವುದರಿಂದ ಈ ಬಗ್ಗೆ ಏನನ್ನು ನಿಖರವಾಗಿ ಹೇಳಲು ಸಾಧ್ಯವಿರುವುದಿಲ್ಲ.

1.8.2 ಛಂದೋಂಬುಧಿ

ವಿದ್ಯಾರ್ಥಿ ಮಿತ್ರರೆ, ಛಂದಸ್ಸಿನ ಅಧ್ಯಯನ ಸಂದರ್ಭದಲ್ಲಿ ಈ ಕೃತಿಯ ಹೆಸರನ್ನು ನೀವು ಕೇಳಿದ್ದೀರಿ. ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ಈ ಕೃತಿಗೆ ಅಗ್ರಗಣ್ಯ ಸ್ಥಾನವಿದೆ. ಇದುವರೆಗೆ ದೊರೆತಿರುವ ಕನ್ನಡ ಛಂದಶಾಸ್ತ್ರ ಕೃತಿಗಳಲ್ಲಿ ಇದೇ ಮೊದಲನೆಯದು; ಸಮಗ್ರವಾದುದು; ಸ್ವತಂತ್ರವಾದದು ಹಾಗೂ ಪ್ರಮಾಣ ಭೂತವಾದದ್ದು ಎಂಬ ಹೆಗ್ಗಳಿಕೆಗೆ 'ಛಂದೋಂಬುಧಿ' ಕೃತಿ ಪಾತ್ರವಾಗಿದೆ. ಇದರಲ್ಲಿ ಛಂದಸ್ಸಂಬಂಧಿಯಾದ ನಾನಾ ವಿಷಯಗಳು ತಕ್ಕಮಟ್ಟಿಗೆ ವಿಸ್ತಾರವಾಗಿಯೂ ಸ್ವತಂತ್ರವಾಗಿಯೂ ಪ್ರತಿಪಾದಿತವಾಗಿವೆ.

ಪರಮೇಶ್ವರನು ಪಾರ್ವತಿಗೆ ತಿಳಿಸಿದ ಛಂದಸ್ಸು ಪಿಂಗಳನಿಂದ ಲೋಕ ಪ್ರಖ್ಯಾತಿ ಗಳಿಸಿತು. ಪಿಂಗಳನ ಈ ಛಂದೊಂಬುರಾಶಿಯಿಂದ ಮೊಗೆತಂದದ್ದನ್ನು ನಾಗವರ್ಮನು ತನ್ನ ಸತಿಯನ್ನು ಉದ್ದೇಶಿಸಿ ಹೇಳಿದನಂತೆ. 'ಛಂದೋಂಬುಧಿ', ಕೃತಿಯ ಪದ್ಯಗಳೆಲ್ಲವೂ ಆತನ ಸತಿಯನ್ನು ಸಂಭೋದಿಸಿ ಹೇಳಿದಂತೆಯೇ ರಚಿತಗೊಂಡಿವೆ ಎಂಬುದನ್ನು ಈ ಸಂದರ್ಭದಲ್ಲಿ ನಿಮ್ಮ ಗಮನಕ್ಕೆ ತರಬಯಸುತ್ತೇನೆ. (ನೀವು ಅವಶ್ಯವಾಗಿ ಈ ಕೃತಿಯನ್ನು ಒಮ್ಮೆ ಓದುವುದು ಒಳ್ಳೆಯದು.) ನಾಗವರ್ಮ ತನ್ನ ಪ್ರಸಿದ್ಧ ಕೃತಿಗೆ ಕೊಟ್ಟಿರುವ ಹೆಸರು 'ಛಂದೋಂಬುಧಿ' ಎಂದು. ಇದನ್ನು ಪಂಡಿತ ಮಂಡಳಿ ಮೆಚ್ಚುವಂತೆ ಸ್ವಾರಸ್ಯಕರವಾಗಿ ರಚಿಸುವುದು ನಾಗವರ್ಮನ ಸಂಕಲ್ಪವಾಗಿತ್ತಂತೆ.

೧ನೇ ನಾಗವರ್ಮನ 'ಛಂದೋಂಬುಧಿ' ಯಲ್ಲಿ ಆರು ಅಧಿಕಾರಗಳಿವೆ. ಪ್ರಥಮಾಧಿಕಾರವಾದ ಸಂಜ್ಞಾಪ್ರಕರಣದಲ್ಲಿ ಕವಿಯ ವಂಶ ವಿವರ, ಇಷ್ಟ ದೇವತಾಸ್ತುತಿ, ಗಣಗಳು, ಗುರು ಲಘುಗಳು, ಯತಿ, ಪ್ರಾಸ, ಸರ್ವಭಾಷಾ ವಿಷಯ ಜಾತಿಗಳು ಉಕ್ತೆಯಿಂದ ಉತ್ಕೃತಿಯವರೆಗಿನ ೨೬ ವರ್ಣವೃತ್ತಗಳು, ಮದನವತಿ ಮೊದಲಾದ ಅಚ್ಚಗನ್ನಡ ವೃತ್ತಗಳ ಹೆಸರುಗಳು ಇವುಗಳನ್ನು ಕುರಿತ ವಿವರಣೆಯಿದೆ. ದ್ವಿತೀಯಾಧಿಕಾರದಲ್ಲಿ ಉಕ್ತೆಯಿಂದ ಉತ್ಕೃತಿಯವರೆಗಿನ ೨೬ ಛಂದಸ್ಸು (ವರ್ಣವೃತ್ತ) ಗಳಲ್ಲಿ ಒಂದೊಂದರಲ್ಲಿಯೂ ಹುಟ್ಟುವ ಹಲವಾರು ವರ್ಣವೃತ್ತ ಭೇದಗಳನ್ನು ಅಂದರೆ: ವರ್ಣಸಮ ಚತುಷ್ಪದಿಗಳನ್ನು ಲಕ್ಷಣ ಲಕ್ಷ್ಯ ಸಮೀಕರಣ ವಿಧಾನದಿಂದ ಲಕ್ಷಣಿಸಿ ಹೇಳಿದೆ. ತೃತೀಯಾಧಿಕಾರವಾದ ಮಾಲಾವೃತ್ತಾರ್ಧ, ಸಮ ವಿಷಮಾದಿವೃತ್ತ ಮತ್ತು ವಿಷಮವೃತ್ತಗಳನ್ನು ತಿಳಿಸಿದೆ. ಬಳಿಕ ಶ್ಲೋಕ (ಅನುಷ್ಟುಪ್), ವೈತಾಳೀಯ, ಜಾತಿಗಾಥೆ, ರಗಳೆ ದಂಡಕಗಳನ್ನೂ ಕೆಲವು ಪ್ರಭೇದಗಳೊಂದಿಗೆ ಲಕ್ಷಣಿಸಿದೆ. ಲಕ್ಷಣಿಸುವಾಗ ಕೆಲವಕ್ಕೆ ಲಕ್ಷಣಲಕ್ಷ್ಯ ವಿಧಾನವನ್ನು ಅನುಸರಿಸಿದ್ದರೆ, ಕೆಲವಕ್ಕೆ ಕಂದಪದ್ಯ ಬಳಸಿದೆ. ಕಂದಾದಿ ಮಾತ್ರ ವೃತ್ತವೆಂಬ ಚತುರ್ಥಾಧಿಕಾರದಲ್ಲಿ ಕಂದ, ಆರ್ಯೆ, ಗೀತಿಕೆ, ಸಂಕೀರ್ಣಕ, ದುವಯಿ ಇವುಗಳ ಲಕ್ಷಣವನ್ನು ಕಂದ ಪದ್ಯದಲ್ಲಿ ನಿರೂಪಿಸಿದೆ. ಪಂಚಮಾಧಿಕಾರದಲ್ಲಿ ಮೊದಲು ಕರ್ಣಾಟಕ ವಿಷಯ ಜಾತಿ ಛಂದಸ್ಸಿನ ಗಣ ಸ್ವರೂಪವನ್ನು ವಿವರಿಸಿದೆ. ಅನಂತರ ಅಕ್ಕರದ ೫ ಭೇದಗಳಾದ ಪಿರಿಯಕ್ಕರ, ದೊರೆಯಕ್ಕರ, ನಡುವಣಕ್ಕರ, ಎಡೆಯಕ್ಕರ ಮತ್ತು ಕಿರಿಯಕ್ಕರ ಇವುಗಳನ್ನೂ ತ್ರಿಪದಿ ಮತ್ತು ಅದರ ೨ ಭೇದಗಳಾದ ಚಿತ್ರ, ಚಿತ್ರಲತೆಗಳನ್ನೂ ಹೇಳಿದೆ. ತರುವಾಯ ಏಳೆ, ಷಟ್ಪದಿ, ಅಕ್ಕರಿಕೆ, ಚೌಪದಿ, ಛಂದೋವತಂಸ, ಮದನವತಿ, ಗೀತಿಕೆ, ಮತ್ತು ಉತ್ಸಾಹ ಇವನ್ನು ಲಕ್ಷಣಲಕ್ಷ್ಯ ಸಮೀಕರಣ ವಿಧಾನದಲ್ಲಿ ವಿವರಿಸಿದೆ. ಉತ್ಸಾಹ ದಂಡಕದ

ಲಕ್ಷಣವನ್ನು ಇಲ್ಲಿಯೇ ಕೊನೆಯಲ್ಲಿ ಕಂದಪದ್ಯದಲ್ಲಿ ತಿಳಿಸಿದೆ. ಕೊನೆಯದ್ದಾದ ಷಷ್ಠಾಧಿಕಾರದಲ್ಲಿ ಪ್ರಸ್ತಾರ, ನಷ್ಟ, ಉದ್ದಿಷ್ಟ, ಏಕದ್ವ್ಯಾದಿಲಗ ಕ್ರಿಯೆ, ಸಂಖ್ಯಾನ ಮತ್ತು ಅಧ್ವಯೋಗವೆಂಬ ೬ ಪ್ರತ್ಯಯಗಳನ್ನು ಅಂದರೆ: ಛಂದಸ್ಸಂಬಂಧಿಯಾದ ಗಣಿತಾಂಶಗಳನ್ನು ವಿವರಿಸಿದೆ.

1.8.3. ಛಂದೋವಿಚಿತಿ

'ಛಂದೋವಿಚಿತಿ' ಗ್ರಂಥದ ವಿಚಾರಕ್ಕೆ ಬರುವ ಮೊದಲು ಒಂದು ಪ್ರಶ್ನೆಯನ್ನು ನಿಮಗೆ ಕೇಳಬಿಚ್ಛಿಸುತ್ತೇನೆ. 'ಕರ್ಣಾಟಕ ಕಾದಂಬರಿ' ಹಾಗೂ 'ಛಂದೋಂಬುಧಿ' ಕೃತಿಗಳನ್ನು ರಚಿಸಿದವರು ಯಾರು ? ನಿಮ್ಮ ಉತ್ತರ ೧ನೆಯ ನಾಗವರ್ಮ ಎಂದಲ್ಲವೆ. ಅಂದ ಮೇಲೆ 'ಛಂದೋವಿಚಿತಿ' ಗ್ರಂಥವನ್ನು ರಚಿಸಿದ ಕವಿ ಯಾರು ? ಎಂದರೆ ೨ನೆಯ ನಾಗವರ್ಮ. ಈತನ ಕಾಲ ಕ್ರಿ.ಶ. ೧೦೪೨.

ಕಾವ್ಯಾವಲೋಕನ, ಅಭಿದಾನ ವಸ್ತುಕೋಶ, ವರ್ಧಮಾನ ಪುರಾಣ ಇವು ೨ನೆಯ ನಾಗವರ್ಮನ ಇನ್ನಿತರ ಕೃತಿಗಳಾಗಿವೆ. ಆದರೆ ಛಂದಶ್ಶಾಸ್ತ್ರವನ್ನು ಕುರಿತಾದ ಆತನ ಛಂದೋವಿಚಿತಿ ಕೃತಿ ನಮಗೆ ಇದುವರೆಗೂ ಸಿಕ್ಕಿಲ್ಲ. ಕಾವ್ಯಾವಲೋಕನದ ಉಪಸಂಹಾರ ಭಾಗದಲ್ಲಿ ಬರುವ ಕೊನೆಯ ಪದ್ಯದಿಂದ ಈತ ಛಂದೋಗ್ರಂಥವೊಂದನ್ನು ರಚಿಸಿರುವನೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಆದರೆ ಈ ಗ್ರಂಥ ಇನ್ನೂ ದೊರೆಯದೆ ಇರುವುದರಿಂದ ಅದರ ವಸ್ತು ಸ್ವರೂಪವನ್ನು ಕುರಿತಾದ ಸಂಗತಿಗಳನ್ನು ನಾವು ಇಲ್ಲಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಿರುವುದಿಲ್ಲ.

1.8.4. ಕವಿಜಿಹ್ವಾಬಂಧನಂ

'ಕವಿಜಿಹ್ವಾಬಂಧನಂ' ಕೃತಿಯ ಕರ್ತೃ ಯಾರೆಂದು ನಿಮಗೆ ಗೊತ್ತೆ? ಇಲ್ಲ ಅಲ್ಲವೇ. ಈ ಗ್ರಂಥದ ಕರ್ತೃ ಈಶ್ವರ ಕವಿ. ಈತನ ಕಾಲ ಕ್ರಿ.ಶ ಸು. ೧೫೦೦, 'ಕವಿಜಿಹ್ವಾಬಂಧನಂ' ಕಾವ್ಯೋಪಯುಕ್ತವಾದ ವಿವಿಧ ಲಕ್ಷಣಾಮಿಶ್ರ ಗ್ರಂಥವಾದರೂ ಮುಖ್ಯವಾಗಿ ಛಂದಶ್ಶಾಸ್ತ್ರವನ್ನು ಕುರಿತದ್ದಾಗಿದೆ.

'ಕವಿಜಿಹ್ವಾಬಂಧನ' ದಲ್ಲಿ ಒಟ್ಟು ನಾಲ್ಕು ಅಧ್ಯಾಯಗಳಿವೆ ಇವನ್ನು ಕ್ರಮವಾಗಿ ಗಣವಿವೇಕ ನಿರೂಪಣ, ಪ್ರಾಸವಡಿಭೇದ ನಿರೂಪಣ, ವರ್ಣವಿವೇಕ ನಿರೂಪಣ, ಸರ್ವಕಳಾ ಪ್ರಪಂಚ ನಿರೂಪಣ ಎಂಬುದಾಗಿ ಕವಿ ಕರೆದಿದ್ದಾನೆ. ಮೊದಲನೆಯ ಅಧ್ಯಾಯದಲ್ಲಿ ಇಷ್ಟದೇವತಾ ಸ್ತುತಿಯ ಅನಂತರ ಕೃತಿ ಮತ್ತು ಕರ್ತೃ ಪರಿಚಯವನ್ನು ಮಾಡಿಕೊಡಲಾಗಿದೆ. ತರುವಾಯ ಮ.ಯ,ರ,ಸ,ತ,ಜ,ಭ, ಮತ್ತು ನಗಣಗಳ ಲಕ್ಷಣವನ್ನೂ ಶುಭಾಶುಭ ಫಲಗಳನ್ನೂ ರಸದಿಕ್ಕು ವರ್ಣ ವಾಹನ ಲಿಂಗ ಗ್ರಹ ಕುಲಗಳನ್ನೂ ನಿಷಿದ್ಧ ಗಣಯೋಜನೆ ಮತ್ತು ಗಣ ವಿನ್ಯಾಸಗಳನ್ನೂ ತುಂಬ ವಿವರವಾಗಿ ನಿರೂಪಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಪ್ರಾಸದ ಸಾಮಾನ್ಯ ಸ್ವರೂಪ ಹಾಗೂ ಅದರ ಭೇದಗಳನ್ನು ತಿಳಿಸಿದೆ. ಮುಂದೆ ತೆಲುಗಿನಲ್ಲಿ ವಿಶಿಷ್ಟವೆನಿಸಿದ ವಡಿಯ ಲಕ್ಷಣವನ್ನು ಹೇಳಿ ಅದರ ೨೦ ಬಗೆಯ ಭೇದಗಳನ್ನು ವಿವರವಾಗಿ ನಿರೂಪಿಸಿದೆ. ಮೂರನೆಯ ಅಧ್ಯಾಯದಲ್ಲಿ ಅಕ್ಷರಗಳ ಸಾಲು, ಬಾಲಾದಿಸ್ವರಗಳ ಫಲ, ವ್ಯಂಜನ ಮತ್ತು ಸ್ವರಗಳ ಲಿಂಗಗಳು, ಸ್ವರ ಮತ್ತು ವ್ಯಂಜನಗಳ

ಶುಭಾಶುಭ ಫಲಗಳು, ಅಕ್ಷರೋತ್ಪತ್ತಿ ಅಕ್ಷರಾಧಿ ದೇವತೆಗಳು, ಕಾವ್ಯಾರಂಭಕ್ಕೆ ಸಂಬಂಧಿಸಿದ ನಂಬಿಕೆಗಳು ಇವನ್ನು ಪ್ರಸ್ತಾಪಿಸಿದೆ. ಇನ್ನೂ ನಾಲ್ಕನೆಯ ಅಧಿಕಾರದಲ್ಲಿ ಭಾಷೆ, ವ್ಯಾಕರಣ ಮತ್ತು ಅಲಂಕಾರ ಸಂಬಂಧವಾದ ಕೆಲವು ವಿಚಾರಗಳು ಪ್ರಸ್ತಾಪಿತವಾಗಿಯೇ ವಿನಾ ಛಂದೋವಿಷಯಗಳೇನೂ ನಿರೂಪಿತವಾಗಿಲ್ಲ. ಆದ್ದರಿಂದ ಕವಿಜಿಹ್ವಾಬಂಧನ ಇಡಿಯಾಗಿ ಛಂದಸ್ಸಿಗೆ ಮೀಸಲಾದ ಕೃತಿಯಲ್ಲವೆಂಬುದು ಮುಖ್ಯ ಸಂಗತಿಯಾಗಿದೆ.

1.8.5. ಛಂದಸ್ಸಾರ

ಛಂದಸ್ಸಾರ ಕೃತಿಯ ಕರ್ತೃ ಗುಣಚಂದ್ರ .ಇವನ ಕಾಲ ಕ್ರಿ.ಶ. ಸು. ೧೬೫೦ ಕನ್ನಡ ಛಂದಸ್ಸನ್ನು ಅತ್ಯಂತ ಸಂಗ್ರಹವಾಗಿ ಹೇಳಿರುವ ಕೃತಿ ಎಂಬ ಹೆಗ್ಗಳಿಕೆ ಇದು ಪಾತ್ರವಾಗಿದೆ.

'ಛಂದಸ್ಸಾರ' ಕೃತಿಯಲ್ಲಿ ಒಟ್ಟು ಐದು ಅಧಿಕಾರಗಳಿವೆ. ಮೊದಲ ಅಧಿಕಾರದಲ್ಲಿ ಕೃತಿ ರಚನಾ ಸಂಕಲ್ಪವಾದ ಮೇಲೆ ಲಘು ಗುರುಗಳು, ಗಣ ಸ್ವರೂಪ, ಯತಿ ಪ್ರಾಸಗಳು ಇವುಗಳ ವಿಚಾರ ಕಂದ ಪದ್ಯದಲ್ಲಿ ಬಂದಿದೆ. ಎರಡನೆಯ ಅಧಿಕಾರದಲ್ಲಿ ಆರ್ಯಾ, ಗೀತೆ ಮತ್ತು ಕಂದ ಪದ್ಯದ ಲಕ್ಷಣವನ್ನು ಹೇಳಿದೆ. ಬಳಿಕ ಕನ್ನಡದ ಮಾತ್ರಾ ಷಟ್ಪದಿಗಳಾದ ಶರ, ಕುಸುಮ, ಭೋಗ, ಭಾಮಿನೀ, ಪರಿವರ್ಧಿನಿ, ವಾರ್ಧಕ ಇವುಗಳನ್ನು ಲಕ್ಷಣ ಲಕ್ಷ ಪೂರ್ವವಾಗಿ ವಿವರಿಸಿದೆ. ಮೂರನೆಯ ಅಧಿಕಾರದಲ್ಲಿ ಉಕ್ತೆಯಿಂದ ಉತ್ಕೃತಿಯವರೆಗೆ ಇರುವ ೨೬ ಛಂದಸ್ಸುಗಳಲ್ಲಿ ಹುಟ್ಟುವ ವರ್ಣಸಮ ವೃತ್ತಗಳಲ್ಲಿ ಕೆಲವು ಮುಖ್ಯಭೇದಗಳನ್ನು ವಾಕ್ಯರೂಪದ ಮಾತ್ರಾ ಪದ್ಧತಿಯಲ್ಲಿ ನಿರೂಪಿಸಿದೆ. ನಾಲ್ಕನೆಯ ಅಧಿಕಾರದಲ್ಲಿ ದಂಡಕ ಭೇದಗಳು, ಆರ್ಯಾಭೇದಗಳು, ಗೀತಿ ಭೇದಗಳು, ವೈತಾಳೀ ಭೇದಗಳು, ಅನುಷ್ಟುಪ್ ಭೇದಗಳು ಷೋಡಶ ಮಾತ್ರಾ ದ್ವಿಪಾದಾದಿ ಮಾತ್ರಾ ವೃತ್ತಭೇದಗಳು ಇವನ್ನು ಲಕ್ಷಣ ಲಕ್ಷ್ಯ ಪದ್ಧತಿಯಲ್ಲಿ ವಿವರಿಸಿದೆ. ಅಲ್ಲದೆ ಅರ್ಧಸಮವೃತ್ತ ಹಾಗೂ ವಿಷಮವೃತ್ತ ಪ್ರಕರಣಗಳು ಲಕ್ಷಣ ಲಕ್ಷ್ಯ ಪೂರ್ವಕವಾಗಿ ಇಲ್ಲಿಯೇ ವಿವರಿಸಲ್ಪಟ್ಟಿವೆ. ಇನ್ನೂ ಕೊನೆಯದಾದ ಐದನೆಯ ಅಧಿಕಾರದಲ್ಲಿ ಧ್ರುವತಾಳ ಮೊದಲಾದ ತಾಳಗಳನ್ನು ತಾಳವೃತ್ತಗಳಿಗೆ ಅನ್ವಯಿಸುವ ಗಣ ಮತ್ತು ಪ್ರಾಸಗಳ ಸ್ವರೂಪವನ್ನು ಮೊದಲು ನಿರೂಪಿಸಿ, ದ್ವಿಪದಿ, ತ್ರಿಪದಿ, ರಗಳೆ, ಲಾವಣಿ, ಸೀಸ ಪದ್ಯ ಇವುಗಳ ಸಂಕ್ಷಿಪ್ತ ವಿಚಾರದೊಂದಿಗೆ ಗ್ರಂಥವು ಮುಕ್ತಾಯಗೊಂಡಿದೆ. ಕನ್ನಡ ಛಂದಸ್ಸನ್ನು ಚೊಕ್ಕವಾಗಿಯೂ ಸರಳವಾಗಿಯೂ ನಿರೂಪಿಸುವ ಒಂದು ಸರಳ ಸುಂದರ ಗ್ರಂಥ ಇದು.

1.8.6 ಷಟ್ಪ್ರತ್ಯಯ

ಈ ಗ್ರಂಥದ ಕರ್ತೃ ಶಾಲ್ಯದ ಕೃಷ್ಣರಾಜ. ಕಾಲ ಕ್ರಿ.ಶ. ಸು. ೧೭೪೮. ಈ ಕೃತಿ ಉಪಲಬ್ಧವಿಲ್ಲ. ಕವಿ ಚರಿತೆಯಲ್ಲಿ ಉಲ್ಲೇಖಿಸಿದ ಪದ್ಯದ ಆಧಾರದಿಂದ ಇದರಲ್ಲಿ ಆರು ಭಾಗಗಳಿದ್ದು ಅದಕ್ಕೆ ಒಂದೊಂದು ಪ್ರತ್ಯಯ ಎಂಬ ಹೆಸರನ್ನು ಕೊಟ್ಟಿರಬಹುದೆಂದು ತಿಳಿಯಲಾಗಿದೆ.

1.8.7 ವೃತ್ತರತ್ನಾಕರ ಟೀಕೆ

ಇದರ ಕರ್ತೃ ಯಾರೆಂದು ತಿಳಿಯದು. ಈ ಕೃತಿಯ ರಚನೆಯ ಕಾಲವನ್ನು ಕವಿಚರಿತೆಕಾರರು ಕ್ರಿ.ಶ. ಸು. ೧೭೭೫ ಇರಬಹುದೆಂದು ತಿಳಿಸಿದ್ದಾರೆ. ಕವಿ ಚರಿತೆಕಾರರು ಉದ್ಧರಿಸಿರುವ ಪದ್ಯದ ಆಧಾರದಿಂದ ಈ ಗ್ರಂಥವು ಕೇದಾರಭಟ್ಟನ ಸಂಸ್ಕೃತ ಛಂದೋಗ್ರಂಥವಾದ 'ವೃತ್ತರತ್ನಾಕರ' ಕೃತಿಗೆ ಬರೆದ ಟೀಕೆಯಾಗಿರಬೇಕೆಂದು ಭಾವಿಸಲಾಗಿದೆ.

1.8.8. ನಂದಿಛಂದಸ್ಸು

ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ಹೆಸರಿಸಲೇಬೇಕಾದ ಕೃತಿ ಇದು. ಇದರ ಕರ್ತೃವಿನ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಆದರೂ ಲಭ್ಯಮಾಹಿತಿಗಳ ಪ್ರಕಾರ ವೀರಭದ್ರನೆಂಬುವನು ಇದರ ಕರ್ತೃ ಎಂದು ತಿಳಿಯಲು ಆಸ್ಪದವಿದೆ. ಈ ಕೃತಿಗೆ 'ನಂದಿಛಂದೋರ್ಣಮ್' ಎಂಬ ಹೆಸರು ಕೂಡ ಇದೆ. ಈ ಗ್ರಂಥದ ಕಾಲವನ್ನು ಕ್ರಿ.ಶ. ಸು. ೧೮೪೬ ಎಂದು ತಿಳಿಯಲಾಗಿದೆ.

ನಂದಿ ಛಂದಸ್ಸು ಕನ್ನಡ ಛಂದಸ್ಸಿನ ಒಂದು ಲಘು ಕೃತಿ. ಇದರಲ್ಲಿ ಮೂರು ಅಧ್ಯಾಯಗಳಿದ್ದು ಕೃತಿ ಅಸಮಗ್ರವಾಗಿದೆ. ಇಲ್ಲಿ ಕೃತಿಕಾರ ತೆಲುಗು .ಛಂದೋಗ್ರಂಥಗಳಿಗೆ ಋಣಿಯಾಗಿದ್ದಾನೆ. ತೆಲುಗು ಪರಿಭಾಷೆಯನ್ನನುಸರಿಸಿ ಸೂರ್ಯ, ಇಂದ್ರ, ಚಂದ್ರ: ಅಂದರೆ ಅಂಶಗಣಗಳಾದ ಬ್ರಹ್ಮ, ವಿಷ್ಣು, ರುದ್ರಗಣಗಳನ್ನು ವರ್ಣಗಳಿಗನುಗುಣವಾಗಿ ವಿಂಗಡಿಸಿದ್ದಾನೆ. ಮ, ಯ, ಸ, ತ, ನ, ಭ, ಜ, ರ, ಗಣಗಳು ಸ ಮತ್ತು ತೇಟಗೀತಿಗಳಲ್ಲಿಯೂ ಪ್ರಾಸ ಮತ್ತು ವಡಿ ವಿಚಾರಗಳನ್ನೂ ಕಂದಪದ್ಯಗಳಲ್ಲಿಯೂ ಪ್ರಸ್ತಾಪಿಸಿದ್ದಾನೆ. ಎರಡು ಹಾಗೂ ಮೂರನೆಯ ಅಧ್ಯಾಯದಲ್ಲಿ ಉಕ್ತೆಯಿಂದ ಉತ್ಕೃತಿಯವರೆಗಿನ ೨೬ ಛಂದೋಬಂಧಗಳಲ್ಲಿ ಕೆಲವನ್ನು ಲಕ್ಷಣ ಲಕ್ಷ್ಯಪೂರ್ವಕವಾಗಿ ವಿವರಿಸಿದ್ದಾನೆ. ಷಟ್ಪತ್ರಯಗಳಾದ ಲಕ್ಷಣ, ಸೀಸ, ದ್ವಿಪದ, ಆರ್ಯೆ, ಲಯಗ್ರಾಹಿ ಇವುಗಳ ಲಕ್ಷಣದೊಂದಿಗೆ ಗ್ರಂಥ ಕೊನೆಗೊಂಡಿದೆ.

ಈ ಗ್ರಂಥದ ಲಕ್ಷಣ ಲಕ್ಷ್ಯ ಪದ್ಯಗಳ ಯತಿ ಸ್ಥಾನಗಳಲ್ಲಿ ತೆಲುಗು ಛಂದಸ್ಸಿನ ವಡಿಯು ನಿಯತವಾಗಿ ಪಾಲಿತವಾಗಿರುವುದೊಂದು ವಿಶೇಷ. ಈ ಗ್ರಂಥದ ಕರ್ತೃ ತೆಲುಗು ದೇಶ ನಿವಾಸಿಯೂ ತೆಲುಗುಭಾಷಾ ಸಾಹಿತ್ಯಜ್ಞನೂ ಆಗಿದ್ದನೆಂದು ತಿಳಿಯುವುದಕ್ಕೆ ಸಾಕಷ್ಟು ನಿದರ್ಶನಗಳಿವೆ.

1.8.9. ಇತರೆ ಛಂದೋಗ್ರಂಥಗಳು

೧೯ನೆಯ ಶತಮಾನದ ಉತ್ತರಾರ್ಧದಿಂದ ತೊಡಗಿ ಈಚಿನ ಕಾಲದವರೆಗೆ ಕೆಲವು ಸಣ್ಣಪುಟ್ಟ ಛಂದೋಗ್ರಂಥಗಳು ರಚಿತವಾಗಿವೆ. ಇವುಗಳಲ್ಲಿ ಚಾವಲಿರಾಮಸ್ವಾಮಿ ಶಾಸ್ತ್ರೀಗಳ 'ಕರ್ಣಾಟಕ ಛಂದೋಲಂಕಾರ ಸಾಹಿತ್ಯ ಲಕ್ಷಣ (೧೮೮೫) ಧೋಂಡೋ ನರಸಿಂಹ ಮುಳಬಾಗಿಲ ಅವರ ಛಂದಸ್ಸಾರ, (೧೯೦೦) ನರಸಿಂಹ ಮಾಧವ ಮಹಿಷಿಯವರ 'ಛಂದೋಶಾಸ್ತ್ರ' (೧೯೦೩) ಶ್ರೀನಿವಾಸಾಚಾರ್ಯರ 'ಛಂದೋಮಾಲಿಕೆ' (೧೯೦೫) ಕವಿಶ್ವರ ನರಸಪ್ಪನವರ 'ಛಂದೋದರ್ಪಣವು' (೧೯೧೩) ಜೆ. ರಘುಪತ್ಯಾಚಾರ್ಯರ 'ಶ್ರೀ ನರಸಿಂಹ ಕರ್ಣಾಟಕ ಛಂದೋರಾಜಂ' (೧೯೨೬) 'ಕರ್ಣಾಟಕ ಛಂದೋಮಂಜರಿ' (೧೯೨೬) ಮುಂತಾದವನ್ನು ಇಲ್ಲಿ ಉದಾಹರಿಸಬಹುದು. ಇವೆಲ್ಲ ಛಂದಸ್ಸಿನ ವಿದ್ಯಾರ್ಥಿಗಳಿಗೆ ಅಭ್ಯಾಸದ ಕೈಪಿಡಿಗಳೆನ್ನಬೇಕು. ಇವುಗಳಲ್ಲಿ ಕೆಲವು ಕೃತಿಗಳು 'ಛಂದೋಂಬುಧಿ'ಯನ್ನೆ ಮುಖ್ಯವಾಗಿಟ್ಟುಕೊಂಡು ರಚಿತವಾಗಿವೆ. ಆದರೂ ಛಂದಸ್ಸಿನ ಸಮಗ್ರವೂ ಸಮರ್ಪಕವೂ ಆದ ವಿವೇಚನೆ ಈ ಕೃತಿಗಳಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ.

ಸಂಸ್ಕೃತ ಛಂದ ಶ್ಯಾಸ್ತ್ರ ಗ್ರಂಥಗಳಾದ, ಜಯಕೀರ್ತಿಯ 'ಛಂದೋನುಶಾಸನಮ್'. ೩ನೆಯ ಸೋಮೇಶ್ವರನ 'ಮಾನಸೋಲ್ಲಾಸ' 'ಅಭಿಲಷಿತಾರ್ಥ ಚಿಂತಾಮಣಿ ' 'ಶಾರ್ಜಾದೇವನ' 'ಸಂಗೀತ ರತ್ನಾಕರ' ಈ ಕೃತಿಗಳಲ್ಲಿ ಕನ್ನಡ ಛಂದಸ್ಸಿನ ಸಂಗತಿಗಳು ವ್ಯಕ್ತವಾಗಿವೆ. ಆದ್ದರಿಂದ ಈ ಕನ್ನಡ ಮತ್ತು ಸಂಸ್ಕೃತ ಛಂದೋಗ್ರಂಥಗಳ ನೆರವಿನಿಂದ ನಾವು ಕನ್ನಡ ಛಂದಸ್ಸಿನ ಚರಿತ್ರೆಯನ್ನು ಪರಿಚಯ ಮಾಡಿಕೊಳ್ಳಲು ಸಾಧ್ಯವಿದೆ.

1.9 ಸ್ವಪರೀಕ್ಷಾ ಪ್ರಶ್ನೆಗಳು

೧. ವೇದಾಂಗಗಳು ಎಷ್ಟು ? ಹೆಸರಿಸಿ.

....

....

....

೨. ಛಂದಸ್ಸು ಎಂದರೇನು? ವಿವರಿಸಿ.

....

....

....

೩. ಛಂದಸ್ಸಿನ ಪ್ರಯೋಜನಗಳನ್ನು ಸಂಗ್ರಹವಾಗಿ ನಿರೂಪಿಸಿ.

....

....

....

೪. ಲಯ ಎಂದರೇನು ? ತಿಳಿಸಿ.

....

....

....

....

೫. ಯತಿ ಎಂದರೇನು ? ತಿಳಿಸಿ.

....

....

....

೬. 'ಯತಿಯೆಂಬುದುಸಿರ್ವತಾಣಂ' ಎಂದು ಹೇಳಿರುವ ಲಾಕ್ಷಣಿಕ ಯಾರು ?

....

....

....

....

೭. ಯತಿಯ ಬಗ್ಗೆ ನಾಗವರ್ಮ ಹಾಗೂ ಕೇಶಿರಾಜ ಇವರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಸಂಗ್ರಹವಾಗಿ ನಿರೂಪಿಸಿ.

೮. ಪ್ರಾಸ ಎಂದರೇನು ? ಪ್ರಾಸದಲ್ಲಿ ಎಷ್ಟು ಬಗೆಗಳು? ತಿಳಿಸಿ.

೯. ನಾಗವರ್ಮನ ಪ್ರಕಾರ ಆದಿ ಪ್ರಾಸದಲ್ಲಿ ಎಷ್ಟು ಒಳ ಭೇದಗಳಿವೆ ? ಹೆಸರಿಸಿ.

೧೦. ಲಘು, ಗುರು, ಪ್ಲುತಗಳ ಸ್ವರೂಪವನ್ನು ತಿಳಿಸಿ.

೧೧. ಗಣ ಎಂದರೇನು ?

೧೨. ವರ್ಣಗಣ ಎಂದರೇನು ?

೧೩. ವರ್ಣಗಣದ ಗಣ ವಿನ್ಯಾಸದಲ್ಲಿ ಎಷ್ಟು ಬಗೆ ?

೧೪. ಮಾತ್ರಾಗಣ ಎಂದರೇನು ?

೧೫. ಅಂಶಗಣ ಎಂದರೇನು ? ಅಂಶಗಣದಲ್ಲಿ ಎಷ್ಟು ಬಗೆಗಳು ? ತಿಳಿಸಿ.

....

....

....

೧೬. ಬ್ರಹ್ಮಗಣ, ವಿಷ್ಣುಗಣ, ರುದ್ರಗಣಗಳು ಎಷ್ಟು ಅಂಶಗಳಿಂದ ಕೂಡಿರುತ್ತವೆ ?

....

....

....

೧೭. ಬ್ರಹ್ಮಗಣ, ವಿಷ್ಣುಗಣ, ರುದ್ರಗಣಗಳ ಗಣವಿನ್ಯಾಸವು ಎಷ್ಟು ಬಗೆಯಾಗಿರುತ್ತದೆ ?

....

....

....

೧೮. ಕವಿರಾಜಮಾರ್ಗದ ಕರ್ತೃ ಯಾರು ?

....

....

....

೧೯. ೧ನೆ ನಾಗವರ್ಮನ ಕೃತಿಯ ಹೆಸರೇನು ?

....

....

....

೨೦. 'ಗುಣಗಾಂಕಿಯಂ' ದ ಬಗ್ಗೆ ಟಿಪ್ಪಣಿ ಬರೆಯಿರಿ

....

....

....

....

....

೨೧. ನಾಗವರ್ಮನ 'ಛಂದೋಂಬುಧಿ' ಕೃತಿಯನ್ನು ಪರಿಚಯಿಸಿ.

....

....

....

....

೨೨. ಛಂದೋವಿಚಿತಿ ಗ್ರಂಥದ ಕರ್ತೃ ಯಾರು ?

....

....

....

೨೩. ಈಶ್ವರ ಕವಿಯ ಕೃತಿಯ ಹೆಸರೇನು ?

....

....

೨೪. 'ಛಂದಸ್ಸಾರ' ದ ಕರ್ತೃ ಯಾರು ? ಇದರ ರಚನೆಯ ಕಾಲ ಯಾವುದು ?

....

....

....

೨೫. 'ನಂದಿ ಛಂದಸ್ಸು ' ಕೃತಿಯ ಬಗ್ಗೆ ಟಿಪ್ಪಣಿ ಬರೆಯಿರಿ.

....

....

....

....

....

1.10 ಸಾರಾಂಶ

ಛಂದ ಎಂದರೆ ಸುಂದರ, ಮನೋಹರ; ಮನಸ್ಸಿಗೆ ಹಿಡಿಸುವಂತಹದ್ದು. ಕವಿತೆಗಳ ಸಾಲು ಮತ್ತು ಅದರ ನುಡಿಗಳನ್ನು ಕ್ರಮವರಿತ ನಿಟ್ಟಿನಲ್ಲಿ ಕೋದರೆ ಅದಕ್ಕೊಂದು ಸೌಂದರ್ಯ ಬರುತ್ತದೆ, ಅರ್ಥವಂತಿಕೆ ಹೆಚ್ಚುತ್ತದೆ. ಮಾತ್ರಾಕ್ಷರಗಳ ನಿಯಮದಿಂದ ಕೂಡಿದ ವಾಕ್ಕು ಛಂದಸ್ಸು. ಅಕ್ಷರ ಪರಿಮಿತಿಯೇ ಛಂದಸ್ಸು. ಆಹ್ಲಾದವನ್ನುಂಟು ಮಾಡುವುದು ಯಾವುದೋ ಅದು ಛಂದಸ್ಸು. ಸ್ವರ ಸಂಯೋಜನೆಗಳ ನಿಯತವಾದ ಆವರ್ತನೆಯಿಂದುಂಟಾಗುವ ಆಂದೋಲನದಿಂದ ಛಂದಸ್ಸು ನಿಜವಾಗಿಯೂ ಆನಂದವನ್ನು ಉಂಟುಮಾಡುತ್ತದೆ. ಹ್ರಸ್ವ ದೀರ್ಘಾಕ್ಷರಗಳು ಛಂದಸ್ಸಿನ ತಳಹದಿ. ಛಂದಸ್ಸಿನ ಮಾನದಂಡವೇ ಇವುಗಳಾದ್ದರಿಂದ ಮಾತ್ರೆಗಳ ಮೂಲಕ ಇವನ್ನು ಅಳೆಯಲಾಗುತ್ತದೆ. ಹ್ರಸ್ವದೀರ್ಘಾಕ್ಷರಗಳು ಲಘು ಗುರು ಎಂದು ಗಣಿಸಲ್ಪಡುತ್ತವೆ. ಗಣವ್ಯವಸ್ಥೆಯ ಆಧಾರದ ಮೇಲೆ ಕನ್ನಡ ಛಂದಸ್ಸನ್ನು ಮೂರು ಬಗೆಯಾಗಿ ವಿಂಗಡಿಸಬಹುದಾಗಿದೆ. ಅಕ್ಷರ ಛಂದಸ್ಸು, ಮಾತ್ರಾ ಛಂದಸ್ಸು, ಅಂಶ ಛಂದಸ್ಸು ಎಂಬುದಾಗಿ. ವರ್ಣವೃತ್ತಗಳು ಅಕ್ಷರ ಛಂದಸ್ಸಿಗೆ ಸ್ಪಷ್ಟ ಉದಾಹರಣೆಯಾದರೆ, ಪ್ರಾಕೃತ ಅಪಭ್ರಂಶ ಮೂಲದ ಕಂದ ರಗಳೆಗಳು ಮಾತ್ರಾ ಛಂದಸ್ಸಿಗೆ ದ್ಯೋತಕ ಎನಿಸುತ್ತವೆ. ಅಂಶ ಛಂದಸ್ಸು ವಿಶೇಷವಾಗಿ ಕರ್ಣಾಟಕ ವಿಷಯ ಜಾತಿಗೆ ಸೇರಿದ್ದು. ಆದ್ದರಿಂದ ಇದನ್ನು ದೇಶಿ ಛಂದಸ್ಸು ಎಂದು ಕರೆಯುತ್ತೇವೆ. ಅಕ್ಷರ ಛಂದಸ್ಸಿನಲ್ಲಿ ಅಕ್ಷರಗಳು ಪ್ರಧಾನವಾದರೆ, ಮಾತ್ರಾ ಛಂದಸ್ಸಿನಲ್ಲಿ ಮಾತ್ರೆಗಳೇ ಪ್ರಧಾನ. ಅಂಶ ಛಂದಸ್ಸು ಅಂಶಗಳನ್ನು ಆಧರಿಸಿದ್ದು. ಪ್ರಾಚೀನ ಚಂಪೂ ಕಾವ್ಯಗಳಲ್ಲಿ ಅಕ್ಷರ ಛಂದಸ್ಸು ಹೆಚ್ಚಾಗಿ ಕಂಡುಬರುತ್ತದೆ. ಮಾತ್ರಾ ಛಂದಸ್ಸು, ಪ್ರಾಚೀನ ಅರ್ವಾಚೀನ ಕಾವ್ಯಗಳೆಲ್ಲವುಗಳಲ್ಲಿಯೂ ಪ್ರಧಾನವಾಗಿ ಕಂಡುಬರುತ್ತದೆ. ಅಂಶ ಛಂದಸ್ಸು ಗೇಯ ಪ್ರಧಾನವಾದದ್ದು. ವರ್ಣಕ ಕಾವ್ಯಗಳಲ್ಲಿ ಇದರ ಹರಿವು ಇದೆ. ಛಂದಶ್ಶಾಸ್ತ್ರದ ಅಧ್ಯಯನಕ್ಕೆ ನಾಗವರ್ಮನ ಛಂದೋಂಬುಧಿಯೇ ಅಡಿಗಲ್ಲು. ಇದೇ ಕನ್ನಡ ಛಂದಸ್ಸಿನ ಆಕರ ಗ್ರಂಥ .

1.11 ಸ್ವಪರೀಕ್ಷಾ ಪ್ರಶ್ನೆಗಳಿಗೆ ಉತ್ತರಗಳು

1. ವೇದಾಂಗಗಳು ಆರು ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ್ಯ ಎಂದು.

2. ಕಾವ್ಯ ನಿರ್ಮಿತಿಗೆ ಪೂರಕವಾದ ಶಾಸ್ತ್ರವೇ ಛಂದಶ್ಶಾಸ್ತ್ರ. ಕಾವ್ಯದಲ್ಲಿ ಬಳಕೆಯಾಗಿರುವ ಪದ್ಯಪಾದಗಳ ಲಯಗಳ ವಿನ್ಯಾಸವನ್ನು ತಿಳಿಯಲು ಬಳಸುವ ಮಾನದಂಡವೇ ಛಂದಸ್ಸು.

3. ಈ ಘಟಕದ ಅಧ್ಯಯನದ ಹಿನ್ನೆಲೆಯಿಂದ ಈ ಪ್ರಶ್ನೆಗೆ ನೀವೇ ಉತ್ತರ ಹುಡುಕಿ ಬರೆಯಿರಿ.

4. ಲಘು ಗುರುಗಳಿಂದಾದ ಕೆಲವು ಮಾತ್ರಾ ಘಟಕಗಳ ಗುಂಪಿನಿಂದ ಹೊರಡುವ ವಿಶಿಷ್ಟವಾದ ನಾದವನ್ನೆ ಲಯ ಎಂದು ಕರೆಯುತ್ತೇವೆ.

5. ಪದ್ಯಗಳನ್ನು ಓದುವಾಗ ಅರ್ಥಸ್ಫೂರ್ತಿ ಕೆಡದಂತೆ ನಿಯತವಾದ ಸ್ಥಾನದಲ್ಲಿ ನಿಲ್ಲಿಸುವುದಕ್ಕೆ ಯತಿ ಎಂದು ಹೆಸರು.

6. 'ಯತಿಯೆಂಬುದುಸಿರ್ವತಾಣಂ' ಎಂಬುದಾಗಿ ಕವಿರಾಜಮಾರ್ಗಕಾರ ತಿಳಿಸಿದ್ದಾನೆ.

7. ಈ ಪ್ರಶ್ನೆಗೆ ನೀವೇ ಉತ್ತರ ಗುರುತಿಸಿ ಬರೆಯಿರಿ.

8. ಪದ್ಯದ ಪ್ರತಿಯೊಂದು ಪಾದದ ಒಂದನೆಯ ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ರೀತಿಯ ವ್ಯಂಜನಾಕ್ಷರಗಳು ಬರುವುದಕ್ಕೆ ಪ್ರಾಸ ಎಂದು ಹೇಳುತ್ತೇವೆ. ಪ್ರಾಸದಲ್ಲಿ ಆದಿ ಪ್ರಾಸ, ಅಂತ್ಯ ಪ್ರಾಸ ಮತ್ತು ಅನು ಪ್ರಾಸ ಎಂದು ಮೂರು ಬಗೆ.

9. ನಾಗವರ್ಮ ಆದಿಪ್ರಾಸದಲ್ಲಿ ಆರು ಒಳಭೇದಗಳನ್ನು ತಿಳಿಸಿದ್ದಾನೆ. ೧. ಸಿಂಹಪ್ರಾಸ, ೨. ಗಜಪ್ರಾಸ, ೩. ವೃಷಭ ಪ್ರಾಸ, ೪. ಅಜಪ್ರಾಸ, ೫. ಹಯಪ್ರಾಸ, ೬. ಶರಭ ಪ್ರಾಸ ಇವೇ ಆ ಭೇದಗಳು.

10. ಒಂದು ಮಾತ್ರೆಯ ಕಾಲ ಉಚ್ಚರಿಸಲ್ಪಡುವ ಹ್ರಸ್ವಾಕ್ಷರಗಳಿಗೆ ಲಘು (U) ಎಂದೂ ಎರಡು ಮಾತ್ರೆಗಳ ಕಾಲ ಉಚ್ಚರಿಲ್ಪಡುವ ದೀರ್ಘಾಕ್ಷರಗಳಿಗೆ ಗುರು (-) ಎಂದೂ ಎರಡು ಮಾತ್ರೆಗಳಿಗಿಂತಲೂ ಅಧಿಕ ಕಾಲ ಉಚ್ಚರಿಸಲ್ಪಡುವ ದೀರ್ಘಾಕ್ಷರಗಳಿಗೆ ಪ್ಲುತ (S) ಎಂತಲೂ ತಿಳಿಸುತ್ತೇವೆ. (ಇನ್ನೂ ಹೆಚ್ಚಿನ ವಿವರಗಳನ್ನು ಘಟಕಾಂಶದ ನೆರವಿನಿಂದ ಗುರುತಿಸಿ ಬರೆಯಿರಿ.)

11. ಛಂದಸ್ಸಿನ ನಿಯಮಕ್ಕೆ ಅನುಗುಣವಾಗಿ ವಿಂಗಡಿಸಿದ ಕೆಲವು ಅಕ್ಷರ, ಮಾತ್ರೆ, ಅಂಶಗಳ ಗುಂಪಿಗೆ ಗಣ ಎಂದು ಹೆಸರು.

12. ಅಕ್ಷರಗಳ ಆಧಾರದ ಮೇಲೆ ಗಣ ವಿಂಗಡಣೆ ಮಾಡುವುದಕ್ಕೆ ವರ್ಣಗಣ ಎಂದು ಹೇಳುತ್ತೇವೆ. ಇಲ್ಲಿನ ಗಣ ವಿಂಗಡಣೆಯಲ್ಲಿ ಮಾತ್ರೆಗಳಾಗಲಿ ಅಂಶಗಳಾಗಲಿ ಮುಖ್ಯವೆನಿಸದೆ, ಅಕ್ಷರಗಳೇ ಮುಖ್ಯವೆನಿಸುತ್ತವೆ. ವರ್ಣಗಣದಲ್ಲಿ ಮೂರು ಮೂರು ಅಕ್ಷರಗಳಿಗೆ ಒಂದರಂತೆ ಗಣ ವಿಭಜನೆ ಕ್ರಮ ನಡೆಯುತ್ತದೆ.

13. ವರ್ಣಗಣ ವಿನ್ಯಾಸ ಮೂರು ಬಗೆಯದ್ದಾಗಿರುತ್ತದೆ, ಮಗಣ, ನಗಣ, ಭಗಣ, ಮಗಣ, ಜಗಣ, ರಗಣ, ಸಗಣ, ತಗಣ ಈ ಹೆಸರಿನಿಂದ ಎಂಟು ಬಗೆಯ ವಿನ್ಯಾಸವನ್ನು ಗುರುತಿಸುವುದುಂಟು.

14. ಮಾತ್ರೆಗಳ ಆಧಾರದ ಮೇಲೆ ಗಣವಿಂಗಡಣೆ ಮಾಡುವುದಕ್ಕೆ ಮಾತ್ರಾಗಣ ಎಂದು ಹೇಳುತ್ತೇವೆ. ಮಾತ್ರಾಗಣದ ವಿನ್ಯಾಸದಲ್ಲಿ ಮೂರು ಮಾತ್ರೆಯ ಗಣ, ನಾಲ್ಕು ಮಾತ್ರೆಯ ಗಣ, ಐದು ಮಾತ್ರೆಯ ಗಣಗಳು ಕಂಡುಬರುತ್ತವೆ. ಹೊಸಗನ್ನಡ ಛಂದಸ್ಸಿನಲ್ಲಿ ಆರು ಮಾತ್ರೆಯ ಗಣವೂ ಇದೆ.

15. ಅಂಶಗಣ ಎಂದರೆ ಅಂಶಗಳಿಂದ ಕಟ್ಟಿದ ಗಣ. ಅಂಶ ಎಂದರೆ ಅಚ್ಚ ಗನ್ನಡ ಛಂದಸ್ಸಿನ ಪದ್ಯಪಾದಗಳ ಹಾಡಿನ ಗತಿಯನ್ನನುಸರಿಸಿ ತಾಳಲಯಗಳು ಸರಿಯಾಗಿ ಹೊಂದಿಕೊಳ್ಳಲು ಮಾತ್ರಾ ಪರಿಮಾಣವು ಹಿಗ್ಗಿ ಅಥವಾ ಕುಗ್ಗಿ ಹೊಂದಿಕೆಗೆ ಅನುವಾಗುವ ಅಕ್ಷರ. ಇಂತಹ ಅಂಶಗಳಿಂದ ಕಟ್ಟಿದ ಗಣವೇ ಅಂಶಗಣ. ಅಂಶಗಣದಲ್ಲಿ ಮೂರು ಬಗೆ ಬ್ರಹ್ಮಗಣ, ವಿಷ್ಣುಗಣ, ರುದ್ರಗಣ, ಎಂಬುದಾಗಿ.

16. ಬ್ರಹ್ಮಗಣ ಎರಡು ಅಂಶಗಳನ್ನೂ ವಿಷ್ಣುಗಣ ಮೂರು ಅಂಶಗಳನ್ನೂ ರುದ್ರಗಣ ನಾಲ್ಕು ಅಂಶಗಳನ್ನೂ ಒಳಗೊಂಡಿರುತ್ತದೆ.

17. ಬ್ರಹ್ಮಣದ ಗಣ ವಿನ್ಯಾಸ ನಾಲ್ಕು ಬಗೆಯಾಗಿಯೂ ವಿಷ್ಣುಗಣದ ಗಣವಿನ್ಯಾಸ ಎಂಟು ಬಗೆಯಾಗಿಯೂ ರುದ್ರಗಣದ ಗಣ ವಿನ್ಯಾಸ ಹದಿನಾರು ಬಗೆಯಾಗಿಯೂ ಇರುತ್ತದೆ.
(ಅವುಗಳನ್ನು ಪಟ್ಟಿ ಮಾಡಿ ಬರೆಯಿರಿ.)

18. 'ಕವಿರಾಜಮಾರ್ಗ' ದ ಕರ್ತೃ ಶ್ರೀ ವಿಜಯ.

19. ನಾಗವರ್ಮನ ಕೃತಿ ಛಂದೋಂಬುಧಿ.

20. ಪ್ರಶ್ನೆ ೨೦ ಮತ್ತು ೨೧ಕ್ಕೆ ಘಟಕದಲ್ಲಿ ಕೊಟ್ಟಿರುವ ಗ್ರಂಥ ಪರಿಚಯವನ್ನು ಸಂಗ್ರಹಿಸಿ ಬರೆಯಿರಿ.

21. 'ಛಂದೋವಿಚಿತಿಯ' ಕರ್ತೃ ೨ನೇಯ ನಾಗವರ್ಮ.

22. ಈಶ್ವರ ಕವಿಯ ಗ್ರಂಥದ ಹೆಸರು 'ಕವಿಜಿಹ್ವಾಬಂಧನ'

23. 'ಛಂದಸ್ಸಾರದಕರ್ತೃ ಗುಣಚಂದ್ರ' ರಚನೆಯ ಕಾಲ ಕ್ರಿ.ಶ. ೧೬೫೦.

24. ಈ ಪ್ರಶ್ನೆಗೆ ಘಟಕದಲ್ಲಿ ವಿವರಿಸುವ ಗ್ರಂಥ ಪರಿಚಯದ ಮಾತುಗಳನ್ನು ನೀವೇ ಸಂಗ್ರಹಿಸಿ ಬರೆಯಿರಿ.

1.12 ಪರಾಮರ್ಶನ ಗ್ರಂಥಗಳು

೧. ಕನ್ನಡ ಕೈಪಿಡಿ, ಸಂಪುಟ - ೧ : ಪ್ರಕಾಶಕರು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

೨. ಕನ್ನಡ ಛಂದಸ್ಸಿನ ಚರಿತ್ರೆ, ಸಂಪುಟ-೧ : ಪ್ರಕಾಶಕರು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

೩. ಕನ್ನಡ ಛಂದಃ ಸ್ವರೂಪ : ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ

೪. ಕನ್ನಡ ಛಂದೋವಿಕಾಸ : ಡಿ.ಎಸ್. ಕರ್ಕಿ

೫. ಸಮಾಲೋಕನ : ತೀ.ನಂ. ಶ್ರೀಕಂಠಯ್ಯ

೬. ೧ನೆಯ ನಾಗವರ್ಮನ ಛಂದೋಂಬುಧಿ : (ಸಂಪಾದಕರು) ಕುಕ್ಕಿಲ ಕೃಷ್ಣ ಭಟ್ಟ

೭. ಕನ್ನಡ ಛಂದಸ್ಸಂಪುಟ : ಎಲ್. ಬಸವರಾಜು

೮. ಕವಿರಾಜಮಾರ್ಗ : (ಸಂಪಾದಕರು) ಎಂ.ವಿ. ಸೀತಾರಾಮಯ್ಯ

ಟಿಪ್ಪಣಿಗಳು

ಸಂಚಿಕೆ - 6
ಛಂದಸ್ಸು

ಘಟಕ - 2
ವರ್ಣವೃತ್ತಗಳು : ಖ್ಯಾತಕರ್ಣಾಟಕಗಳು ಮಾತ್ರಾವೃತ್ತಗಳು : ಕಂದ, ರಗಳೆ
ಅಂಶವೃತ್ತಗಳು : ಅಂಶ ಷಟ್ಪದಿ, ತ್ರಿಪದಿ, ಏಳೆ, ಅಕ್ಕರ, ಚೌಪದಿ, ಸಾಂಗತ್ಯ

ಪರಿವಿಡಿ :

2.0. ಘಟಕದ ಉದ್ದೇಶ
2.1. ಪೀಠಿಕೆ
2.2. ವರ್ಣವೃತ್ತಗಳು ಖ್ಯಾತ ಕರ್ಣಾಟಕಗಳು
- 2.2.0. ಉತ್ಪಲಮಾಲೆ
- 2.2.1. ಶಾರ್ದೂಲ ವಿಕ್ರೀಡಿತ
- 2.2.2. ಮತ್ತೇಭ ವಿಕ್ರೀಡಿತ
- 2.2.3. ಸ್ರಗ್ಧರಾ ವೃತ್ತಾ
- 2.2.4. ಮಹಾಸ್ರಗ್ಧರಾ ವೃತ್ತ
- 2.2.5. ಚಂಪಕಮಾಲೆ

2.3. ಮಾತ್ರಾವೃತ್ತಗಳು
- 2.3.0. ಕಂದ
- 2.3.1. ರಗಳೆ
  - 2.3.1.0. ರಗಳೆಯ ಲಕ್ಷಣ
  - 2.3.1.1. ಉತ್ಸಾಹರಗಳೆ
  - 2.3.1.2. ಲಲಿತರಗಳೆ

2.4. ಅಂಶವೃತ್ತಗಳು
- 2.4.0. ಅಕ್ಕರ
  - 2.4.0.1. ಪಿರಿಯಕ್ಕರ
  - 2.4.0.2. ದೊರೆಯಕ್ಕರ
  - 2.4.0.3. ನಡುವಣಕ್ಕರ
  - 2.4.0.4. ಎಡೆಯಕ್ಕರ
  - 2.4.0.5. ಕಿರಿಯಕ್ಕರ

2.4.1. ಚೌಪದಿ
2.4.2. ಏಳೆ
2.4.3. ಷಟ್ಪದಿ
2.4.3.0. ಅಂಶಷಟ್ಪದಿ
2.4.3.1. ಮಾತ್ರಾಷಟ್ಪದಿ
2.4.3.2. ಶರಷಟ್ಪದಿ
2.4.3.3. ಕುಸುಮ ಷಟ್ಪದಿ
2.4.3.4. ಭೋಗ ಷಟ್ಪದಿ
2.4.3.5. ಭಾಮಿನೀ ಷಟ್ಪದಿ
2.4.3.6. ಪರಿವರ್ಧಿನಿಷಟ್ಪದಿ
2.4.3.7. ವಾರ್ಧಕ ಷಟ್ಪದಿ
2.4.3.8. ಉದ್ದಂಡ ಷಟ್ಪದಿ

2.4.4. ತ್ರಿಪದಿ
2.4.5. ಸಾಂಗತ್ಯ
2.4.6. ಸ್ವಪರೀಕ್ಷೆ ಪ್ರಶ್ನೆಗಳು
2.4.7. ಸಾರಾಂಶ
2.4.8. ಸ್ವಪರೀಕ್ಷೆ ಪ್ರಶ್ನೆಗಳಿಗೆ ಉತ್ತರಗಳು
2.4.9. ಪರಾಮರ್ಶನ ಗ್ರಂಥಗಳು

2.0. ಘಟಕದ ಉದ್ದೇಶ

- ಈ ಘಟಕದಲ್ಲಿ ನೀವು ವರ್ಣವೃತ್ತಗಳ ಪರಿಚಯ ಮಾಡಿಕೊಳ್ಳುವಿರಿ.
- ಖ್ಯಾತ ಕರ್ಣಾಟಕ ವೃತ್ತಗಳ ಲಕ್ಷ್ಯಲಕ್ಷಣ ಕ್ರಮಗಳ ಜೊತೆಗೆ ಅವುಗಳ ವೈಶಿಷ್ಟ್ಯವನ್ನು ಮನುಗಾಣುವಿರಿ.
- ಪ್ರಸ್ತಾರ ಕ್ರಮದಿಂದ ಸೂತ್ರ ರಚನೆಯ ಸಹಾಯದಿಂದ ಖ್ಯಾತ ಕರ್ಣಾಟಕ ವೃತ್ತಗಳಲ್ಲಿ ಯಾವ ಬಗೆಯ ವೃತ್ತವನ್ನಾದರೂ ಗುರುತಿಸುವ ಸಾಮರ್ಥ್ಯ ಪಡೆಯುವಿರಿ.
- ಮಾತ್ರಾವೃತ್ತಗಳಾದ ಕಂದ ರಗಳೆಯ ಪರಿಚಯ ಮಾಡಿಕೊಳ್ಳುವಿರಿ.
- ಕಂದದ ಉಗಮ ಲಕ್ಷಣ ಇತಿಹಾಸವನ್ನು ಅರ್ಥ ಮಾಡಿಕೊಳ್ಳುವಿರಿ.
- ರಗಳೆಯ ಉಗಮ ಲಕ್ಷಣವನ್ನು ತಿಳಿಯುವಿರಿ.
- ರಗಳೆಯ ಪ್ರಭೇದಗಳಾದ ಉತ್ಸಾಹ, ಮಂದಾನಿಲ, ಲಲಿತ ರಗಳೆಯ ಲಕ್ಷಣವನ್ನು ತಿಳಿಯುವುದರೊಂದಿಗೆ ಆ ಪ್ರಭೇದಗಳನ್ನು ಗುರುತಿಸಲು ಶಕ್ತರಾಗುವಿರಿ.
- ಷಟ್ಪದಿ ಪ್ರಭೇದಗಳು ಹಾಗೂ ಅವುಗಳ ಪ್ರಸ್ತಾರ ವೈವಿಧ್ಯವನ್ನು ಮನಗಾಣುವಿರಿ.
- ಮೂಲ ಷಟ್ಪದಿಯ ಲಕ್ಷಣ ಕ್ರಮವನ್ನು ತಿಳಿಯುವಿರಿ.
- ಅಂಶ ವೃತ್ತಗಳ ಬಗ್ಗೆ ವಿವರಗಳನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದುವಿರಿ.
- ತ್ರಿಪದಿ, ಪಿರಿಯಕ್ಕರ, ಏಳೆ, ಚೌಪದಿ, ಸಾಂಗತ್ಯ ಇವುಗಳ ಲಕ್ಷ್ಯ-ಲಕ್ಷಣ ವಿಚಾರಗಳ ಬಗ್ಗೆ ಸಮಗ್ರ ಅರಿವನ್ನು ಸಂಪಾದಿಸುವಿರಿ.

2.1 ಪೀಠಿಕೆ

ಸಂಸ್ಕೃತ ಛಂದಸ್ಸಿನಲ್ಲಿ ಎರಡು ವಿಧ. ವೈದಿಕ ಛಂದಸ್ಸು, ಲೌಕಿಕ ಛಂದಸ್ಸು ಎಂಬುದಾಗಿ. ವೈದಿಕ ಛಂದಸ್ಸು ವೇದಗಳಲ್ಲಿ ಕಂಡುಬಂದರೆ, ಲೌಕಿಕ ಛಂದಸ್ಸು ಇತಿಹಾಸ, ಪುರಾಣ, ಕಾವ್ಯ ನಾಟಕಗಳಲ್ಲಿ ಕಂಡುಬರುತ್ತದೆ.

ವೈದಿಕ ಛಂದಸ್ಸಿನಲ್ಲಿ ಒಂದು ಅಕ್ಷರ ಹ್ರಸ್ವವಾಗಿರಲಿ, ದೀರ್ಘವಾಗಿರಲಿ ಅದಕ್ಕೆ ಒಂದು ಅಕ್ಷರದಷ್ಟೇ ಬೆಲೆ. ಇದೇ ವೈದಿಕ ಛಂದಸ್ಸಿನ ಮಾಪಕ. ವೈದಿಕ ಛಂದಸ್ಸಿನಲ್ಲಿ ವಿವಿಧ ಬಗೆಯ ವೃತ್ತಗಳ ವ್ಯತ್ಯಾಸವನ್ನೂ ಭಿನ್ನತೆಯನ್ನೂ ಅಕ್ಷರ ಸಂಖ್ಯೆಯ ವ್ಯತ್ಯಾಸದಿಂದಲೇ ಗುರುತಿಸಲಾಗುತ್ತದೆ. ಆದ್ದರಿಂದ ಇವನ್ನು ಅಕ್ಷರವೃತ್ತಗಳು ಅಥವಾ ವರ್ಣವೃತ್ತಗಳು ಎಂದು ಕರೆದಿದ್ದಾರೆ. ಗಾಯತ್ರಿ, ಅನುಷ್ಟುಪ್, ಬೃಹತೀ, ಜಗತೀ, ಪಜ್ಕ್ತಿ, ತ್ರಿಷ್ಟುಪ್ ಮೊದಲಾದವು ವೈದಿಕ ಛಂದಸ್ಸಿನ ಬಹು ಮುಖ್ಯ ವೃತ್ತಗಳಾಗಿ ಕಂಡುಬರುತ್ತವೆ. ಇಲ್ಲಿ ನಾಲ್ಕಕ್ಷರಕ್ಕೆ ಅನುಗುಣವಾಗಿ ಗಣ ವಿಭಜನೆಯಾಗುವುದು ಸಾಮಾನ್ಯ.

ಆದರೆ ಅದೇ ಲೌಕಿಕ ಛಂದಸ್ಸಿನಲ್ಲಿ ಗಣವಿಭಜನೆ ಮೂರು ಅಕ್ಷರಗಳಿಗೆ ಅನುಗುಣವಾಗಿ ನಡೆಯುತ್ತದೆ. ಇಲ್ಲಿಯ ಗಣ ವಿನ್ಯಾಸ ಕೂಡ ಎಂಟು ಬಗೆಯದಾಗಿರುತ್ತದೆ. ಲೌಕಿಕ ಛಂದಸ್ಸಿನ ವೃತ್ತಗಳಲ್ಲಿ ೧. ಸಮ ವೃತ್ತ ೨. ಅರ್ಧ ಸಮವೃತ್ತಗಳು ೩. ವಿಷಯ ವೃತ್ತಗಳು ೪. ದಂಡಕಗಳು ಎಂದು ನಾಲ್ಕು ಬಗೆಗಳಿವೆ. ವರ್ಣಸಂಖ್ಯೆ ಲಘು ಗುರುಗಳ ವಿನ್ಯಾಸದಲ್ಲಿ ವೃತ್ತದ ನಾಲ್ಕು ಪದಗಳು

ಸಮವಾಗಿರುವುದಕ್ಕೆ ಸಮವೃತ್ತಗಳು ಎನ್ನುತ್ತೇವೆ. ವರ್ಣಸಂಖ್ಯೆ ಲಘು ಗುರುಗಳ ವಿನ್ಯಾಸದಲ್ಲಿ ವೃತ್ತದ ೧ ಮತ್ತು ೩ ನೆಯ ಪಾದಗಳು ಒಂದು ಬಗೆಯಾಗಿಯೂ ೨ ಮತ್ತು ೪ನೆಯ ಪಾದಗಳು ಮತ್ತೊಂದು ಬಗೆಯಾಗಿಯೂ ಇರುವುದಕ್ಕೆ ಅರ್ಧ ಸಮವೃತ್ತಗಳು ಎಂದು ಕರೆಯುತ್ತೇವೆ. ವರ್ಣಸಂಖ್ಯೆ ಲಘು ಗುರುಗಳ ವಿನ್ಯಾಸದಲ್ಲಿ ವೃತ್ತದ ನಾಲ್ಕು ಪಾದಗಳು ಬೇರೆ ಬೇರೆಯಾಗಿದ್ದರೆ ಅದಕ್ಕೆ ವಿಷಮವೃತ್ತ ಎಂದು ಹೆಸರು. ಇಪ್ಪತ್ತಾರು ಅಕ್ಷರಗಳು ಅಥವಾ ಅದಕ್ಕಿಂತ ಹೆಚ್ಚು ವರ್ಣಗಳುಳ್ಳ ತುಂಬಾ ಉದ್ದದ ಸಮಚತುಷ್ಪದಿಗಳಿಗೆ ದಂಡಕಗಳೆಂದು ಹೆಸರು. ಈ ವೃತ್ತಗಳೆಲ್ಲವನ್ನೂ ವರ್ಣಗಣ ಎಂಬ ಮಾಪಕದಿಂದಲೇ ಅಳೆಯಲಾಗುತ್ತದೆ.

2.3 ವರ್ಣವೃತ್ತಗಳು

ವರ್ಣವೃತ್ತಗಳಲ್ಲಿ ಸಮವೃತ್ತಗಳು, ಅರ್ಧಸಮವೃತ್ತಗಳು, ವಿಷಮ ವೃತ್ತಗಳು ಹಾಗೂ ದಂಡಕಗಳು ಎಂದು ನಾಲ್ಕು ಬಗೆಗಳಿವೆ ಎಂಬ ಅಂಶವನ್ನು ಈಗಾಗಲೇ ನಿಮ್ಮ ಗಮನಕ್ಕೆ ತಂದಿದ್ದೇವೆ. ಸಮವೃತ್ತಗಳ ಬಳಕೆ ಕನ್ನಡ ಕಾವ್ಯಗಳಲ್ಲಿ ಹೆಚ್ಚಾಗಿ ಬಳಕೆಯಾಗಿರುವುದರಿಂದ ಪ್ರಸ್ತುತ ಅವುಗಳ ವಿಚಾರಕ್ಕೆ ಬರೋಣ.

ಉಕ್ತೆಯಿಂದ ಉತ್ಕೃತಿಯವರೆಗೆ ಬಳಕೆಯಲ್ಲಿರುವ ಇಪ್ಪತ್ತಾರು ವೃತ್ತಗಳನ್ನು ನಮ್ಮ ಕವಿಗಳು ಬಳಸಿದ್ದಾರೆ. ಆದರೆ ಅದರಲ್ಲಿ ಚಂಪಕಮಾಲೆ, ಉತ್ಪಲಮಾಲೆ, ಶಾರ್ದೂಲ ವಿಕ್ರೀಡಿತ, ಮತ್ತೇಭ ವಿಕ್ರೀಡಿತ, ಸ್ರಗ್ಧರೆ, ಮಹಾಸ್ರಗ್ಧರೆ ಈ ವೃತ್ತಗಳನ್ನು ನಮ್ಮ ಕನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ವಿಶೇಷವಾಗಿ ಬಳಕೆ ಮಾಡಿದ್ದಾರೆ. ಆದ್ದರಿಂದ ಈ ವೃತ್ತಗಳನ್ನು ನಾಗವರ್ಮ 'ಖ್ಯಾತ ಕರ್ಣಾಟಕಗಳು' ಎಂದು ಕರೆದಿದ್ದಾನೆ. ಹಾಗಾಗಿ ಈಗ ನೇರವಾಗಿ ನಾವು 'ಖ್ಯಾತ ಕರ್ಣಾಟಕ' ವೃತ್ತಗಳ ವಿಚಾರಕ್ಕೆ ಬರುವುದು ಒಳ್ಳೆಯದು.

ಸಂಸ್ಕೃತದಿಂದ ಅನೇಕ ಬಗೆಯ (ಇಪ್ಪತ್ತಾರು) ವೃತ್ತಗಳನ್ನು ನಮ್ಮ ಕವಿಗಳು ಸ್ವೀಕರಿಸಿದ್ದರೂ ಸಹ ಈ ಆರು ವೃತ್ತಗಳನ್ನೆ ಹೆಚ್ಚು ಹೆಚ್ಚಾಗಿ ಬಳಸಿ ಕಾವ್ಯ ರಚಿಸಿದ್ದಾರೆ. "ಚಂಪೂ ಕಾವ್ಯಗಳಲ್ಲಿ ಮುಕ್ಕಾಲು ಪಾಲು ಕಂದ ಕಾಲು ಪಾಲು ಖ್ಯಾತ ಆರು ಸಂಸ್ಕೃತ ವೃತ್ತಗಳಿವೆ." ಅಂದಮೇಲೆ ಈ ವೃತ್ತಗಳ ಜನಪ್ರಿಯತೆ ಏನೆಂಬುದು ನಿಮಗೆ ತಿಳಿದಿರಲಿಕ್ಕೆ ಸಾಕು.

೧. ಚಂಪಕಮಾಲೆ
೨. ಉತ್ಪಲಮಾಲೆ
೩. ಶಾರ್ದೂಲ ವಿಕ್ರೀಡಿತ
೪. ಮತ್ತೇಭ ವಿಕ್ರೀಡಿತ
೫. ಸ್ರಗ್ಧರಾ ವೃತ್ತ
೬. ಮಹಾಸ್ರಗ್ಧರಾ ವೃತ್ತ

ಈ ಆರು ವೃತ್ತಗಳೇ ಕನ್ನಡ ಕಾವ್ಯಗಳಲ್ಲಿ ವಿಶೇಷವಾಗಿ ಬಳಕೆಗೊಂಡು ಪ್ರಸಿದ್ಧಿ ಪಡೆದಿರುವುದರಿಂದ ನಾಗವರ್ಮ ಇವನ್ನು 'ಖ್ಯಾತ ಕರ್ಣಾಟಕ' ಗಳು ಎಂದು ಕರೆದಿದ್ದಾನೆ. ಇವುಗಳಲ್ಲಿ

ಚಂಪಕ ಉತ್ಪಲಮಾಲೆಗಳ ವೃತ್ತಗಳ ಬಳಕೆ ಉಳಿದೆಲ್ಲ ವೃತ್ತಗಳಿಗಿಂತ ಹೆಚ್ಚಾಗಿ ಕಂಡುಬರುತ್ತದೆ.

ನಾಗವರ್ಮ 'ಖ್ಯಾತ ಕರ್ಣಾಟಕ' ವೃತ್ತಗಳ ಲಕ್ಷ್ಯ-ಲಕ್ಷಣಗಳನ್ನು ವೃತ್ತವೊಂದರಲ್ಲಿ ಹೀಗೆ ತಿಳಿಯಪಡಿಸಿದ್ದಾನೆ.

ಗುರುವೊಂದಾದಿಯೊಳುತ್ಪಲಂ ಗುರುವೊದಲ್ಮೂರಾಗೆ ಶಾರ್ದೂಲಮೊ
ಗುರು ನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವ ಗುರು ದ್ವಂದ್ವ ಮಾ
ಗೀರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ
ಹರಿಣಾಕ್ಷಿ ಲಘು ನಾಲ್ಕು ಚಂಪಕಮಿವಾಱುಂಖ್ಯಾತಕರ್ಣಾಟಕಂ

೧. ಪದ್ಯಪಾದದ ಪ್ರಾರಂಭದಲ್ಲಿ ಒಂದು ಗುರು ಎರಡು ಲಘು ಬಂದರೆ ಉತ್ಪಲಮಾಲೆ (- UU)
೨. ಪದ್ಯಪಾದದ ಆರಂಭದಲ್ಲಿ ಮೂರು ಗುರು ಬಂದರೆ ಶಾರ್ದೂಲ ವಿಕ್ರೀಡಿತ (- - -)
೩. ಪದ್ಯಪಾದದ ಆರಂಭದಲ್ಲಿ ನಾಲ್ಕು ಗುರು ಬಂದರೆ ಸ್ರಗ್ಧರಾ ವೃತ್ತ (- - - U)
೪. ಪದ್ಯಪಾದದ ಆರಂಭದಲ್ಲಿ ಎರಡು ಲಘು ಎರಡು ಗುರು ಬಂದರೆ ಮತ್ತೇಭ ವಿಕ್ರೀಡಿತ (U U - -)
೫. ಪದ್ಯಪಾದದ ಮೊದಲಲ್ಲಿ ಎರಡು ಲಘು ಮೂರು ಗುರು ಬಂದರೆ ಮಹಾಸ್ರಗ್ಧರಾವೃತ್ತ (U U - - -)
೬. ಪದ್ಯಪಾದದ ಮೊದಲಲ್ಲಿ ನಾಲ್ಕು ಲಘು ಬಂದರೆ ಚಂಪಕಮಾಲಾವೃತ್ತ (U U U U)

ಈ ಸಂಗತಿಯನ್ನು ಗ್ರಹಿಸಿದ ಬಳಿಕ ನಾವು ಈಗ ಈ ಒಂದೊಂದು ವೃತ್ತಗಳ ಪರಿಚಯವನ್ನು ಲಕ್ಷ್ಯ-ಲಕ್ಷಣ ಕ್ರಮದೊಂದಿಗೆ ಮಾಡಿಕೊಳ್ಳಲು ತೊಡಗೋಣ.

2.3.0. ಉತ್ಪಲ ಮಾಲೆ

ಕನ್ನಡ ಕೈಪಿಡಿಯಲ್ಲಿ ಉತ್ಪಲಮಾಲೆಯ ಲಕ್ಷಣವನ್ನು ಹೀಗೆ ತಿಳಿಸಿದೆ. 'ಉತ್ಪಲಮಾಲೆಯಪ್ಪುದು ಭರಂನಭಭಂರಲಗಂ ನೆಗಟ್ಟಿರಲ್' ಅಂದರೆ ಭಗಣ, ರಗಣ, ಭಗಣ, ಭಗಣ, ರಗಣ ಹಾಗೂ ಒಂದು ಲಘು ಒಂದು ಗುರು ಬಂದರೆ ಅದು ಉತ್ಪಲಮಾಲೆ ವೃತ್ತವೆನಿಸುವುದು. ಈಗ ಈ ಸೂತ್ರಕ್ಕೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿ ಛಂದೋ ಲಕ್ಷಣವನ್ನು ಗುರುತಿಸಲು ಪ್ರಯತ್ನಿಸಿ.

ಭ	ರ	ನ	ಭ	ಭ	ರ	ಲ	ಗು
- U U	- U -	U U U	- U U	- U U	- U -	U	-
ಉತ್ಪಲ	ಮಾಲೆಯ	ಪ್ಪುದು ಭ	ರಂ ನಭ	ಭಂರಲ	ಗಂ ನೆಗ	ಟ್ಟಿ	ರಲ್

ಇನ್ನೊಂದು ಉದಾಹರಣೆ ನೋಡಿ:

ಭ	ರ	ನ	ಭ	ಭ	ರ	ಲ	ಗು
- U U	- U -	U U U	- U U	- U U	- U -	U	-
ನೆತ್ತಮ	ನಾಡಿ ಭಾ	ಸುಮತಿ	ಸೋಲ್ತೊಡೆ	ಸೋಲಮ	ನೀವು ದೆಂ	ದು	ಕಾ

ಭ	ರ	ನ	ಭ	ಭ	ರ	ಲ	ಗು
-UU	-U-	UUU	-UU	-UU	-U-	U	-
ಡುತ್ತಿರೆ	ಲಂಬಣಂ	ಪಱಿಯೆ	ಮುತ್ತಿನ	ಕೇಡನೆ	ನೋಡಿ ನೋ	ಡಿ	ಬ

ಪ್ರತಿಪಾದದ ಆದಿಯಲ್ಲಿ - U U ಈ ಕ್ರಮದ ಗಣ ವಿನ್ಯಾಸ ಕಡ್ಡಾಯವಾಗಿ ಬಂದಿದೆ. ಪ್ರತಿಚರಣದಲ್ಲಿ ೨೦ ಅಕ್ಷರಗಳಿವೆ. ೧೧ನೆಯ ಅಕ್ಷರಕ್ಕೆ ಯತಿ ಬರುತ್ತದೆ.

ಮ	ಸ	ಜ	ಸ	ತ	ತ	ಗು
- - -	U U -	U - U	UU -	- - U	- - U	-
ಆ ಲಾಕ್ಷಾ	ಗೃಹ ದಾ	ಹವೊಂದೆ	ವಿಷಮಂ	ಯುಕ್ತಾನ್ನ	ಮಂತೊಂದೆ	ಪಾಂ

ಮ	ಸ	ಜ	ಸ	ತ	ತ	ಗು
- - -	U U -	U - U	UU -	- - U	- - U	-
ಚಾಲೀ ನಿ	ಗ್ರಹಮೊಂ	ದೆ ಟಕ್ಕು	ವಗೆಯಿಂ	ಗೆ ಲ್ಬಿ ರ್ದ	ಜೂದೊಂದೆ	ಶಾ

ಮ	ಸ	ಜ	ಸ	ತ	ತ	ಗು
- - -	U U -	U - U	UU -	- - U	- - U	-
ದೂರ್ಲಾಭೀ	ಲ ವನಂ	ಗಳೊಳ್ ತಿ	ರಿಪದೀ	ಯುರ್ಕೊಂದೆ	ಲೆಕ್ಕಂಗೊ	ಳಲ್

ಮ	ಸ	ಜ	ಸ	ತ	ತ	ಗು
- - -	UU -	U - U	U U -	- - U	- - U	-
ಕಾಲಂ ಸಾ	ಲವೆ ಕಂ	ಡು ಮುಂಡು	ಮೆಮಗಿ	ನ್ನಾತಂಗ	ಳೊಳ್‌ಪಾಜಿ	ಯೇ

ಈ ವೃತ್ತದ ಪ್ರತಿಪಾದದಲ್ಲಿಯೂ ಮಗಣ, ಸಗಣ, ಜಗಣ, ಸಗಣ, ತಗಣ, ತಗಣ ಹಾಗೂ ಒಂದು ಗುರು ಬಂದಿರುವುದನ್ನು ಗಮನಿಸಬಹುದು. ಇದು ಶಾರ್ದೂಲ ವಿಕ್ರೀಡಿತ ವೃತ್ತದ ಲಕ್ಷಣ ಕ್ರಮ. ೧೯ ಅಕ್ಷರಗಳಿರುವ ಈ ವೃತ್ತದಲ್ಲಿ ೩೦ ಮಾತ್ರೆಗಳು ಇರುತ್ತದೆ. ಯತಿ ೧೨ನೆಯ ಅಕ್ಷರಕ್ಕೆ ಬರುತ್ತದೆ. ಗಂಭೀರವಾದ ವಿಷಯಗಳ ಅಭಿವ್ಯಕ್ತಿ ಇದು ತುಂಬಾ ಸಹಕಾರಿ.

2.3.3 ಮತ್ತೇಭ ವಿಕ್ರೀಡಿತ

ನಾಲ್ಕು ಪಾದಗಳು ಪ್ರತಿಪಾದದಲ್ಲಿ ೨೦ ಅಕ್ಷರಗಳು ಇರುತ್ತವೆ. 'ಸಭರಂ ನಂಮಯಯಲಂಗಮುಂ ಬಗೆಗೊಳಲ್ ಮತ್ತೇಭ ವಿಕ್ರೀಡಿತಂ' ಅಂದರೆ ಸಗಣ ಭಗಮ ರಗಣ ನಗಣ ಮಗಣ ಯಗಣ ಒಂದು ಲಘು ಒಂದು ಗುರು ಬರುವುದು ಈ ವೃತ್ತದ ಲಕ್ಷಣ ಕ್ರಮ. ಈ ಕೆಳಗಿನ ಉದಾಹರಣೆ ಪದ್ಯದ ಮೂಲಕ ನೀನು ಈ ಅಂಶವನ್ನು ಸ್ಪಷ್ಟಪಡಿಸಿಕೊಳ್ಳುವುದು.

ಸ	ಭ	ರ	ನ	ಮ	ಯ	ಲ	ಗು
U U -	- U U	- U -	U U U	- - -	U - -	U	-
ಭಯಮುಂ	ಲೋಭಮು	ಮೆಂಬ ತ	ಮ್ಮುತೆ ರ	ಡುಂ ಪಾಪ	ಕ್ಕೆ ಪಕ್ಕಾ	ಗೆ	ಪಾ

ಸ	ಭ	ರ	ನ	ಮ	ಯ	ಲ	ಗು
U U -	- U U	- U -	U U U	- - -	U - -	U	-
ಟುಯನೊ	ಕ್ಕೊಳ್ಪನ	ಗೆಯ್ದು ಸ	ತ್ಪತಮು	ವಂ ಪಿಂತಿ	ಕ್ಕಿ ಜೋಳ	ಕ್ಕೆ	ತ

ಸ	ಭ	ರ	ನ	ಮ	ಯ	ಲ	ಗು
U U -	- U U	- U -	U U U	- - -	U - -	U	-
ಪ್ಪಯುಮಿಂ	ಬಾಳ್ವುದೆ	ಪೂಣ್ಪು ನಿ	ಲ್ಲದಿ ಕೆ	ಯಂ ಬಾಳ್ವಿಂ	ತುವಿ ಖ್ಯಾ	ತ	ಕೀ

ಸ	ಭ	ರ	ನ	ಮ	ಯ	ಲ	ಗು
U U -	- U U	- U -	U U U	- - -	U - -	U	-
ರ್ತಿಯವೊ	ಲೀಯೊಡ	ಲ ಬ್ಬೆ ಪೇ	ಟಿಮೆನ	ಗೇಂ ಕಲ್ಪಾಂ	ತರಸ್ಥಾ	ಯಿ	ಯೇ

ಮತ್ತೇಭವಿಕ್ರೀಡಿತ ವೃತ್ತದ ಗತಿ ನಿಧಾನ. ಅದರ ಲಯ ನಿಂತು ನಿಂತು ಸಾಗುತ್ತದೆ. ೧೨ನೆಯ ಅಕ್ಷರಕ್ಕೆ ಯತಿ ಬರುತ್ತದೆ. ಗಂಭೀರವಾದ ವಿಷಯಗಳಿಗೆ, ಭಕ್ತಿ, ನೀತಿ ಈ ವಿಚಾರಗಳ ಅಭಿವ್ಯಕ್ತಿಗೆ ಇದು ತುಂಬ ಅನುಕೂಲಕರವಾದ ವೃತ್ತ.

2.2.3. ಸ್ರಗ್ಧರಾವೃತ್ತ

ನಾಲ್ಕು ಪಾದಗಳು ಪ್ರತಿ ಪಾದಗಳು ಇಪ್ಪತ್ತೊಂದು ಅಕ್ಷರಗಳಿರುತ್ತವೆ. ಮಾತ್ರೆಗಳ ಲೆಕ್ಕ ಮೂವತ್ಮೂರು ಆಗಿರುತ್ತದೆ. ಪ್ರತಿಪಾದದಲ್ಲಿ ಮರಭನ ಯಯಯ ಗಣ ವಿನ್ಯಾಸವಿರುತ್ತದೆ. "ತೋಱಲ್ ಮಂರಂಭನಂಮೂ ಯಗಣ ಮುಮದೆ ತಾ ಸ್ರಗ್ಧರಾವೃತ್ತಮಕ್ಕುಂ" ಎಂದು ಕನ್ನಡ ಕೈಪಿಡಿಯಲ್ಲಿ ಇದರ ಲಕ್ಷಣ ಕ್ರಮವನ್ನು ಹೇಳಿದೆ. ಇದನ್ನು ಒಂದು ಉದಾಹರಣೆಯ ಮೂಲಕ ನಿಮಗೆ ಹೀಗೆ ಸ್ಪಷ್ಟಪಡಿಸಲಿಚ್ಛಿಸುತ್ತೇನೆ.

ಮ	ರ	ಭ	ನ	ಯ	ಯ	ಯ
- - -	- U -	- U U	U U U	U - -	U - -	U - -
ಕರ್ಣಂ ಗಂ	ಡಲ್ತೆ ಕ	ಲ್ತರ್ ನುಡಿ	ವ ಪಸು	ಗೆ ಯಂ ಗಂ	ಡರಾ ಗಂ	ಡವಾತುಂ

ಮ	ರ	ಭ	ನ	ಯ	ಯ	ಯ
- - -	- U -	- U U	U U U	U - -	U - -	U - -
ಕರ್ಣಂ ಮುಂ	ಪು ಟ್ಟಿ ಪು	ಟ್ಟಿ ತ್ತ ಳ	ವಮದೋ	ಡ ಪುಟ್ಟಿ	ತ್ತು ಪೂಣ್ಪೆ	ವ ಬಾಗಂ

ಮ	ರ	ಭ	ನ	ಯ	ಯ	ಯ
- - -	- U -	- UU	U UU	U - -	U - -	U - -
ಕರ್ಣಂ ಗೊ	ಡ್ಡಿ ತ್ತುದಲ್	ಭಾರತ	ಮನೆ ಜ	ಗದೊಳ್ ಸಂ	ದನೇಂ ಸಂ	ದೊ ಕಾಂ ತಾಂ

ಮ	ರ	ಭ	ನ	ಯ	ಯ	ಯ
- - -	- U -	- UU	U U U	U - -	U - -	U - -
ಕರ್ಣಾಂತಾ	ಕೃಷ್ಣ ಬಾ	ಣಾ ವಳಿ	ಯೋಳೆ ಹ	ರಿಗಂ ಕ	ರ್ಣನಂ ನಾ	ಳೆ ಕೊಲ್ವುಂ

ಸ್ರಗ್ಧರಾ ವೃತ್ತದಲ್ಲಿ ೭ನೆಯ ಅಕ್ಷರಕ್ಕೆ ಯತಿ ಬರುತ್ತದೆ. ಮೂರು ಮೂರು ಅಕ್ಷರಗಳಿಗೆ ಅನುಗುಣವಾಗಿ ನೀವು ಗಣ ವಿಂಗಡಣೆ ಮಾಡಬೇಕು. ಅರ್ಧಾಕ್ಷರಗಳನ್ನು ಅವುಗಳ ಹಿಂದಿನ ಮೂರು ಅಕ್ಷರದ ಗಣಕ್ಕೆ ಸೇರಿಸಬೇಕು. ಅಂದರೆ ಮೂರು, ಮೂರು ಅಕ್ಷರಕ್ಕೆ ಒಂದು ಗಣವೆಂದು ವಿಂಗಡಿಸುವಾಗ ಅರ್ಧಾಕ್ಷರವನ್ನು ಅದರ ಹಿಂದಿನ ಅಕ್ಷರದ ಜೊತೆಗೆ ಸೇರಿಸಿ ಒಂದು ಅಕ್ಷರವೆಂದು ಪರಿಗಣನೆಗೆ ತೆಗೆದುಕೊಳ್ಳಬೇಕು.

2.2.4. ಮಹಾಸ್ರಗ್ಧರಾ ವೃತ್ತ

ನಾಲ್ಕು ಪಾದಗಳು. ಪಾದವೊಂದಕ್ಕೆ ೨೨ ಅಕ್ಷರಗಳು ೩೩ ಮಾತ್ರೆಗಳು ಇರುತ್ತವೆ. ಸತತನಸರರಗ ಇದು ಅದರ ಲಕ್ಷಣ ಕ್ರಮ. 'ಸತತಂ ನಂಸಂ ರರಂಗಂ ನೆರೆದೆಸೆಯೆ ಮಹಾಸ್ರಗ್ಧರಾವೃತ್ತ ಮಕ್ಕುಂ' ಎಂಬುದು ಇದರ ಲಕ್ಷಣ ಸೂತ್ರ. ಈ ಸೂತ್ರಕ್ಕೆ ನೀವು ಪ್ರಸ್ತಾರ ಹಾಕಿ ಗಣವಿಂಗಡಣೆ ಮಾಡಬಹುದು ನೋಡಿ:

ಸ	ತ	ತ	ನ	ಸ	ರ	ರ	ಗು
UU -	- - U	- - U	UUU	U U -	- U -	- U -	-
ಸತತಂ	ನಂ ಸಂ ರ	ರಂಗಂ ನೆ	ರೆದೆಸೆ	ಯೆ ಮಹಾ	ಸ್ರಗ್ಧರಾ	ವೃತ್ತಮ	ಕ್ಕುಂ

ಸ	ತ	ತ	ನ	ಸ	ರ	ರ	ಗು
UU -	- - U	- - U	U UU	UU -	- U -	- U -	-
ಎಲೆ ತಾ	ರಾ ಗಂ ಹ	ರಂ ಕಣ್ಣೆ	ಡೆ ಕರ	ಗಿದು ದಂ	ತಲ್ತು ರು	ದ್ರಾಟ್ಟ ಹಾ	ಸಂ

ಸ	ತ	ತ	ನ	ಸ	ರ	ರ	ಗು
U U -	- - U	- - U	U U U	UU -	- U -	- U -	-
ಜಲಮಾ	ದತ್ತಲ್ತು	ಚಂದ್ರಾತ	ಪಮಮ್ಯ	ತರಸಾ	ಕಾರಮಾ	ಯ್ತಲು ಹೈ	ಮಾ

ಸ	ತ	ತ	ನ	ಸ	ರ	ರ	ಗು
U U -	- - U	- - U	U U U	U U -	- U -	- U -	-
ಕಲಿತಂ	ತ್ರೈಲೋಕ್ಯ	ಲಕ್ಷ್ಮೀ ಮ	ಣಿ ಮುಕ	ರ ಮೆನೆಲ್	ಚೆಲ್ವದಾ	ಯ್ತು ಬ್ಜಷಂ	ಡಂ

ವೀರ ರೌದ್ರ ರಸಗಳ ಭಾವಾಭಿವ್ಯಕ್ತಿಗೆ ಇದು ತುಂಬ ಸಹಕಾರಿ. ೧೫ನೆಯ ಅಕ್ಷರಕ್ಕೆ ಯತಿ ಬರುತ್ತದೆ.

2.2.5. ಚಂಪಕಮಾಲೆ

ಆರು ವೃತ್ತಗಳಲ್ಲಿ ಅತ್ಯಂತ ಹೆಚ್ಚು ಬಳಕೆಯಾಗಿರುವ ವೃತ್ತ ಇದು. ನಾಲ್ಕು ಪಾದಗಳು. ಪಾದವೊಂದರಲ್ಲಿ ೨೧ ಅಕ್ಷರಗಳಿದ್ದು ಮಾತ್ರೆಗಳ ಸಂಖ್ಯೆ ೨೮ ಆಗಿರುತ್ತದೆ. ನಯವಾದ ನಡಿಗೆಯುಳ್ಳ ಚಂಪಕಮಾಲೆ ಮೃದುವಾಗಿರುವ ಶೃಂಗಾರ ಕರುಣೆ ಮೊದಲಾದ ಭಾವನೆಗಳ ಅಭಿವ್ಯಕ್ತಿಗೆ ತುಂಬಾ ಸಹಕಾರಿ ಎನಿಸಿದೆ. 'ನಜಭಜಜಂಜರಂ ಬಗೆಗೊಳಲ್ ಚಂಪಕಮಾಲೆಯೆಂದಪರ್' ಇದರ ಲಕ್ಷಣವನ್ನು ಒಂದು ಪದ್ಯದ ಉದಾಹರಣೆಯ ಮೂಲಕ ತಿಳಿದುಕೊಳ್ಳಬಹುದಾಗಿದೆ.

ನ	ಜ	ಭ	ಜ	ಜ ರ	ರ	
UU U	U - U	- UU	U - U	U - U	U - U	- U -
ಕುರುಪ	ತಿ ಗಿಲ್ಲ	ದೈವಬ	ಲಮಾಜಿ	ಗೆ ಮೇಲ್ಮ	ಲೆಗೆಯ್ವ	ರಾಗಳುಂ

ನ	ಜ	ಭ	ಜ	ಜ	ರ	ರ
UU U	U - U	- U U	U - U	U - U	U - U	- U -
ಗುರು ಗು	ರು ಪುತ್ರ	ಸಿಂಧು ಸು	ತರಾಳ್ದ	ನು ಮೆನ್ನ	ನೆ ನಚ್ಚಿ	ಪೆರ್ಚಿಮುಂ

ನ	ಜ	ಭ	ಜ	ಜ	ರ	ರ
UU U	U - U	- UU	U - U	U - U	U - U	- U -
ಪೊರೆದ	ನಿದಿರ್ಚಿ	ಕಾದುವ	ರು ಮೆನ್ನ	ಯ ಸೋದ	ರ ರೆಂತು	ನೋಡಿ ಕೊ

ನ	ಜ	ಭ	ಜ	ಜ	ರ	ರ
UUU	U - U	- U U	U - U	U - U	U - U	- U -
ಕ್ಕರಿಸ	ದೆ ಕೋಲ್ವೆ	ನೆನ್ನೊಡ	ಲನಾಂ ತ	ವಿಪೆಂ ರ	ಣರಂಗ	ಭೂಮಿಯೊಳ್

ಈ ಖ್ಯಾತ ಕರ್ಣಾಟಕ ವೃತ್ತಗಳಲ್ಲಿ ಶಾರ್ದೂಲ ವಿಕ್ರೀಡಿತ ಮತ್ತೇಭವಿಕ್ರೀಡಿತ ಹಾಗೂ ಸ್ರಗ್ಧರಾವೃತ್ತ ಮಹಾಸ್ರಗ್ಧರಾ ವೃತ್ತಗಳು ಸಂಸ್ಕೃತದಿಂದ ಕನ್ನಡಕ್ಕೆ ನೇರವಾಗಿ ಬಂದ ವೃತ್ತಗಳಾಗಿವೆ. ಚಂಪಕಮಾಲೆ ಮತ್ತು ಉತ್ಪಲಮಾಲೆಗಳು ಸಂಸ್ಕೃತದಿಂದ ಬಂದರೂ ಹೆಸರು ಬದಲು ಮಾಡಿಕೊಂಡು ಬಂದಿವೆ ಎನ್ನಲಾಗಿದೆ. ಅಂತೂ ಕನ್ನಡ ಕವಿಗಳು ವಿಶೇಷವಾಗಿ ಈ ಆರು ವೃತ್ತಗಳನ್ನು ಹೆಚ್ಚಾಗಿ ಬಳಸಿದ ಕಾರಣ ಇವು ಖ್ಯಾತ ಕರ್ಣಾಟಕಗಳು ಎಂದು ಪ್ರಸಿದ್ಧಿ ಪಡೆದಿವೆ ಎಂಬುದು ಗಮನಾರ್ಹ ಸಂಗತಿಯಾಗಿದೆ.

2.3. ಮಾತ್ರಾವೃತ್ತಗಳು: ಕಂದ, ರಗಳೆ

ಮಾತ್ರಾವೃತ್ತಗಳಲ್ಲಿ ಕಂದ, ರಗಳೆ, ಮಾತ್ರಾಷಟ್ಪದಿ, ಮಾತ್ರಾತ್ರಿಪದಿ ಇವು ಮುಖ್ಯವಾದವು. ಮಾತ್ರಾಷಟ್ಪದಿ ಮತ್ತು ಮಾತ್ರಾ ತ್ರಿಪದಿಗಳನ್ನು ಮುಂದೆ ಅಧ್ಯಯನ ಮಾಡಲಿರುವುದರಿಂದ ಇಲ್ಲಿ

ಕಂದ ಮತ್ತು ರಗಳೆಗಳನ್ನು ಕುರಿತ ಚರ್ಚೆಗೆ ನಮ್ಮ ಅಧ್ಯಯನವನ್ನು ಮೀಸಲಿರಿಸಿಕೊಳ್ಳಲಾಗಿದೆ. ಏಕೆಂದರೆ ಷಟ್ಪದಿ ಮತ್ತು ತ್ರಿಪದಿಗಳು ಮೊದಲು ಅಂಶಗಣಾತ್ಮಕವಾಗಿದ್ದು ನಂತಹ ಮಾತ್ರಾಗಣಕ್ಕೆ ತಿರುಗಿದ್ದವಾಗಿವೆ. ಕಂದ ಮತ್ತು ರಗಳೆ ಮೂಲತಃ ಮಾತ್ರಾವೃತ್ತಕ್ಕೆ ಸೇರಿದ ಛಂದೋಪ್ರಕಾರಗಳಾಗಿವೆ.

ಅಕ್ಷರ ಛಂದಸ್ಸಿನಲ್ಲಿ ಅಕ್ಷರವು ಮೂಲಮಾನ. ಅಂಶಛಂದಸ್ಸಿನಲ್ಲಿ ಅಂಶವು ಮೂಲಮಾನ ಆಗಿರುವಂತೆಯೇ ಮಾತ್ರಾಛಂದಸ್ಸಿನಲ್ಲಿ ಮಾತ್ರೆಯು ಮೂಲಮಾನ. ಮಾತ್ರೆಗಳನ್ನು ಗಣಗಳಾಗಿ ಸಾಮಾನ್ಯವಾಗಿ ಚತುಮಾತ್ರಾಗಣಗಳಾಗಿ ವರ್ಗೀಕರಣಕೊಂಡು ಅಂತಹ ಗಣಗಳಿಂದ ಮಾತ್ರಬಂಧಗಳನ್ನು ಅಳೆಯಲಾಗುತ್ತದೆ. ಇದಕ್ಕೆ ಕಂದಪದ್ಯವನ್ನು ನಿದರ್ಶನವಾಗಿ ನಾವು ಇಲ್ಲಿ ಗಮನಿಸಬಹುದಾಗಿದೆ.

2.3. ಕಂದ

ಕನ್ನಡ ಸಾಹಿತ್ಯದಲ್ಲಿ ಕಂದಪದ್ಯ ತಕ್ಕಮಟ್ಟಿಗೆ ಪ್ರಾಚೀನವೂ ಬಹುಪ್ರಚುರವೂ ಆದ ಮಾತ್ರಾ ಛಂದಸ್ಸಿನ ಒಂದು ಬಂಧ. ಚಂಪೂಕಾವ್ಯಗಳಂತೂ ಕಂದಪದ್ಯದ್ದೇ ಮೇಲುಗೈ. ಜನಪದ ಸಾಹಿತ್ಯದಲ್ಲಿ ತ್ರಿಪದಿಗೆ ಸಂದ ಪ್ರಾಶಸ್ತ್ಯ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಕಂದಕ್ಕೆ ಸಲ್ಲುತ್ತದೆ. ಕಂದ ಎಂಬ ಪದ ದೇಶ್ಯ ಪದವಲ್ಲ. ಇದು ಸಂಸ್ಕೃತ ಪ್ರಾಕೃತ ಭಾಷೆಗಳ ಸಂಪರ್ಕದಿಂದ ಕನ್ನಡದಲ್ಲಿ ಕಾಣಿಸಿಕೊಂಡಿದೆ. ಸಂಸ್ಕೃತದ ಸ್ಕಂದಕ ಪ್ರಾಕೃತದಲ್ಲಿ ಖಂದಅ ಆಗಿ ಕನ್ನಡಕ್ಕೆ ಬರುವಾಗ ಕಂದ ಆಗಿದೆ (ಸ್ಕಂದಕ >ಖಂದ ಅ > ಖಂದ > ಕಂದ) ಎಂದು ತಿಳಿಯಲಾಗಿದೆ. ಸಂಸ್ಕೃತದ ಆರ್ಯಾಗೀತಿಯ ನೇರ ಪ್ರಭಾವ ಕಂದದ ಮೇಲಾಗಿದೆ. ಆದ್ದರಿಂದ ಕಂದದ ಮೇಲೆ ಪ್ರಾಕೃತದ ಖಂದಅ ಸಂಸ್ಕೃತದ ಆರ್ಯಾಗೀತಿ ಇವೆರಡರ ಪ್ರಭಾವವೂ ಇದೆ ಎನ್ನುವುದು ಸ್ಪಷ್ಟವಾಗುತ್ತದೆ.

ನಾಗವರ್ಮ ತನ್ನ ಛಂದೋಂಬುಧಿಯಲ್ಲಿ ಕಂದದ ಪದ್ಯದ ಲಕ್ಷಣವನ್ನು ಒಂದು ಪದ್ಯದಲ್ಲಿ ಹೀಗೆ ನಿರೂಪಿಸಿದ್ದಾನೆ.

ಪುರಬಾಣ ವಹ್ನಿ ಶರಗಣ
ಮಿರೆ ನಾಲ್ಕುಂ ಪದದೋಜೆಯುಗ್ಮಗಳೊಳ್ಪ
ನ್ನೆರಡಿರ್ಪತ್ತೋಳಿಯೆ ಪ
ನ್ನೆರಡಿರ್ಪತ್ತಾಗೆ ಮಾತ್ರೆಗಳ್ ಮೃಗನಯನೇ

2.3.0 ಕಂದದ ಲಕ್ಷಣ

ನಾಗವರ್ಮನ ಮೇಲಿನ ಪದ್ಯ ಹಾಗೂ ಜಯಕೀರ್ತಿ ಹೇಳಿರುವ ಕಂದ ಪದ್ಯದ ಲಕ್ಷಣವನ್ನು ಆಧರಿಸಿ ಕಂದ ಪದ್ಯದ ಲಕ್ಷಣವನ್ನು ಹೀಗೆ ನಾವು ತಿಳಿಯಬಹುದಾಗಿದೆ.

೧. ಕಂದ ಪದ್ಯ ನಾಲ್ಕು ಪಾದಗಳನ್ನು ಉಳ್ಳದ್ದು.
೨. ಈ ನಾಲ್ಕು ಪಾದಗಳಲ್ಲಿ ೧ ಮತ್ತು ೩ನೆಯ ಪಾದಗಳು ಒಂದು ಸಮನಾಗಿಯೂ (೪ ಮಾತ್ರೆಯ ೩ ಗಣಗಳು) ೨ ಮತ್ತು ೪ನೆಯ ಪಾದಗಳು ಮತ್ತೊಂದು ಸಮನಾಗಿಯೂ (೪ ಮಾತ್ರೆಯ ೫ ಗಣಗಳು)

ಇರುತ್ತವೆ.

೩. ಕಂದ ಪದ್ಯದ ವಿಷಯ ಸ್ಥಾನದಲ್ಲಿ (ಅಂದರೆ: ೧,೩,೫,೭,೯,೧೧,೧೩,೧೫) ಜಗಣ ಅಥವಾ ಮಧ್ಯ ಗುರುವಿನ (U - U) ಗಣ ಬರಕೂಡದು. ಆದರೆ ಕಂದಪದ್ಯದ ೬ನೆಯ ಸ್ಥಾನದಲ್ಲಿ ಜಗಣ ಅಥವಾ ಸರ್ವ ಲಘುವಿನ ಗಣ (ನಲಗಣ UUUU) ತಪ್ಪದೆ ಬರಬೇಕು. ಹಾಗೆ ಬರುವಾಗ ಆ ಗಣದ ಮೊದಲ ಹ್ರಸ್ವಾಕ್ಷರದ ಮುಂದೆ ಯತಿ ಬರಬೇಕು.

೪. ಕಂದಪದ್ಯದ ೮ನೆಯ ಗಣ ಗುರುವಿನಿಂದ ಅಂತ್ಯವಾಗಿರಬೇಕು.

೫. ಕಂದ ಪದ್ಯ ಒಟ್ಟು ೪ ಮಾತ್ರೆಯ ೧೬ ಗಣಗಳು ಅಥವಾ ೬೪ ಮಾತ್ರೆಗಳನ್ನು ಒಳಗೊಂಡಿರುತ್ತದೆ. ಅದರ ಪೂರ್ವಾರ್ಧದಲ್ಲಿ (೧೨+೨೦) ೩೨ ಮಾತ್ರೆಗಳನ್ನು ಉತ್ತರಾರ್ಧದಲ್ಲಿ (೧೨+೨೦) ೩೨ ಮಾತ್ರೆಗಳು ಇರುತ್ತವೆ.

ಕಂದಪದ್ಯದ ಈ ಲಕ್ಷಣ ವಿಚಾರಗಳನ್ನು ಒಂದು ಉದಾಹರಣೆಯ ಪದ್ಯದ ಮೂಲಕ ನಾವು ಹೀಗೆ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ.

- -	U - U	- -			
ಕಾವೇ	ರಿ ಯಿಂದ	ಮಾಗೋ			೪+೪+೪=೧೨ ಮಾತ್ರೆಗಳು
-UU	UU -	U -U	- -	-U -	
ದಾವರಿ	ವರಮಿ	ರ್ಪನಾಡ	ದಾಕ	ನ್ನಡದೊಳ್	೪+೪+೪+೪+೪= ೨೦ಮಾತ್ರೆಗಳು
-UU	U UU U	- UU			
ಭಾವಿಸಿ	ದ ಜನ ಪ	ದಂ ವಸು			೪+೪+೪+೪+೪=೨೦ ಮಾತ್ರೆಗಳು
-UU	U U -	U UUU	UUU U	- -	
ಧಾವಳ	ಯ ವಿಲೀ	ನ ವಿಶದ	ವಿಷಯ ವಿ	ಶೇಷಂ	೪+೪+೪+೪+=೨೦ ಮಾತ್ರೆಗಳು

ಮೇಲೆ ವಿವರಿಸಿದ ಎಲ್ಲ ಲಕ್ಷಣಗಳನ್ನು ಈ ಪದ್ಯ ಒಳಗೊಂಡಿದೆ. ನಾಲ್ಕು ಪಾದಗಳಿವೆ. ೧ ಮತ್ತು ೩ನೆಯ ಪಾದಗಳಲ್ಲಿ ೪ ಮಾತ್ರೆಯ ೩ ಗಣಗಳು ೨ ಮತ್ತು ೪ನೆಯ ಪಾದಗಳಲ್ಲಿ ೫ ಮಾತ್ರೆಯ ೪ ಗಣಗಳು ಬಂದಿವೆ. ೬ನೆಯ ಸ್ಥಾನದಲ್ಲಿ ಈ ಚಿಹ್ನೆ ಇರುವ ಗಣ ಜಗಣ (U - U) ಅಥವಾ ಸರ್ವಲಘುವಿನ ಗಣ (UUUU) ಬಂದಿದೆ. ೬ನೆಯ ಗಣದ ಮೊದಲ ಅಕ್ಷರ ಯತಿ ಆಗಿರುವುದನ್ನು ಗಮನಿಸಬಹುದು. ೮ನೆಯ (+ ಈ ಚಿಹ್ನೆ ಇರುವ ಗಣ ನೋಡಿ) ಗಣ ಗುರುವಿನಿಂದ ಅಂತ್ಯವಾಗಿದೆ. ಒಟ್ಟಾರೆ ಕಂದದ ಪದ್ಯದಲ್ಲಿ ೧೬ ಗಣಗಳು ಇಲ್ಲವೇ ೬೪ ಮಾತ್ರೆಗಳನ್ನು ಬಂದಿರುವುದನ್ನು ನೀವು ನೋಡಬಹುದು. (ಇದೇ ರೀತಿ ಕೆಲವು ಕಂದ ಪದ್ಯಗಳನ್ನು ಆರಿಸಿಕೊಂಡು ಅವುಗಳಿಗೆ ಪ್ರಸ್ತಾರ ಹಾಗಿ ಗಣ ವಿಂಗಡಿಸಿ ಆ ಛಂದಸ್ಸಿನ ವಿಶೇಷಾಂಶವನ್ನು ಗುರುತಿಸುವ ಕಡೆಗೆ ನಿಮ್ಮ ಗಮನವನ್ನು ಕೇಂದ್ರಿಕರಿಸುವ ಮೂಲಕ ಕಂದ ಪದ್ಯದ ಲಕ್ಷಣ ವಿಚಾರಗಳನ್ನು ಮನನ ಮಾಡಿಕೊಳ್ಳಲು ಪ್ರಯತ್ನಿಸಿ.)

2.3.1. ರಗಳೆ

ಈ ಪದ ಕೇಳಿದೊಡನೆಯೇ ನಿಮ್ಮ ಜ್ಞಾಪಕಕ್ಕೆ ಒಬ್ಬ ಕವಿಯ ಹೆಸರು ತಟ್ಟನೆ ಹೊಳೆಯುತ್ತದೆ ಅಲ್ಲವೇ. ಆ ಕವಿಯೇ ಹರಿಹರ ಎಂದೂ ನಾವು ಬಲ್ಲೆವು. ೧೨ನೆಯ ಶತಮಾನದ ಹೊತ್ತಿಗೆ ಹರಿಹರನ ಮೂಲಕ ವಿಶೇಷ ಪ್ರಸಿದ್ಧಿಗೆ ಬಂದಿರುವ ರಗಳೆಯ ಪ್ರಕಾರದಲ್ಲಿ ಉತ್ಸಾಹರಗಳೆ, ಮಂದಾನಿಲರಗಳೆ, ಲಲಿತ ರಗಳೆ ಎಂಬ ಮೂರು ಭೇದಗಳು ಇವೆ.

ಹಾಗಾದರೆ ರಗಳೆ ಎಂದರೇನು? ಛಂದಸ್ಸಿನ ಪರಿಭಾಷೆಯಲ್ಲಿ ರಗಳೆ ಎಂದರೆ ಸಾಮಾನ್ಯವಾಗಿ ಸಮಾನವಾದ ಮಾತ್ರಾ ಗುಣಗಳುಳ್ಳ ಬಹುಪಾದಗಳಿಂದ ಕೂಡಿದ ವೃತ್ತಕ್ಕೆ ರಗಳೆ ಎನ್ನುತ್ತೇವೆ. ರಗಳೆ ಮತ್ತು ರಘಟಾ ಎಂಬ ಪದಗಳನ್ನು ಮೊದಲು ಬಳಸಿದವರು ನಾಗವರ್ಮ. ಹಾಗಾಗಿ ಈ ಪದದ ನಿಷ್ಪತ್ತಿ ಮತ್ತು ಈ ಛಂದಸ್ಸಿನ ಉಗಮದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಆದರೆ ಪ್ರಾಕೃತ ಅಪಭ್ರಂಶ ಭಾಷೆಯಲ್ಲಿ ಕಾಣಸಿಗುವ ಪಜ್ಝಟಿಕಾ ಛಂದಸ್ಸೇ ಕನ್ನಡದ ರಗಳೆಯ ಉಗಮಕ್ಕೆ ಕಾರಣವೆಂದೂ ತಿಳಿಯಲಾಗಿದೆ ರಗಳೆಗೆ ಚರಣ ಸಂಖ್ಯೆಯ ನಿರ್ಬಂಧವಿಲ್ಲ.

ಗಣನಿಯಮ ವಿಪರ್‍ಯಾಸದೊ
ಳೆಣೆಪದದೊಳ್ ಕೂಡಿ ಮಾತ್ರೆ ಸಮನಾಗೆ ಗಣಾ
ಗ್ರಣಿಯ ಮತದಿಂದ ತಾಳದ
ಗಣನೆಗೊಡಂಬಟ್ಟುದದುವೆ ರಘಟಾ ಬಂಧಂ

ಎಂಬುದಾಗಿ ನಾಗವರ್ಮ ರಗಳೆಯ ಲಕ್ಷಣವನ್ನು ತಿಳಿಯಪಡಿಸಿದ್ದಾನೆ. ನಾಗವರ್ಮನ ಹಾಗೂ ಜಯಕೀರ್ತಿ ಹೇಳಿರುವ ಪ್ರಕಾರ ರಗಳೆಯ ಲಕ್ಷಣ ಕ್ರಮ ಹೀಗಿರುತ್ತದೆ.

2.3.1.0 ರಗಳೆಯ ಲಕ್ಷಣ

೧. ರಗಳೆ ಅನಿಯತ ಪಾದಸಂಖ್ಯೆಯನ್ನುಳ್ಳದ್ದು.
೨. ರಗಳೆಯ ಚರಣಗಳಲ್ಲಿ ಮಾತ್ರೆಗಳು ಗಣನಿಯಮ ವಿಪರ್‍ಯಾಸದಿಂದ ಕೂಡಿರುತ್ತವೆ.
೩. ಪ್ರತಿ ಎರಡೆರಡು ಚರಣಗಳಿಗೆ ಮಾತ್ರೆಗಳ ಸಂಖ್ಯೆ ಸಮನಾಗಿರುತ್ತದೆ.
೪. ರಗಳೆಯ ಲಯದಲ್ಲಿ ಒಳ್ಪು ಎದ್ದು ಕಾಣುತ್ತದೆ.
೫. ರಗಳೆಯು ತಾಳದ ಗಣನೆಗೆ ಒಡಂಬಡುತ್ತದೆ.

ಇದು ರಗಳೆಯ ಸಾಮಾನ್ಯ ಲಕ್ಷಣ ಕ್ರಮ. ಈಗ ರಗಳೆಯ ಪ್ರಭೇದಗಳಾದ ಉತ್ಸಾಹ, ಮಂದಾನಿಲ, ಲಲಿತರಗಳೆಗಳ ಲಕ್ಷಣ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸೋಣ.

2.3.1.1. ಉತ್ಸಾಹ ರಗಳೆ

ಉತ್ಸಾಹ ರಗಳೆಯಲ್ಲಿ ಪಾದವೊಂದಕ್ಕೆ ಮೂರು ಮಾತ್ರೆಯ ನಾಲ್ಕು ಗಣಗಳು (೧೨ ಮಾತ್ರೆಗಳು) ಬರಬಹುದು ಅಥವಾ ಮೂರು ಮಾತ್ರೆಯ ಮೂರು ಗಣಗಳು ಬಂದು ಕಡೆಯಲ್ಲಿ ಒಂದು ಗುರು (೧೧ ಮಾತ್ರೆಗಳು) ಬರಬಹುದು. ಇದು ಉತ್ಸಾಹ ರಗಳೆಯ ಲಕ್ಷಣ. ಆಂಡಯ್ಯನ ಕಬ್ಬಿಗರ ಕಾವ್ಯದಿಂದ ಆಯ್ದ ಈ ಪದ್ಯ ಸಾಲುಗಳನ್ನು ಉದಾಹರಣೆಯಾಗಿ ಗಮನಿಸಬಹುದಾಗಿದೆ.

UUU	- U	- U	-U
ಕುಳಿರ್ವ	ಪೂಗೊ	ಳಂ ಗ	ಳಲ್ಲಿ

UU U	- U	- U	- U
ತಳಿ ರ	ಕಾವ	ಣಂಗ	ಳಲ್ಲಿ

- U	- U	- U	- U
ತುಂಬಿ	ವಿಂಡಿ	ನಂತೆ	ಪಾಡಿ

-U	- U	- U	- U
ಜಕ್ಕ	ವಕ್ಕಿ	ಯಂತೆ	ಕೂಡಿ

ಈ ಪದ್ಯಸಾಲುಗಳನ್ನು ನೀವು ಗಮನಿಸಿದಂತೆ ಪ್ರತಿ ಪಾದದಲ್ಲಿಯೂ ಮೂರು ಮಾತ್ರೆಯ ನಾಲ್ಕು ಗಣಗಳು ಬಂದಿರುವುದು ವೇದ್ಯವಾಗುತ್ತದೆ. ಹಾಗೆಯೇ ಲಘುಗುರು ಸಂದರ್ಭಗಳನ್ನು ಈ ಹಿಂದಿನ ಘಟಕಾಂಶಗಳಲ್ಲಿ ಪರಿಚಯ ಮಾಡಿಕೊಂಡಿದ್ದೀರಿ ಅಲ್ಲವೇ. ಅದರಂತೆ 'ಕುಳಿರ್ವ' ಎನ್ನುವ ಪದವನ್ನು ನೋಡಿ. ಇಲ್ಲಿ 'ಳಿ' ನಿಯಮದ ಪ್ರಕಾರ ಗುರುವಾಗಬೇಕಿತ್ತು. ಆದರೆ ಲಘುವಾಗಿಯೇ ಇದೆ. ಕಾರಣ ಗೊತ್ತು. ಏನೆಂದರೆ ಇದು ಶಿಥಿಲ ದ್ವಿತ್ವ. ಆದ್ದರಿಂದ 'ಳಿ' ಒತ್ತಕ್ಷರದ ಹಿಂದಿನ ಅಕ್ಷರವಾದರೂ, ಅದು ಶಿಥಿಲದ್ವಿತ್ವವಾದ್ದದಿಂದ ಅದನ್ನು ಲಘುವೆಂದು ಪರಿಗಣಿಸುತ್ತೇವೆ. ಒತ್ತಿ ಉಚ್ಚರಿಸದೆ ತೇಲಿಸಿ ಉಚ್ಚರಿಸುವ ಅಕ್ಷರಕ್ಕೆ ಶಿಥಿಲದ್ವಿತ್ವವೆಂದು ಹೇಳುತ್ತೇವೆ ಎಂಬುದನ್ನು ಈ ಹಿಂದೆ ಗಮನಿಸಿದ್ದಿದೆ. ಅದನ್ನು ಜ್ಞಾಪಿಸಿಕೊಳ್ಳಿ.

೨. ಪಾದವೊಂದಕ್ಕೆ ಮೂರು ಮಾತ್ರೆಯ ಮೂರು ಗಣಗಳು ಬಂದು ಕಡೆಯಲ್ಲಿ ಒಂದು ಗುರು(೧೧ ಮಾತ್ರೆಗಳು) ಬರುವುದಕ್ಕೆ ಈ ಉದಾಹರಣೆಯನ್ನು ಗಮನಿಸಿ.

- U	U U U	- U	-	
ಮಾವಿ	ನ ಡಿಯೊ	ಳಾ ಡು	ತುಂ	೩+೩+೩+೩+೧ ಗುರು

- U	- U	- U	-	
ಪಾಡ	ನೆಯ್ದಿ	ಕೇಳು	ತುಂ	೩+೩+೩+೩+೧ ಗುರು

- U	- U	UUU	-	
ಪೊಟ್ತ	ನಿಂತು	ಕಳೆಯು	ತುಂ	೩+೩+೩+೩+೧ ಗುರು
UUU	- U	UUU	-	
ತೊಲಗ	ದಿರ್ದ	ರೆಸೆಯು	ತುಂ	೩+೩+೩+೩+೧ ಗುರು

(ಪಾದವೊಂದಕ್ಕೆ ೧೬ ಮಾತ್ರೆಗಳು)

ಇಲ್ಲಿನ ಪ್ರತಿ ಪಾದದಲ್ಲಿಯೂ ಮೂರು ಮಾತ್ರೆಯ ಮೂರು ಗಣಗಳು ಕೊನೆಯಲ್ಲಿ ಒಂದು ಗುರು ಬಂದಿದೆ. (ಪಾದವೊಂದಕ್ಕೆ ೧೧ ಮಾತ್ರೆಗಳು ಇವೆ) ಮೇಲಿನ ಎರಡು ಉದಾಹರಣೆಗಳಲ್ಲಿಯೂ ಅಂತ್ಯಪ್ರಾಸ ನಿಯತವಾಗಿರುವುದನ್ನು ನೀವು ಗಮನಿಸಬಹುದು. ಇದಲ್ಲದೆ ಉತ್ಸಾಹರಗಳೆಯಲ್ಲಿ ಪಾದವೊಂದಕ್ಕೆ ಮೂರು ಮಾತ್ರೆಯ ಎಂಟು ಗಣಗಳು (೨೪ ಮಾತ್ರೆಗಳು) ಬರುವುದುಂಟು. ಇದಕ್ಕೆ ಹರಿಹರನಲ್ಲಿ ಸಾಕಷ್ಟು ನಿದರ್ಶನಗಳಿವೆ.

2.3.1.2. ಮಂದಾನಿಲ ರಗಳೆ

ಮಂದಾನಿಲ ರಗಳೆಯಲ್ಲಿ ಪಾದವೊಂದಕ್ಕೆ ನಾಲ್ಕು ಮಾತ್ರೆಯ ನಾಲ್ಕು ಗಣಗಳು (೧೬ ಮಾತ್ರೆಗಳು) ಬರುವುದು ಸಾಮಾನ್ಯ. ಆದರೆ ಕೆಲವು ಸಂದರ್ಭದಲ್ಲಿ ಮೂರು ಮಾತ್ರೆಯ ಗಣದ ಮುಂದೆ ಐದು ಮಾತ್ರೆಯ ಗಣ, ಐದು ಮಾತ್ರೆಯ ಗಣದ ಮುಂದೆ ಮೂರು ಮಾತ್ರೆಯ ಗಣ ಬರುವುದುಂಟು. ಆದರೆ ಮಾತ್ರೆಗಳ ಸಂಖ್ಯೆ ಮಾತ್ರ ಹದಿನಾರೇ ಆಗಿರುತ್ತದೆ.

೧. ಪಾದವೊಂದಕ್ಕೆ ನಾಲ್ಕು ಮಾತ್ರೆಯ ನಾಲ್ಕು ಗಣಗಳು ಬಂದಿರುವುದಕ್ಕೆ ಉದಾಹರಣೆ:

- -	UUUU	- U U	UUUU	
ಆವೇ	ಳೆಯೊಳತಿ	ಸಂಭ್ರಮ	ಮೆಸೆದಿರೆ	೪+೪+೪+೪
- UU	UU -	UU -	UUUU	
ಪೂವಲಿ	ಪೂರವೀ	ದಿಗಳೊಳ್	ನೆರೆದಿರೆ	೪+೪+೪+೪

(ಪಾದವೊಂದಕ್ಕೆ ೧೬ ಮಾತ್ರೆಗಳು)

೨. ಮೂರು ಮಾತ್ರೆಯ ಗಣದ ಮುಂದೆ ಐದು ಮಾತ್ರೆಯ ಗಣ, ಐದು ಮಾತ್ರೆಯ ಗಣದ ಮುಂದೆ ಮೂರು ಮಾತ್ರೆಯ ಗಣ ಬರುವುದಕ್ಕೆ ಈ ಉದಾಹರಣೆಗಳನ್ನು ಗಮನಿಸಿ.

- U	UU U UU	UUU	UUU-	
ಅಲ್ಲಿ	ಸೊಗಯಿಸುವ	ಕೃ ತಕ	ಗಿರಿಗಳಿಂ	೩+೫+೩+೫
- U	UUUUU	- U	UUU -	
ಕಲ್ಪ	ತರುಗಳ ನೆ	ಪೋಲ್ಕ	ಮರಗಳಿಂ	೩+೫+೩+೫

ಪಾದವೊಂದಕ್ಕೆ ೧೬ ಮಾತ್ರೆಗಳು

ಇಲ್ಲಿ ಮೊದಲು ಮೂರು ಮಾತ್ರೆಯ ಗಣಬಂದಿದೆ. ನಂತರ ಐದು ಮಾತ್ರೆಯ ಗಣ ಬಂದಿದೆ. ಆದರೆ ಮಾತ್ರೆಯ ಸಂಖ್ಯೆ ಹದಿನಾರೇ ಇದೆ.

- - U	- U	- - U	UUU	
ಪುಣ್ಯಾಂಬು	ಪೂರ್ಣ	ಕುಂಭಾಗ್ರ	ಮುಚಿತ	೫+೩+೪+೩
- - U	- U	- - U	UUU	
ಶಂಕೇಲಿ	ಪಲ್ಲ	ವೋಲ್ಲಾಸ	ರಚಿತ	೫+೩+೪+೩

(ಪಾದವೊಂದಕ್ಕೆ ೧೬ ಮಾತ್ರೆಗಳು)

ಇಲ್ಲಿ ಮೊದಲು ಐದು ಮಾತ್ರೆಯ ಗಣ ಬಳಿಕ ಮೂರು ಮಾತ್ರೆಯ ಗಣ ಬಂದಿರುವುದನ್ನು ಗಮನಿಸಬಹುದು. ಆದ್ದರಿಂದಲೇ ನಾಗವರ್ಮ ರಗಳೆ ಗಣನಿಯಮದಲ್ಲಿ ವ್ಯತ್ಯಾಸದಿಂದ ಕೂಡಿರುತ್ತದೆ. ಮಾತ್ರೆಗಳ ಸಂಖ್ಯೆ ಎರಡು ಸಾಲುಗಳಿಗೆ ಅನುಗುಣವಾಗಿ ಸಮನಾಗಿರುತ್ತದೆ ಎಂದು ತನ್ನ ಲಕ್ಷಣ ಪದ್ಯದಲ್ಲಿ ತಿಳಿಸಿದ್ದಾನೆ. ಇಲ್ಲಿಯೂ ಅಂತ್ಯಪ್ರಾಸ ಸಹಜವಾಗಿರುವುದನ್ನು ನೀವು ನೋಡಬಹುದು.

ಈ ಮಂದಾನಿಲ ರಗಳೆಯ ಮೇಲೆ ಪ್ರಾಕೃತದ 'ಪಜ್ಝಟಿ ಕಾ' ಛಂದಸ್ಸಿನ ಪ್ರಭಾವ ನಿಚ್ಚಳವಾಗಿ ಆಗಿರುವುದು ಕಂಡುಬರುತ್ತದೆ. ಮಂದಾನಿಲ ರಗಳೆಗೆ ಪಂಪ 'ಮಟ್ಟರಗಳೆ' ಎಂದೂ ಪೊನ್ನ 'ತ್ವರಿತರಗಳೆ' ಎಂದೂ ಹೆಸರಿಸಿದ್ದಾರೆ. ಮಂದಾನಿಲ ರಗಳೆಯ ನಡೆ ವೇಗವಾದದ್ದು. ಆವೇಶ, ಉದ್ವೇಗ, ಶೋಕ ಮುಂತಾದ ಭಾವನೆಗಳ ಅಭಿವ್ಯಕ್ತಿಗೆ ಇದು ಅತ್ಯಂತ ಸಹಕಾರಿ ಎನಿಸಿದೆ.

2.3.1.3 ಲಲಿತ ರಗಳೆ

ಪಾದವೊಂದರಲ್ಲಿ ಐದು ಮಾತ್ರೆಯ ನಾಲ್ಕು ಗಣಗಳು (೨೦ ಮಾತ್ರೆಗಳು) ಬಂದರೆ ಅದಕ್ಕೆ ಲಲಿತ ರಗಳೆ ಎಂದು ಹೆಸರು. ಉದಾಹರಣೆ ನೋಡಿ.

- U -	- UUU	-UUU	- - U	
ಸೊಂಪಿನಿಂ	ಕಂಪಿಡುವ	ಸಂಪಿಗೆಗ	ಳು ಕೊಂಡು	೫+೫+೫+೫
- UUU	- - U	UU - U	- - U	
ಹೊಂಪೆಸೆವ	ಹೊಂಗೇದ	ಗೆಯ ಹೂಗ	ಳಂ ಕೊಂಡು	೫+೫+೫+೫

ಪಾದವೊಂದರಲ್ಲಿ ಐದು ಮಾತ್ರೆಯ ನಾಲ್ಕು ಗಣಗಳು (೨೦ ಮಾತ್ರೆಗಳು) ಬಂದಿವೆ.

ಲಲಿತ ರಗಳೆಯಲ್ಲಿ ಆದಿ ಮತ್ತು ಅಂತ್ಯಪ್ರಾಸ ಪಾಲಿತವಾಗಿದೆ. ಇದರ ಬಳಕೆ ೧೦ನೆಯ ಶತಮಾನದಿಂದಲೇ ಕಂಡುಬರುತ್ತದೆ. ಪಂಪನ 'ಆದಿಪುರಾಣ' ದಲ್ಲಿ ರನ್ನನ 'ಅಜಿತ ತೀರ್ಥಂಕರ ಪುರಾಣ' ದಲ್ಲಿ ಇದರ ಬಳಕೆ ಆಗಿದೆ. ಒಟ್ಟಿನಲ್ಲಿ ಉತ್ಸಾಹರಗಳೆ ಮತ್ತು ಮಂದಾನಿಲ ರಗಳೆಗಿಂತ ಕನ್ನಡದಲ್ಲಿ ಹೆಚ್ಚು ಪ್ರಸಿದ್ಧಿಗೊಂಡು ಬಳಕೆಯಾಗಿರುವ ರಗಳೆ ಎಂದರೆ ಅದು ಲಲಿತರಗಳೆಯೇ. ಇದೆ ಲಲಿತ

ರಗಳೆ ತನ್ನ ಆದಿ ಮತ್ತು ಅಂತ್ಯಪ್ರಾಸಗಳನ್ನು ಕಳಚಿಗೊಂಡು ಹೊಸಗನ್ನಡ ಛಂದಸ್ಸಿನಲ್ಲಿ ಸರಳ ರಗಳೆಯಾಗಿ ಪ್ರಚಾರದಲ್ಲಿದೆ. ಅದೇನೆ ಇರಲಿ ಉತ್ಸಾಹ ರಗಳೆಯಲ್ಲಿ ಪಾದವೊಂದರಲ್ಲಿ ೧೨ ಮಾತ್ರೆಗಳು, ಮಂದಾನಿಲ ರಗಳೆಯಲ್ಲಿ ಪಾದವೊಂದರಲ್ಲಿ ೧೬ ಮಾತ್ರೆಗಳು, ಲಲಿತ ರಗಳೆಯಲ್ಲಿ ಪಾದವೊಂದರಲ್ಲಿ ೨೦ ಮಾತ್ರೆಗಳು ಬರುವುದು ಸಾಮಾನ್ಯ.

2.4. ಅಂಶವೃತ್ತಗಳು

ಇದುವರೆಗಿನ ಅಧ್ಯಯನ ಅಭ್ಯಾಸ ಕ್ರಮಗಳಿಂದ ನಾವು ವರ್ಣವೃತ್ತಗಳು ಮತ್ತು ಮಾತ್ರಾವೃತ್ತಗಳು ಕಂದ, ರಗಳೆ, ಇವುಗಳ ಬಗ್ಗೆ ಪರಿಚಯವನ್ನು ಮಾಡಿಕೊಂಡಿದ್ದೇವೆ. ಈಗ ದೇಶಿಯ ಮಟ್ಟುಗಳಾದ ಅಂಶವೃತ್ತಗಳ ಬಗ್ಗೆ ಇಲ್ಲಿ ತಿಳಿದುಕೊಳ್ಳಲು ಪ್ರಯತ್ನಿಸೋಣ.

ವರ್ಣವೃತ್ತಗಳು ಸಂಸ್ಕೃತ ಛಂದಸ್ಸಿನ ಬಳುವಳಿಯಾದರೆ, ಮಾತ್ರಾವೃತ್ತಗಳು ಸಂಸ್ಕೃತ ಪ್ರಾಕೃತ ಅಪಭ್ರಂಶ ಭಾಷೆಯಿಂದ ಕನ್ನಡದಲ್ಲಿ ಕಾಣಿಸಿಕೊಂಡಿವೆ. ಆದರೆ ಅಂಶವೃತ್ತಗಳು ದ್ರಾವಿಡ ಭಾಷಾ ಛಂದಸ್ಸಿನ ವೈಶಿಷ್ಟ್ಯವಾಗಿವೆ. ಕನ್ನಡ ಛಂದಸ್ಸಿಗೆ ಸಂಸ್ಕೃತ ಪ್ರಾಕೃತದ ಕೊಡುಗೆ ಗಣನೀಯವಾದರೂ ದ್ರಾವಿಡ ಭಾಷೆಯ ಜಾಯಮಾನಕ್ಕೆ ತನ್ನದೇ ಆದ ಸ್ವರ, ಧಾಟಿ, ನಾದಗಳಿಗನುಗುಣವಾಗಿ ವಿಶಿಷ್ಟ ಮಟ್ಟುಗಳು ಇವೆ. ತ್ರಿಪದಿ, ಪಿರಿಯಕ್ಕರ, ಷಟ್ಪದಿ ಮತ್ತು ಸಾಂಗತ್ಯಗಳನ್ನು ಮುಖ್ಯವಾಗಿ ಈ ಹಿನ್ನೆಲೆಯಲ್ಲಿ ನಾವು ಗಮನಿಸಬಹುದು.

ನಾಗವರ್ಮನು ತನ್ನ ಛಂದೋಂಬುಧಿಯ ಪ್ರಥಮಾಧಿಕಾರದ ಅಂತ್ಯದಲ್ಲಿ ಒಂದು ಕಂದ ಪದ್ಯದ ಮೂಲಕ ಅಚ್ಚಗನ್ನಡ ಛಂದಸ್ಸಿನ ಹತ್ತು ಮಟ್ಟುಗಳನ್ನು ಹೀಗೆ ತಿಳಿಯಪಡಿಸಿದ್ದಾನೆ. ಅಲ್ಲದೆ ಇವನ್ನು 'ಕರ್ಣಾಟಕ ವಿಷಯ ಜಾತಿ' ಛಂದಸ್ಸೆಂದು ಕರೆದಿದ್ದಾನೆ.

ಮದನವತಿಯಕ್ಕರಂ ಚೌ
ಪದಿ ಗೀತಿಕೆಯೇಳೆ ತಿವದಿಯುತ್ಸಾಹಂ ಷ
ಟ್ಪದಿಯಕ್ಕರರಿಗೆ ಕರಂ ಚೆ
ಲ್ವೊದವಿದ ಛಂದೋವಸಂತಮಚ್ಚದಳಾಕ್ಷಿ

೧. ಮದನವತಿ, ೨. ಅಕ್ಕರ, ೩. ಚೌಪದಿ, ೪. ಗೀತಿಕೆ, ೫. ಏಳೆ, ೬. ತ್ರಿಪದಿ, ೭. ಉತ್ಸಾಹ, ೮.ಷಟ್ಪದಿ, ೯. ಅಕ್ಕರಿಕೆ, ೧೦. ಛಂದೋವಸಂತ ಇವು ನಾಗವರ್ಮ ಹೇಳಿರುವ ಅಚ್ಚಗನ್ನಡ ಮಟ್ಟುಗಳು. ಪ್ರಸ್ತುತ ಅಧ್ಯಯದಲ್ಲಿ ಈ ಎಲ್ಲಾ ಅಂಶವೃತ್ತಗಳ ವಿವರಣೆ ಅಥವಾ ಪರಿಚಯ ಅನಗತ್ಯವೆಂದು ಭಾವಿಸಿ ಕೇವಲ ಅಕ್ಕರ, ಚೌಪದಿ, ಏಳೆ, ತ್ರಿಪದಿ, ಸಾಂಗತ್ಯ ಈ ಛಂದೋ ಪ್ರಕಾರಗಳನ್ನಷ್ಟೇ ಇಲ್ಲಿ ಪ್ರಸ್ತಾಪಿಸಿದ್ದೇನೆ.

2.4.0 ಅಕ್ಕರ

ಅಕ್ಕರವಲ್ಲಿ ಐದು ಭೇದಗಳಿವೆ. ಪಿರಿಯಕ್ಕರ, ದೊರೆಯಕ್ಕರ, ನಡುವಣಕ್ಕರ, ಎಡೆಯಕ್ಕರ, ಕಿರಿಯಕ್ಕರ ಎಂಬುದಾಗಿ. ಜಯಕೀರ್ತಿ ತನ್ನ ಛಂದೋನುಶಾಸನಂ ಎಂಬ ಕೃತಿಯಲ್ಲಿ ಇವಕ್ಕೆ ಕ್ರಮವಾಗಿ ಮಹಾಕ್ಷರ, ಸಮನಾಕ್ಷರ, ಮಧ್ಯಾಕ್ಷರ, ಅಂತರಾಕ್ಷರ, ಅಲ್ಪಾಕ್ಷರ ಎಂಬ ಹೆಸರಿನಿಂದ ಕರೆದಿದ್ದಾನೆ. ಜಯಕೀರ್ತಿ ಅಂತರಾಕ್ಷರದಿಂದ ಲಕ್ಷಣವನ್ನು ಹೇಳಿದ್ದರೆ ನಾಗವರ್ಮ ಪಿರಿಯಕ್ಕರದಿಂದ ಲಕ್ಷಣವನ್ನು ಹೇಳಿದ್ದಾನೆ. ಈಗ ಪಿರಿಯಕ್ಕರದ ಲಕ್ಷಣ ಕ್ರಮ ನೋಡೋಣ.

2.4.0.1. ಪಿರಿಯಕ್ಕರ

ನಾಗವರ್ಮ ಹೇಳಿರುವ ಪಿರಿಯಕ್ಕರದ ಲಕ್ಷಣ ಲಕ್ಷ್ಯ ಪದ್ಯ ಹೀಗಿದೆ

ಬ್ರ	ವಿ	ವಿ	ವಿ	ವಿ	ವಿ	ರು
UU U	UUU -	- UU	- UU	- U	U - U U	- U - -
ಮೊದಲೊ	ಳಜಗಣಂ	ಕುಂದದೆ	ಬರ್ಕತ್ತ	ಮಯ್ಯು	ಗ ಣಂಗ ಳೆ	ವಿಷ್ಣುವಕ್ಕುಂ

ಬ್ರ	ವಿ	ವಿ	ವಿ	ವಿ	ವಿ	ರು
UU U	- - U	- UU	- U -	- - U	UUU -	UUU-U
ತುದಿಯೊ	ಳೇಟಟೆಂಬ	ತಾಣದೊ	ಳೆಲ್ಲಿಯುಂ	ಕಂದರ್ಪ	ರಿಪುಗಣಂ	ನೆಲಸಿನಿಲ್ಕೆ

ಬ್ರ	ವಿ	ವಿ	ವಿ	ವಿ	ವಿ	ರು
UUU	UU - U	- U -	- U - U	UU -	UU - U	- U - -
ಪದದೊ	ಳೆರಡೆಂಬ	ಸಂಖ್ಯೆಯೊ	ಳ್ನಾಲ್ಕಟೊಳ	ಜಗಣಂ	ಸಮವಾಯ	ಮಪ್ಪೊಡಕ್ಕುಂ

ಬ್ರ	ವಿ	ವಿ	ವಿ	ವಿ	ವಿ	ರು
UUU	- U U	-UU	- UU	- UU	- UU	UU- U -
ಸದಮ	ಳೇಂದು ನಿ	ಭಾನನೆ	ನಾಕಿಗ	ನಿಪ್ಪದಿ	ನಿಂತಿದು	ಪಿರಿಯಕ್ಕರಂ

ಈ ಪ್ರಕಾರ ಪಿರಿಯಕ್ಕರಕ್ಕೆ ನಾಲ್ಕು ಪಾದಗಳಿರುತ್ತವೆ. ಪ್ರತಿಪಾದದಲ್ಲಿಯೂ ೭ ಗಣಗಳು ಇರುತ್ತವೆ. ೧. ಬ್ರಹ್ಮಗಣ + ೫ ವಿಷ್ಣುಗಣ + ೧ ರುದ್ರಗಣ (ಒಟ್ಟು ೭ ಗಣಗಳು). ಹೀಗೆ ಇದರ ಗಣ ವಿನ್ಯಾಸವಿರುತ್ತದೆ.

ಬ್ರ+ವಿ+ವಿ+ವಿ+ವಿ+ವಿ=ರು ಈ ಕ್ರಮದಲ್ಲಿ ಗಣವಿನ್ಯಾಸವಿರುತ್ತದೆ. ಆದರೆ ನಾಗವರ್ಮನ ಲಕ್ಷಣ ಪದ್ಯದ ಪ್ರಕಾರ ಪಾದದ ೨ನೆಯ ಮತ್ತು ೪ನೆಯ ಗಣ ಬ್ರಹ್ಮಗಣವಾಗುವ ಸಾಧ್ಯತೆಯುಂಟು (ಇದನ್ನು ಕೆಲವು ವಿದ್ವಾಂಸರು ೨ನೆಯ ಪಾದದ ೪ನೆಯ ಗಣವೆಂದು ಅರ್ಥೈಸಿ ವ್ಯಾಖ್ಯಾನಿಸಿರುವುದುಂಟು) ಒಟ್ಟಿನಲ್ಲಿ ವಿಷ್ಣುಗಣದ ಬದಲಾಗಿ ಹಾಡಿಗೆ ಹೊಂದಿ ಬ್ರಹ್ಮಗಣ ಬರಬಹುದು. ಮೊದಲನೆಯ ಬ್ರಹ್ಮಗಣಕ್ಕೆ ಕೊನೆಯ ರುದ್ರಗಣಕ್ಕೆ ಅಪೂರ್ವವಾಗಿ ವಿಷ್ಣುಗಣವೂ ಬರಬಹುದು. ಪಂಪ ಭಾರತದಲ್ಲಿ

ಈ ಛಂದಸ್ಸು ಪ್ರಯೋಗವಾಗಿರುವುದಕ್ಕೆ ಉದಾಹರಣೆಗಳು ಕಂಡುಬರುತ್ತದೆ.

2.4.0.2. ದೊರೆಯಕ್ಕರ

ಅಕ್ಕರದ ಎರಡನೇ ಭೇದವಾದ ದೊರೆಯಕ್ಕರವನ್ನು ಕುರಿತು ನಾಗವರ್ಮ ಹೀಗೆ ಹೇಳುತ್ತಾನೆ. ಅದು ಆರು ಗಣಗಳಿಂದ ಕೂಡಿದ್ದು ವಿಷ್ಣು ಬ್ರಹ್ಮಗಣಗಳ ಮಿಶ್ರಣಗಳಿಂದ ರಚಿತವಾಗಿದೆ.

ಸರಸಿಜೋದರಗಣ ಮೆರಡಜನುಮಲ್ಲಿ ನೆರೆದಿರ್ಕೆ ಮತ್ತೆ
ಸರಸಿಜೋದರ ಗಣ [ಮೆರಡಜನಮಕ್ಕೆ] ಗಣಮುಮಾಱಕ್ಕು
ಸರಸಿಜಲೋಚನೆ ದೊರೆವೆತ್ತಗಣದಿಂ ದೊರೆವೆತ್ತ ಪೆಸರಿಂ
ದೊರೆಯಾಗಿ ಸಂದುದು ದೊರೆಯಕ್ಕರಮಿದನಱಿವುದೀತೆಱದಿಂ|
ಮೇಲ್ಕಂಡ ಪದ್ಯದ ಒಂದು ಸಾಲನ್ನು ಪ್ರಸ್ತಾರ ಹಾಕಿ ನೋಡಬಹುದು:

೧	೨	೩	೪	೫	೬
ವಿ	ವಿ	ಬ್ರ	ವಿ	ವಿ	ಬ್ರ
UUU-	UUUU	UUU	UU-U	UU-U	-U
ಸರಸಿಜೋ	ದ ರ ಗ ಣ	ಮೆರಡ	ಜನುಮಲ್ಲಿ	ನೆರೆದಿರ್ಕೆ	ಮತ್ತೆ

ಮೊದಲು ಎರಡು ವಿಷ್ಣುಗಣ, ಅನಂತರ ಒಂದು ಬ್ರಹ್ಮ ಗಣ ಅನಂತರ ಎರಡು ವಿಷ್ಣು ಗಣ ಕೊನೆಯಲ್ಲಿ ಒಂದು ಬ್ರಹ್ಮ ಗಣ. ಹೀಗೆ ಒಟ್ಟು ಆರು ಗಣಗಳು ಬರುತ್ತವೆ.

2.4.0.3 ನಡುವಣಕ್ಕರ

ನಡುವಣಕ್ಕರ ಹೆಸರೆ ಹೇಳುವಂತೆ ನಡು ಅಥವಾ ಮಧ್ಯದ್ದು. ಹಿಂದಿನದ್ದು ಆರು ಗಣಗಳಿಂದ ಕೂಡಿದ್ದರೆ ಇದು ಐದುಗಣಗಳಿಂದ ಕೂಡಿದೆ. ಅಂದರೆ ಕ್ರಮೇಣ ಒಂದೊಂದೆ ಗಣ ಕಡಿಮೆಯಾಗುತ್ತ ಕಿರಿದಾಗುತ್ತ ಹೋಗುತ್ತಿರುವುದನ್ನು ಗಮನಿಸಿಬಹುದು. ಈಗ ನಾಗವರ್ಮ ಹೇಳುವ ಲಕ್ಷ್ಯಲಕ್ಷಣ ಪದ್ಯವನ್ನು ಗಮನಿಸಿ:

ಜಳಜ ಸಂಭವಗಣಮಕ್ಕೆ ಮೊದಲೊಳೆ ನಡುವೆ ಮೂಱುಂ
ಜಳರುಹೋದರಗಣಮಕ್ಕೆ ಬಱಕಾಮಾರಿಗಣಂ
ತಿಳಕದಂತಿರೆ ತಲೆಯೊಳೆ ಬಂದಿರ್ಕೆ ಕಾಮಬಾಣಾ
ವಳಿಯ ಪಾಂಗಯ್ದೆ ಗಣಮಕ್ಕೆ ನಡುವಣಕ್ಕರಕೆ ಸಖೀ

ಮೇಲ್ಕಂಡ ಪದ್ಯದ ಮೊದಲ ಸಾಲಿನಂತಯೆ ಉಳಿದ ಮೂರು ಸಾಲುಗಳು ಗಣಲಕ್ಷಣಗಳನ್ನು ಹೋಲುತ್ತವೆ. ಹಾಗಾಗಿ ಮೊದಲ ಸಾಲಿನಲ್ಲಿ ಗಣಗಳು ಹೀಗಿವೆ. ಜಳಜಸಂಭವ ಗಣ ಎಂದರೆ ಬ್ರಹ್ಮಗಣ (ತಾವರೆಯಲ್ಲಿ ಹುಟ್ಟಿದವನು) ಮೊದಲಲ್ಲಿ ಬರಬೇಕು. ಅನಂತರ ಮೂರು ಜಳರುಹೋದರಗಣ

ಅಂದರೆ ಉದರದಲ್ಲಿ ತಾವರೆಯುಳ್ಳವನು ವಿಷ್ಣುಗಣ. ಇದಾದ ಮೇಲೆ ಕಾಮಾರಿಗಣಂ ಅಂದರೆ ಕಾಮನ ಶತ್ರು ರುದ್ರಗಣ ಬರಬೇಕು. ಇದು ಕಾಮಬಾಣಾವಳಿಯ ಪಾಂಗು ಅಂದರೆ ಮನ್ಮಥನಿಗೆ ಐದು ಬಾಣಗಳು (ನೀಲೋತ್ಪಲಂ ಪಂಚದಳಂ ಪಂಚಬಾಣಸ್ಯ ಸಾಯಕಾಃ) ಹಾಗೆಂದರೆ ಐದು ಗಣಗಳ ಎಂದರ್ಥ. ಅಲ್ಲಿಗೆ ೧ ಬ್ರ ೩ ವಿಷ್ಣು ೧ ಗುರು ಗಣಗಳು ಬರಬೇಕೆಂದ ಹಾಗಾಯಿತು. ಈಗ ನೋಡಿ:

ಬ್ರ	ವಿ	ವಿ	ವಿ	ರು
UUU	- UU	UU- U	UUUU	UUU - -
ಜಳಜ	ಸಂಭವ	ಗಣಮಕ್ಕೆ	ಮೊದಲೊಳೆ	ನಡುವೆ ಮೂಱುಂ

ಜಯಕೀರ್ತಿಯು ನಾಗವರ್ಮನ ಮಾದರಿಯಲ್ಲೆ ಹೇಳಿದ್ದಾನೆ. ಇದಕ್ಕೆ 'ಲಕ್ಷ್ಯ ಕರ್ಣಾಟಕ ಮಾಲತಿ ಮಾಧವ' ದಲ್ಲಿದೆ ಎಂದಿದ್ದರೂ ಆ ಕೃತಿ ಇನ್ನೂ ಸಿಕ್ಕಿಲ್ಲ. ಇದಕ್ಕೆ ತೆಲುಗಿನ ಛಂದೋಗ್ರಂಥದಲ್ಲಿ 'ಮಧುರಾಕ್ಷರ' ಎಂದಿದ್ದಾರೆ.

2.4.0.4. ಎಡೆಯಕ್ಕರ

ನಾಗವರ್ಮ ಇದರ ಲಕ್ಷ್ಯ ಲಕ್ಷಣವನ್ನು ಹೀಗೆ ಹೇಳಿದ್ದಾನೆ.

ಜಲಜ ಸಂಭವ ಗಣಮಕ್ಕೆ ಮೊದಲೊಳತ್ತಲ್
ವನರುಹೋದರಗಣಯುಗಳಮದಕ್ಕೆ
ರುದ್ರನದೞಂತ್ಯದೊಳ್ಬಂದಿರ್ಕೆ ನಾಲ್ಕೆಗಣ
ವನಿತೇ ಕೇಳೆಡೆಯಕ್ಕರಕ್ಕನಿತುಂ ||೫-೭||

ನಾಲ್ಕು ಪಾದಗಳು. ಪ್ರತಿಪಾದದಲ್ಲೂ ಮೊದಲು ಬ್ರಹ್ಮಗಣ ಅನಂತರ ಎರಡು ವಿಷ್ಣುಗಣ ಕೊನೆಯಲ್ಲಿ ರುದ್ರಗಣ ಬರಬೇಕೆನ್ನುತ್ತಾನೆ. ಒಟ್ಟು ನಾಲ್ಕು ಗಣಗಳು. ಈಗ ಪ್ರಸ್ತಾರ ಹಾಕಿ ನೋಡಬಹುದು.

ಬ್ರ	ವಿ	ವಿ	ರು
UUU	- UU	UU - U	U U U U -
ವನಜ	ಸಂಭವ	ಗಣಮಕ್ಕೆ	ಮೊದಲೊಳತ್ತಲ್

ಬ್ರ+ವಿ+ವಿ+ರು= ೪ ಗಣಗಳು.
ಜಯಕೀರ್ತಿ ನಾಗವರ್ಮನ ಲಕ್ಷಣವನ್ನೇ ಅನುಸರಿಸಿದ್ದಾನೆ. 'ಕರ್ಣಾಟೇಶ್ವರ ಕಥಾ' ಎಂಬ ಕೃತಿಯಲ್ಲಿ ಇದೇ ಲಕ್ಷಣ ಕ್ರಮವನ್ನೂ ಹೇಳಿದ್ದರೂ ಆ ಕೃತಿ ಸಿಕ್ಕಿಲ್ಲ. ತೆಲುಗಿನ ಅಪ್ಪಕವಿಯೂ ಇದೇ ಲಕ್ಷಣ ಕ್ರಮವನ್ನು ಹೇಳಿದ್ದಾನೆ.

2.4.0.5. ಕಿಱಿಯಕ್ಕರ

ಈ ವೃತ್ತಕ್ಕೆ ನಾಗವರ್ಮ ಜಯಕೀರ್ತಿ ಒಂದೇ ರೀತಿಯ ಲಕ್ಷಣವನ್ನು ಹೇಳುತ್ತಾರೆ. ಜೊತೆಗೆ 'ಶೃಂಗಾರ ಪಿಂಡ' ಎಂಬ ಕಾವ್ಯದಲ್ಲಿ ಇದನ್ನು ಬಳಸಲಾದ ಬಗ್ಗೆಯೂ ಹೇಳುತ್ತಾರೆ. ಆದರೆ ಆ ಕಾವ್ಯ ದೊರೆತ್ತಿಲ್ಲ.

ನಾಗವರ್ಮ ಹೇಳುವ ಲಕ್ಷ್ಯ ಲಕ್ಷಣವನ್ನು ಈಗ ಗಮನಿಸಬಹುದು:-
ಪೊಡೆಯಲರಿರ್ಬರುಂ ಮೊದಲೊಳಿರ್ಕೆ
ಜಡೆಯಂಶಂಕರನೊರ್ವಂ ತುದಿಯೊಳಿರ್ಕೆ
ಮಡದಿಕೇಳ್ ಮೂಱುಗಣಮೆಸೆದಿರ್ಕೆ
ಗಡ ಕಿಱಿಯಕ್ಕರಕ್ಕಿವೆ ಲಕ್ಷಣಂ
ಈಗ ಒಂದು ಸಾಲಿಗೆ ಗಣಪ್ರಸಾರ ಹಾಕಿ ನೋಡೋಣ:-

ವಿ	ವಿ	ರು
UUUU	- U -	U U U - U
ಪೊಡೆಯಲ	ರಿರ್ಬರುಂ	ಮೊದಲೊಳಿರ್ಕೆ

ನಾಲ್ಕು ಪಾದಗಳು, ಮೊದಲೆರಡು ವಿಷ್ಣುಗಣ, ಅನಂತರ ಒಂದು ರುದ್ರಗಣ ಒಟ್ಟು ಮೂರು ಗಣಗಳು ಬರುತ್ತವೆ. ಅಂದರೆ ವಿ+ವಿ+ರು= ೩

ಅಕ್ಕರಗಳಲ್ಲಿ ಐದು ಬಗೆಯಾದರೂ ಕಾವ್ಯಗಳಲ್ಲಿ ಹೆಚ್ಚಾಗಿ ಬಳಕೆಯಾದುದು ಪಿರಿಯಕ್ಕರವೆ. ಮೊದಲು ಅಕ್ಕರವೆಂಬ ಹೆಸರಿನಿಂದ ಬಳಕೆಯಾಗುತ್ತಿದ್ದು ಕಾಲಕ್ರಮೇಣ ಉಳಿದ ಅಕ್ಕರಗಳು ರೂಢಿಗೆ ಬಂದದ್ದರಿಂದಲೂ, ಎಲ್ಲಕ್ಕಿಂತ ಹೆಚ್ಚು ಗಣವಿರುವುದರಿಂದಲೂ ಮೊದಲನೆಯದನ್ನು ಪಿರಿಯಕ್ಕರವೆಂದು ಕರೆದಿರಬಹುದು.

ಪಿರಿಯಕ್ಕರದಿಂದ ಕಿಱಿಯಕ್ಕದವರೆಗೆ ಒಂದೊಂದು ಗಣ ಕಡಿಮೆಯಾಗುತ್ತ ಹೋಗುತ್ತದೆ. ಕೊನೆಯ ಅಕ್ಕರದ ಹೊತ್ತಿಗೆ ಕಿಱಿಯಕ್ಕರದಲ್ಲಿ ಬ್ರಹ್ಮಗಣವೇ ಬರುವುದಿಲ್ಲ. ಇದು ಗಮನಿಸುವಂಥಾದ್ದು. ಪಿರಿಯಕ್ಕರ ಈಗ ಸಿಕ್ಕಿರುವ ಕಾವ್ಯಗಳಲ್ಲಿ ಅಲ್ಲಲ್ಲಿ ದೊರೆಯುತ್ತದೆ. ಆದರೆ ಮಿಕ್ಕವು ಸಿಗುವುದಿಲ್ಲ.

ಕನ್ನಡ ಕವಿಗಳು ಸಂಸ್ಕೃತ ಛಂದಸ್ಸನ್ನು ಧಾರಾಳವಾಗಿ ಬಳಸಿದಂತೆ ಅಚ್ಚಕನ್ನಡ ಮಟ್ಟುಗಳನ್ನು ಬಳಸಿಲ್ಲ. ಸ್ರಗ್ಧರಾ, ಮಹಾಸ್ರಗ್ಧರಾ, ಚಂಪಕ ಮಾಲೆಗಳ ರೀತಿಯಲ್ಲೇ ಅಕ್ಕರವನ್ನು ಪ್ರಯೋಗಿಸಬಹುದಿತ್ತು. ಅದು ಏತಕ್ಕಾಗಿ ಅವರ ದೃಷ್ಟಿ ಇತ್ತ ಬೀಳಲಿಲ್ಲವೋ ಎಂಬ ಪ್ರಶ್ನೆ ನಮ್ಮನ್ನು ಸಹಜವಾಗಿ ಕಾಡುತ್ತದೆ.

2.4.1. ಚೌಪದಿ

'ಚೌಪದಿ' ಯ ಲಕ್ಷಣವನ್ನು ಏಳೆಯ ನಂತರ ನಾಗವರ್ಮ ಹೇಳುತ್ತಾನೆ. ಈ ಛಂದಸ್ಸು ಪಾಠಾಂತರದ ಗೊಂದಲದಿಂದ ಮುಕ್ತವಾದುದು. ಉತ್ಸಾಹ ಛಂದಸ್ಸು ಕೂಡ ಪಾಠಾಂತರದ ಗೊಂದಲಕ್ಕೆ ಒಳಗಾಗಲಿಲ್ಲ.

ಇದು ಹೆಸರೇ ಹೇಳುವ ಹಾಗೆ ಚೌಪದಿ ನಾಲ್ಕು ಸಾಲಿನ ಪದ್ಯ. ಲಕ್ಷ್ಯ ಲಕ್ಷಣ ಒಂದರಲ್ಲೇ ಇದೆ. ನಾಗವರ್ಮ ಹೀಗೆ ಹೇಳುತ್ತಾನೆ.

ಮದನನ ತಂದೆಯ ಮುಂ
ದುದಯಿಸೆ ಸಂದುದು ನೋ
ಳ್ಪದವಿರೆ ಸಂದುದು ನೋ
ಡಿದೆ ಸತಿ ಚೌಪದಿಗೇ

ಮದನನ ತಂದೆ ಎಂದರೆ ವಿಷ್ಣು. ಅವನ ಮುಂದೆ ಶಂಕರ ಬಂದರೆ ಅಂದರೆ ರುದ್ರ ಬಂದರೆ ಚೌಪದಿಯಾಗುತ್ತದೆ. ಅಂದರೆ ಚೌಪದಿ ನಾಲ್ಕು ಸಾಲುಗಳ ಪದ್ಯ ಪ್ರತಿಸಾಲಿನಲ್ಲಿ ಒಂದು ವಿಷ್ಣು ಒಂದು ರುದ್ರಗಣ ಬರುತ್ತದೆ.

ವಿ ರು
ವಿ ರು
ವಿ ರು
ವಿ ರು
ಈ ಕ್ರಮದಲ್ಲಿರುತ್ತದೆ ಇದರ ಗಣವಿನ್ಯಾಸ.

ಚೌಪದಿಯನ್ನು ಚೂಡಾಮಣಿ ಎಂಬ ಕಾವ್ಯದಲ್ಲಿ ಬಳಸಲಾಗಿದೆ ಎಂದು ಜಯಕೀರ್ತಿ ಸೂಚಿಸಿದ್ದಾನೆ. ಆದರೆ ಈ ಕಾವ್ಯ ನಮಗೆ ಸಿಕ್ಕಿಲ್ಲ. ಚಂದ್ರರಾಜನ 'ಮದನ ತಿಲಕ' ದಲ್ಲಿ (ಸು.೧೧ನೇ ಶತಮಾನ) ಚೌಪದಿಗೆ ಒಂದು ಉದಾಹರಣೆ ದೊರೆಯುತ್ತದೆ. ಇದು ಅಷ್ಟೊಂದು ಗೇಯಾಂಶದಿಂದ ಕೂಡಿಲ್ಲವೆಂದು ವಿದ್ವಾಂಸರು ಹೇಳುತ್ತಾರೆ. ಜೊತೆಗೆ ಅದು ಕಂದ ಪದ್ಯದ ವೇಷಾಂತರವೂ ಆಗಿರಬಹುದೆಂದು ಊಹಿಸುತ್ತಾರೆ. ನಾಗವರ್ಮನ ಈ ಚೌಪದಿ ಅಂಶಗಣದಂತೆ ಮಾತ್ರಾಗಣದಿಂದಲೂ ಕೂಡಿರುವಂತೆ ತೋರುತ್ತದೆ.
ಉದಾಹರಣೆ ನೋಡಿ

ವಿ ರು
UU - - UU - - -
ರತಿಹೀನಂ| ಪೆಟವಂ ಕುಜ್ಜಂ| ವಿ + ರು

ವಿ ರು
UU - - UU- - -
ಮತಿವಂತಂ| ಕೃಶನತ್ಯಂತ್ಯಂ| ವಿ + ರು

ವಿ ರು
UU - - UU- - -
ಋತುವಾಕ್ಯಂ| ಸತಿಯಂ ಕಾಯ| ವಿ + ರು

ವಿ ರು
UU- - UU - - -
ಲ್ಕತಿಶಿಷ್ಟಂ| ಪೆಱತೇಂ ಶ್ರೇಷ್ಠಂ| ವಿ + ರು

2.4.2. ಏಳೆ

ಏಳೆ ಕರ್ಣಾಟಕ ವಿಷಯ ಜಾತಿಗೆ ಸೇರಿದ ಛಂದೋಪ್ರಕಾರಗಳಲ್ಲಿ ಒಂದು. ಇದರ ಲಕ್ಷಣವನ್ನು ನಾಗವರ್ಮ ತನ್ನ ಛಂದೋಂಬುಧಿಯಲ್ಲಿ ಹೀಗೆ ತಿಳಿಸಿದ್ದಾನೆ.

ವಿ	ವಿ	ವಿ	ವಿ
UU-U	UUUU	UU U -	UU - U
ಭುಜಪಕ್ಷ	ಪುರಗಣ	ವ್ರಜದೊಳಾ	ಱಱೊಳಕ್ಕು

ವಿ	ಬ	ವಿ
UUUU	- U	UUU-
ಮಜಗಣ	ಮೇಳೆ	ಗಿಭಗತೀ

ಭುಜ ಅಂದರೆ ಚತುರ್ಭುಜ ನಾಲ್ಕು. ತ್ರಿಪುರ ಮೂರು. ಅಲ್ಲಿಗೆ ನಾಲ್ಕು + ಮೂರು=ಏಳೆಗೆ ಏಳು ಗಣಗಳು. ಅದರಲ್ಲಿ ಆರನೆಯ ಗಣ ಬ್ರಹ್ಮಗಣವಾಗಿರುತ್ತದೆಂದು ನಾಗವರ್ಮ ತಿಳಿಸಿದ್ದಾನೆ. ಅಂದರೆ ಏಳೆಯ ಗಣ ವಿನ್ಯಾಸ ಹೀಗಿರುತ್ತದೆ.

ವಿ. ವಿ. ವಿ. ವಿ. ಮೊದಲನೆಯ ಪಾದದಲ್ಲಿ ನಾಲ್ಕು ವಿಷ್ಣು ಗಣಗಳು
ವಿ. ಬ್ರ. ವಿ. ಎರಡನೆಯ ಪಾದದಲ್ಲಿ ೧ ವಿಷ್ಣು+ ೧ ಬ್ರಹ್ಮ+ ೧ವಿಷ್ಣು ಬಂದಿರುತ್ತದೆ.

ತ್ರಿಪದಿಯ ಮೂರನೆಯ ಪಾದವನ್ನು ಬಿಟ್ಟರೆ ಏಳೆಯ ಲಕ್ಷಣವಾಗುತ್ತದೆಂಬ ಅಭಿಪ್ರಾಯ ಕೂಡ ಇದೆ. ಸಾಮಾನ್ಯವಾಗಿ ತಿಳಿದಿರುವಂತೆ ಕನ್ನಡ ಕಾವ್ಯಗಳಲ್ಲಾಗಲೀ ಶಾಸನಗಳಲ್ಲಾಗಲೀ ಏಳೆಯ ಛಂದಸ್ಸಿನ ಪದ್ಯಗಳು ಲಭ್ಯವಿಲ್ಲ. ಜನಪದ ಸಾಹಿತ್ಯದಲ್ಲಿ ಮಾತ್ರ ಏಳೆಯ ಜಾತಿಗೆ ಸೇರಿದ ಪದ್ಯಗಳು ದೊರೆಯುತ್ತವೆ. ಉದಾಹರಣೆಗೆ ಒಂದು ಪದ್ಯ ಗಮನಿಸಿ.

ವಿ ವಿ ವಿ ವಿ
- U - UU-U -UU - - U
ಸುಬ್ಬಿಮ್ಮೆ ನೆರೆದಾಳ ಸುಬ್ಬಿಗೆ ನೊಯ್ಯಾಲೆ ವಿ+ವಿ+ವಿ+ವಿ

ವಿ	ಬ್ರ	ವಿ	
- U U	- U	UU - U	
ಕೊಬ್ಬರಿ	ಕಾರ	ತಿಳಿದುಪ್ಪ	ವಿ+ಬ್ರ+ವಿ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಏಳೆಯಲ್ಲಿ ಕಾವ್ಯರಚಿಸಿದವರಲ್ಲಿ ಎಸ್.ವಿ. ಪರಮೇಶ್ವರಭಟ್ಟರು ಅಗ್ರಗಣ್ಯರು. ಅವರ 'ತುಂಬೆ ಹೂ' ಕವನ ಸಂಕಲನದಲ್ಲಿ ಏಳುನೂರು ಏಳೆ ಪದ್ಯಗಳಿವೆ. ಉದಾಹರಣೆಗೆ ಇಲ್ಲಿ ಒಂದು ಏಳೆ ಪದ್ಯವನ್ನು ಗಮನಿಸಿ.

ವಿ	ವಿ	ವಿ	ವಿ	
- U -	UU - U	- U U	UU - U	
ಗಡ್ಡವಿ	ದ್ದರವೆಲ್ಲ	ದೊಡ್ಡವ	ರೆನಬೇಡ	ವಿ+ವಿ+ವಿ+ವಿ

ವಿ	ಬ್ರ	ವಿ	
- UU	- U	- UU	
ಗಡ್ಡದ	ಹೋತ	ದೊಡ್ಡದೆ	ವಿ+ಬ್ರ+ವಿ

2.4.3. ಷಟ್ಪದಿ

ಜನಪದ ಸಾಹಿತ್ಯದಲ್ಲಿ ತ್ರಿಪದಿಯ ಮಟ್ಟು ಜನಪ್ರಿಯವಾಗಿ ಬಳಕೆಗೆ ಬಂದಂತೆ ನಡುಗನ್ನಡ ಸಾಹಿತ್ಯದಲ್ಲಿ ಷಟ್ಪದಿ ಆ ಸ್ಥಾನವನ್ನು ಪಡೆದುಕೊಂಡಿದೆ. ರಾಘವಾಂಕ, ಲಕ್ಷ್ಮೀಶ, ಕುಮಾರವ್ಯಾಸ ಮುಂತಾದ ಕವಿಗಳು ಇದರಲ್ಲಿ ಸಿದ್ಧಹಸ್ತರು. ಷಟ್ಪದಿ ಮಟ್ಟನ್ನು ಜನಸಾಮಾನ್ಯರ ಹತ್ತಿರ ಒಯ್ದು, ಅದನ್ನು ಜನಪ್ರಿಯಗೊಳಿಸಿದವರೂ ಇವರೇ. ಇಂದಿಗೂ ಆ ಮಟ್ಟಿನ ಜನಪ್ರಿಯತೆಗೆ ಕುಂದುಂಟಾಗಲಿಲ್ಲ. ನಡುಗನ್ನಡದ ಹೆಸರಾಂತ ಕವಿ ಲಕ್ಷ್ಮೀಶ ಷಟ್ಪದಿಗಳನ್ನು ಕುರಿತು ಹೇಳಿದ ಮಾತು ಷಟ್ಪದಿಗಳ ಆಕರ್ಷಣೆಯನ್ನು ಹೇಳುತ್ತದೆ. ಈಗ ನೋಡಿ ಆ ಸಾಲುಗಳನ್ನು.

ನಿರುತಮಂಜುಳ ಶಬ್ದದಿಂದ ಕಿವಿಗಿಂಪಾಗಿ
ಚಲಿಸುವ ಸುಲಲಿತ ಷಟ್ಪದಿಗಳೆಡೆವಿಡದೆ ಝೇಂ
ಕರಿಸದಿರ್ಪವೆಂದು ನೆರೆದ ವಿದ್ವತ್ಸಭಾನೀರೇರುಹಾಕರದೊಳು ||

ಷಟ್ಪದಿಯ ಭಾಷೆ ಬಗ್ಗೆ ಇಲ್ಲಿ ಹೊಗಳಿಕೆಯಿದೆ. ಕಿವಿಗಿಂಪಾಗುವ ಶಬ್ದಗಳಿಂದ ಪೋಣಿತವಾದ ಈ ಬಂಧ ದುಂಬಿಗಳಂತೆ ಝೇಂಕರಿಸುತ್ತವೆ ಎಂಬ ಮಾತು ಇದಕ್ಕೆ ಕೊಟ್ಟ ಪ್ರಶಸ್ತಿ ಪತ್ರವಾಗುತ್ತದೆ. ಜೊತೆಗೆ ಮೇಲ್ಕಂಡ ಮಾತುಗಳನ್ನು ಗಮನಿಸಿದಾಗ ಷಟ್ಪದಿ ಬಗ್ಗೆ ಕವಿಗಿರುವ ಒಲವು ಕೂಡ ಎದ್ದು ಕಾಣುತ್ತದೆ. 'ಕಥಾಸು ಷಟ್ಪದಿಯೇಚ್ಛಾ' ಕಥೆಗಳನ್ನು ಹೇಳಬೇಕಾದರೆ ಷಟ್ಪದಿಗಳನ್ನು ಬಳಸಬೇಕೆಂಬ ಸೂಚನೆ ಇದ್ದುದರಿಂದ ರಾಘವಾಂಕ, ನಾರಣಪ್ಪ, ಲಕ್ಷ್ಮೀಶ ಮುಂತಾದವರು ತಮ್ಮ ಸುದೀರ್ಘ ಕಥೆಯ ಕಾವ್ಯಾಭಿವ್ಯಕ್ತಿಗೆ ಇದನ್ನೇ ಮಾಧ್ಯಮವಾಗಿ ಬಳಸಿದರು. ಹಾಡಿನ ಲಯ, ಬಳುಕು, ವ್ಯಂಗ್ಯ ಹಾಸ್ಯ ಎಲ್ಲಕ್ಕೂ ಈ ಮಟ್ಟು ಸಮರ್ಥ ಮಾಧ್ಯಮವಾಯಿತು.

2.4.3.0. ಅಂಶಷಟ್ಪದಿ

ನಾಗವರ್ಮನ ಕಾಲದಲ್ಲಿ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಈ ಆರು ಮಾತ್ರಾಷಟ್ಪದಿಗಳು ಇದ್ದಂತೆ ಕಂಡು ಬರುವುದಿಲ್ಲ. ಅವನು ಹೇಳುವ ಷಟ್ಪದಿ ಒಂದೇ ಬಗೆಯಲ್ಲಿದ್ದು ಕಾಲ ಕ್ರಮದಲ್ಲಿ ಭಿನ್ನ ಲಯಗಳಿಗನುಗುಣವಾಗಿ ಆರು ಷಟ್ಪದಿಗಳಾಗಿ ಕಾಣಿಸಿಕೊಂಡಿರಬಹುದು. ಅಕ್ಕರಗಳಲ್ಲಿ ಹೇಗೆ ಗಣಗಳ ಸ್ಥಾನ ಬದಲಾವಣೆಯಿಂದ ವಿಭಿನ್ನ ಲಯಗಳನ್ನು ಹುಟ್ಟಿಸುವ ಮೂಲಕ ಅಕ್ಕರಗಳಲ್ಲಿ ಭೇದಗಳನ್ನು ಮಾಡಿಕೊಂಡು ಪ್ರಯೋಗ ಮಾಡಿದಂತೆ ಷಟ್ಪದಿಯಲ್ಲಿಯೂ ಆ ಕೆಲಸ ಮಾಡಿರುವ ಸಾಧ್ಯತೆಯಿದೆ.

ಷಟ್ಪದಿ ವಿಷಯವನ್ನು ಪ್ರಸ್ತಾಪಿಸುವ ಛಂದೋಗ್ರಂಥಗಳೆಂದರೆ ನಾಗವರ್ಮನ 'ಛಂದೋಂಬುಧಿ' ಜಯಕೀರ್ತಿಯ 'ಛಂದೋನುಶಾಸನ' ೨ನೇ ಸೋಮೇಶ್ವರನ (ಕ್ರಿ.ಶ.೧೧೨೯) ಮಾನಸೋಲ್ಲಾಸ, ಶಾರ್ಙ್ಗದೇವನ (ಕ್ರಿ.ಶ. ಸು ೧೨೫೦) 'ಸಂಗೀತ ರತ್ನಾಕರ' ಈ ಗ್ರಂಥಗಳಲ್ಲಿ ಷಟ್ಪದಿ ಬಗ್ಗೆ ಪ್ರಸ್ತಾಪವಿದೆ. ನಾಗವರ್ಮನ 'ಛಂದೋಂಬುಧಿ' ಯ ಪಾಠ ಅಪಪಾದವಾಗಿದ್ದು ಅದನ್ನು ಪ್ರೊ. ತೀ.ನಂ.ಶ್ರೀಯವರು ತಿದ್ದಿದ್ದಾರೆ. ಅವರು ಪರಿಷ್ಕರಿಸಿದ ಪಾಠಾಂತರ ಪದ್ಯ ಹೀಗಿದೆ.

ಮಂದರ ಧರಗಣ
ಬಂದಿರ್ಕಾರಂತ್ಯದೊಳ್
ಕುಂದದೆ ನೆಲಸುಗೆ ಮದನಹರಂ
ಇಂದು ನಿಭಾನನೆ
ಮುಂದಣತೆಱನುಮೀ
ಯಂದಮಾದಂದು ಷಟ್ಪ (ದ) ಲಕ್ಷಣಂ||

ಕೊನೆ ಪಾದ 'ಯಂದವೆಯಾಗಲ್ಕೆ ಷಟ್ಪದಿಕೇಳ್' ಎಂಬಂತೆ ಇದ್ದಿರುವುದೂ ಅಸಂಭವವಲ್ಲವೆಂದಿದ್ದಾನೆ.
(ಇಲ್ಲಿ ಮಂದರ ಧರಗಣ ಅಂದರೆ ವಿಷ್ಣುಗಣ, ಮದನಹರ ಅಂದರೆ ರುದ್ರಗಣ) ಈ ಪ್ರಕಾರ ಷಟ್ಪದಿ ಆರು ಸಾಲುಗಳ ಪದ್ಯ ಜಾತಿ. ಇದರ ೧,೨ ಮತ್ತು ೪,೫ ನೇಯ ಪಾದಗಳಲ್ಲಿ ಎರೆಡರಡು ವಿಷ್ಣುಗಣಗಳು, ೩ ಮತ್ತು ೬ನೆಯ ಪಾದಗಳಲ್ಲಿ ೨ ವಿಷ್ಣುಗಣ ೧ ರುದ್ರಗಣ ಬರುತ್ತವೆ. ಶಾಂತಿನಾಥನ (೧೧೬೮) 'ಸುಕುಮಾರ ಚರಿತೆ' ಕಾವ್ಯದಲ್ಲಿ ಬರುವ ಒಂದು ಷಟ್ಪದಿ ಪದ್ಯವನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದಾಗಿದೆ.

ವಿ	ವಿ	
UU UU	-UU	
ಅದುಪರ	ಮಾಸ್ಪದ	ವಿ + ವಿ
ವಿ	ವಿ	
UU - U	-UU	
ಮದುಪುಣ್ಯ	ಸಂಪದ	ವಿ + ವಿ

ವಿ	ವಿ	ರು	
UU -U	UUUU	- - - -	
ಮದುಮಹಾ	ಭ್ಯುದಯ	ವಿ ಲಾಸಾವಾಸಂ	ವಿ + ವಿ + ರು
ವಿ	ವಿ		
UU -U	UU -U		
ಅದು ದಿಬ್ಯ	ಮದು ಸೇಭ್ಯ		ವಿ + ವಿ
ವಿ	ವಿ		
UU -U	UU -U		
ಮದು ಸೌಮ್ಯ	ಮದು ರಮ್ಯ		ವಿ + ವಿ
ವಿ	ವಿ		
UU U -	-U -	- U - -	
ಮದು ಸುಖಾ	ಧಾರ ಸಂ	ಸಾರ ಸಾರಂ	ವಿ + ವಿ

1.4.3.1. ಮಾತ್ರಾ ಷಟ್ಪದಿ

ಷಟ್ಪದಿಗಳು ಕನ್ನಡ ಕಾವ್ಯಗಳಲ್ಲಿ ೧೧ನೆಯ ಶತಮಾನದ ಮಧ್ಯಭಾಗದಿಂದ ದೊರೆಯುತ್ತವೆಯಾದರೂ ಅದು ಉತ್ಸಾಹ, ಅಕ್ಕರಿಕೆ ಮದನವತಿಗಳಂತೆ ಮೊದಲು ಹೆಚ್ಚು ಆಕರ್ಷಿಸಲಿಲ್ಲ. ಬಹುಶಃ ಅದು ಜನಪದ ಮಟ್ಟಾಗಿದ್ದಿರಲು ಸಾಕು. ಆ ಕಾಲದಲ್ಲಿ ಬಹಳಷ್ಟು ಪ್ರಚಾರದಲ್ಲಿತ್ತೆಂದು ಶಾಸನಗಳಲ್ಲಿ ಇದು ಹೆಚ್ಚು ಹೆಚ್ಚಾಗಿ ದೊರೆಯುವುದರಿಂದ ಊಹಿಸಲು ಶಕ್ಯವಿದೆ. ರಾಘವಾಂಕನ ನಂತರವೇ ಇದು ಅತ್ಯಂತ ಸಮರ್ಥ ಮಟ್ಟಾಗಿ ಕವಿಗಳನ್ನು ಸೆಳೆಯಿತು. ಅದಕ್ಕಿಂತ ಮುಂಚಿತವಾಗಿ ಇದು ಕಾವ್ಯಗಳಲ್ಲಿ ಪ್ರಮುಖ ಸ್ಥಾನ ಗಳಿಸಿಕೊಳ್ಳಲಿಲ್ಲ. ಆದರೆ ಮಾತ್ರಾ ಷಟ್ಪದಿ ವಚನಕಾರರ ಕಾಲಕ್ಕಾಗಲೇ ರೂಪುಗೊಳ್ಳುತ್ತಿರುವುದು ನಮಗೆ ಕಂಡು ಬರುತ್ತದೆ. ವಚನಕಾರಕ ಕ್ರಾಂತಿಕಾರರ ಧೋರಣೆಗಳಲ್ಲಿ ದೇಸಿ ಮಟ್ಟುಗಳನ್ನು ಬಳಸಿದುದೂ ಒಂದು. ಆ ಕಾಲದಲ್ಲೆ ಅಂಶ ತ್ರಿಪದಿಗಳು ಮಾತ್ರಾ ತ್ರಿಪದಿಗಳತ್ತ ತಿರುಗುತ್ತಿರುವ ಉದಾಹರಣೆಗಳುಂಟು. ಬಹುಶಃ ಆ ಪರಿಸರದಲ್ಲೇ ಅಂಶ ಷಟ್ಪದಿಯು ಮಾತ್ರಾ ಷಟ್ಪದಿಯಾಗಿ ಹೊರಳುತ್ತಿದ್ದುದನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ಗೊತ್ತಾಗುತ್ತದೆ.

ಪೋಲಾಳ್ವ ದಂಡನಾಥ (ಸು. ೧೨೨೪) ರಾಘವಾಂಕ (ಸು. ೧೨೩೦) ಕುಮುದೇಂದು (ಸು. ೧೨೭೫) ಮುಂತಾದವರು ಅಂಶದಿಂದ ಮಾತ್ರೆಯತ್ತ ಹೊರಳಿಸಿದವರಲ್ಲಿ ಪ್ರಮುಖರಾಗುತ್ತಾರೆ.

ಡಿ.ಎಸ್. ಕರ್ಕಿಯವರು ಅಂಶಷಟ್ಪದಿ ಮಾತ್ರಾ ಷಟ್ಪದಿ ಆದ ಬಗೆಯನ್ನು ದೀರ್ಘವಾಗಿ ವಿವೇಚಿಸಿ ಈ ರೀತಿ ಹೇಳುತ್ತಾರೆ- "ಮೂಲ ಷಟ್ಪದಿಯ ಕಿರಿಯ ಚರಣದಲ್ಲಿ ಎರಡು ವಿಷ್ಣುಗಣಗಳು, ವಿಷ್ಣುಗಣದ ಪ್ರಕಾರಗಳಲ್ಲಿ ನಾಲ್ಕು ಮಾತ್ರೆಗಳು ಅಡಕವಾಗುವ ಪ್ರಕಾರಗಳೂ ಎರಡು. ಒಂದು U U -, ಇನ್ನೊಂದು UUUU. ಹೀಗಿರುವುದರಿಂದ ಮೂಲ ಷಟ್ಪದಿಯ ಕಿರಿ ಚರಣಗಳಲ್ಲಿ ನಾಲ್ಕು ನಾಲ್ಕು ಮಾತ್ರೆಗಳ ಎರಡು ಗಣಗಳು ಬರುವುದು ಸಂಭವನೀಯ. ಹೀಗಾದರೆ ಶರಕ್ಕೆ ದಾರಿಯಾಗುತ್ತದೆ. ಅದರ ಮೇಲೆ ಮಂದಾನಿಲ ರಗಳೆಯ ಮಾರ್ಗವಾಗಿ ಉಂಟಾದ ಪ್ರಾಕೃತದ ಪ್ರಭಾವದಿಂದಾಗಿ ಶರ

ಷಟ್ಪದಿಯು ಅವತಾರ ತಾಳಿರಬೇಕು. ಇದೇ ಪ್ರಕಾರ ಐದೈದು ಮಾತ್ರೆಗಳು ಅಡಕವಾಗುವ ವಿಷ್ಣುಗಣದ ಪ್ರಕಾರಗಳಿಂದ ಕುಸುಮ ಷಟ್ಪದಿಯ ಅವತಾರಕ್ಕೆ ದಾರಿಯಾಗುವುದೆಂಬುದನ್ನು ತೋರಿಸಬಹುದು". (ಕನ್ನಡ ಛಂದೋವಿಕಾಸ, ಪು. ೧೮೨)

ಅಂಶಷಟ್ಪದಿ ಬಲು ಜಾಗ್ರತೆ ಮಾತ್ರಾಷಟ್ಪದಿಯಾಗಿ ರೂಪುಗೊಳ್ಳುತ್ತಿದ್ದಂತೆಯೇ ಕುಸುಮ, ಶರ ಮುಂತಾದ ೪, ೫ ಮಾತ್ರೆಗಳ ಷಟ್ಪದಿ ರೂಪುಗೊಂಡಿತು. ಅಂಶದಿಂದ ಮಾತ್ರೆಗೆ ತಿರುಗಿದ ಬಗ್ಗೆ ಸಿದ್ಧರಾಮನ (ಕ್ರಿ.ಶ. ಸು. ೧೧೬೦) ಬಸವಸ್ತೋತ್ರ ತ್ರಿವಿಧಿಯಿಂದ ಒಂದು ಪದ್ಯವನ್ನು ಉದ್ಧರಿಸಬಹುದು.

-UUU	UU-U		೫+೫
ಚೆನ್ನೆಯರ |	ಬಲೆಯಲ್ಲಿ		
-UUU	UU UUU		೫+೫
ಎನ್ನನಿರಿ|	ಸಿದೆ ಪ್ರಭುವೆ		
-UUU	-UUU	- U - U	೫+೫+೮
ಇನ್ನಿದಕೆ |	ಭಾವಜನು |	ಬೇಂಟೆಗಾ|ರ	
-UUU	- - U		೫+೫
ಕುನ್ನಿಗಳು |	ತಾವೈದು		
-UUU	UU -U		೫+೫
ಎನ್ನ ಗೃಹಿ |	ಸದ ಮುನ್ನ		
-U U	UU UUU	- U - -	೫+೫+ಗು
ಚಿನ್ಮಯ |	ಪ್ರಭು ಸಲಹೊ |	ಯೋಗಿನಾ|ಥಾ||	

ಸಾಮಾನ್ಯವಾಗಿ ವಿಷ್ಣುಗಣಗಳು ಐದು ಮಾತ್ರೆಗಳಿಗೆ ಹೊರಳಲು ಹೆಚ್ಚು ಅವಕಾಶವಿದ್ದದ್ದರಿಂದ ಕ್ರಮೇಣ ಇತ್ತ ಹೊರಳಿ ಮೂಲ ಅಥವಾ ಅಂಶ ಷಟ್ಪದಿಯಿಂದ ಮಾತ್ರಾಷಟ್ಪದಿಯಾದ ಕುಸುಮ ಹುಟ್ಟಿಕೊಂಡಿರಲು ಹೆಚ್ಚು ಅವಕಾಶ ಇದೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಮಾತ್ರಾ ಷಟ್ಪದಿಗೆ ಬಂದಾಗ ಅಲ್ಲಿ ೬ ಬಗೆಯ ಷಟ್ಪದಿಗಳನ್ನು ಕಾಣುತ್ತೇವೆ. ಆ ಆರು ಷಟ್ಪದಿಗಳು ಯಾವುವು ಎಂದರೆ ೧. ಶರಷಟ್ಪದಿ, ೨. ಕುಸುಮ ಷಟ್ಪದಿ, ೩. ಭೋಗ ಷಟ್ಪದಿ, ೪. ಭಾಮಿನಿ ಷಟ್ಪದಿ, ೫. ಪರಿವರ್ಧಿನಿ ಷಟ್ಪದಿ, ೬. ವಾರ್ಧಕ ಷಟ್ಪದಿ ಇವೇ ಆ ಆರು ಷಟ್ಪದಿಗಳು. (ಉದ್ದಂಡಷಟ್ಪದಿ ವಾರ್ಧಕಕ್ಕೆ ತೀರ ಹತ್ತಿರವಾದ್ದರಿಂದ ಅದನ್ನು ಪ್ರತ್ಯೇಕವಾಗಿ ಗಣಿಸಿಲ್ಲ.)

2.4.3 ಶರಷಟ್ಪದಿ :

೧ -೨ ಮತ್ತು ೪ - ೫ ನೆ ಪಾದಗಳಲ್ಲಿ ೪ ಮಾತ್ರೆಯ ಗಣಗಳು ಎರಡು, ೩ - ೬ ನೇ ಪಾದಗಳಲ್ಲಿ ೪ ಮಾತ್ರೆಯ ಗಣ ಮೂರು ಮತ್ತು ೧ ಗುರು ಬಂದರೆ ಶರಷಟ್ಪದಿ ಆಗುರತ್ತದೆ. ಉದಾಹರಣೆಗೆ ಈ ಪದ್ಯದ ಅರ್ಧ ಭಾಗವನ್ನು ಗಮನಿಸಿ.

೪	೪		
ಈಶನ |	ಕರುಣೆಯ |	=	೮

೪	೪			=	೮
ನಾಶಿಸು	ವಿನಯದಿ				
೪	೪	೪	ಗು	=	೧೪
ದಾಸನ	ಹಾಗೆಯೆ	ನಿಮನ	ವೇ		

(ಇನ್ನರ್ಧ ಇದರಂತೆ)

2.4.4. ಕುಸಮ ಷಟ್ಪದಿ

೧-೨ ಹಾಗೂ ೪-೫ ನೇ ಪಾದಗಳಲ್ಲಿ ೫ ಮಾತ್ರೆಗಳು ಎರಡು, ೩-೬ ನೇ ಪಾದಗಳಲ್ಲಿ ೫ ಮಾತ್ರೆಗಣ ಮೂರು ಮತ್ತು ೧ ಗುರು ಬರುತ್ತದೆ

೫	೫			
ನಾಡ ಮನ	ಸಿಜ ನೊಲವಿ			= ೧೦
೫	೫			= ೧೦
ನಾಡು ವಡೆ	ಸಂತತಂ			
೫	೫	೫	ಗು	೧೫ + ೨ = ೧೭
ಬೀಡು ರತಿ	ಪತಿಗೆ ಸತ	ತ ನಿಧಾ	ವು	

ಕ್ರಿ.ಶ. ಸು. ೧೪೩೦ರಲ್ಲಿ ರಚಿತವಾದ ಗುರುಬಸವನ **'ಮನೋವಿಜಯ ಕಾವ್ಯ' ಈ** ಷಟ್ಪದಿಯಲ್ಲಿದೆ.ಕುಮಾರ ಪದ್ಮರಸನ (ಸು. ೧೨೩೦) **'ಸಾನಂದ ಚರಿತೆ' ಯಲ್ಲಿ ಈ ಷಟ್ಪದಿಯನ್ನು** ಹೆಚ್ಚಾಗಿ ಬಳಸಲಾಗಿದೆ. ಅಂಶಗಣದಲ್ಲಿ **ವಿಷ್ಣುಗಣದ ಪಂಚಮಾತ್ರಾಗಣಗಳು ಈ ಷಟ್ಪದಿ ಉಗಮಕ್ಕೆ** ಹೆಚ್ಚಿನ ಕಾರಣಗಳಾಗಿರಬಹುದು.

2.4.5 ಭೋಗ ಷಟ್ಪದಿ

೧-೨ ಮತ್ತು ೪-೫ ನೇ ಪಾದಗಳಲ್ಲಿ ೩ ಮಾತ್ರೆ ಗಣಗಳು ನಾಲ್ಕು,೩-೬ ನೇ ಪಾದಗಳಲ್ಲಿ ಮೂರು ಮಾತ್ರೆಗಣಗಳು ಆರು ಮತ್ತು ೧ ಗುರು ಬರುತ್ತದೆ.

ಉದಾ -

೩		೩		೩	೩	
ಮೆರೆಯು		ತಿದ್ದ		ಭಾಗ್ಯ	ವೆಲ್ಲ	
೩		೩		೩	೩	
ಹರಿದು		ಹೋಯಿ		ತೆನುತ	ತಿರುಕ	
೩	೩	೩	೩	೩	೩	ಗು
ಮರಳಿ	ನಾಚಿ	ಪೋಗು	ತಿದ್ದ	ಮರುಳ	ನಂತೆ	ಯೇ

2.4.3.5. ಭಾಮಿನೀ ಷಟ್ಪದಿ

೧-೨ ಮತ್ತು ೪-೫ನೇ ಪಾದಗಳಲ್ಲಿ ೩-೪ರ ಹಾಗೆ ಎರಡು ಗಣಗಳು, ೩-೬ನೇ ಪಾದಗಳಲ್ಲಿ ೩-೪ ಹಾಗೆ ಮೂರು ಗಣಗಳು ೧ ಗುರು ಇರುತ್ತದೆ.

ಉದಾ.

೩	೪	೩	೪
ಹಲಗೆ	ಬಳಪ	ಹಿಡಿಯ	ದೊಂದ
೩	೪	೩	೪
ಗ್ಗಳಿಕ	ಪದವಿ	ಟ್ಟುಳುಪ	ದೊಂದ

೩	೪	೩	೪	೩	೪	ಗು
ಗ್ಗಳಿಕ	ಪೆರರೂ	ಢ್ಯವದ	ರೀತಿಯ	ಕೊಳ್ಳ	ದಗ್ಗಳಿ	ಕೆ

ಇದರಂತೆ ಮುಂದಿನ ಮೂರು ಚರಣಗಳು ಇರುತ್ತವೆ.

ಭೀಮಕವಿಯ 'ಬಸವ ಪುರಾಣ' ವೇ (ಕ್ರಿ.ಶ. ೧೩೬೬) ಬಹುಶಃ ಈ ಷಟ್ಪದಿಯಲ್ಲಿ ಅಖಂಡವಾಗಿ ಮೊದಲು ರಚಿತವಾದ ಕಾವ್ಯವಾಗಿರಬೇಕು. ನಂತರ ಕುಮಾರವ್ಯಾಸನಲ್ಲಿ ಇದು ಅತ್ಯಂತ ಸಿದ್ಧಶೈಲಿಯಾಗಿ ಪರಿಣಮಿಸಿತು. ಕುಮಾರವ್ಯಾಸ ಭಾರತ ಪೂರ್ಣವಾಗಿ ಇದೇ ಮಟ್ಟಿನಲ್ಲಿದೆ. 'ಭಾಮಿನೀ' ಎಂದರೆ ಕುಮಾರವ್ಯಾಸನೆಂಬಷ್ಟರಮಟ್ಟಿಗೆ ಈ ಷಟ್ಪದಿ ಜನಪ್ರಿಯತೆಯನ್ನು ಗಳಿಸಿಕೊಂಡಿತು.

2.4.3.4. ಪರಿವರ್ಧಿನಿ ಷಟ್ಪದಿ

೧-೨ ಮತ್ತು ೪-೫ನೇ ಪಾದಗಳಲ್ಲಿ ನಾಲ್ಕು ಮಾತ್ರೆಯ ನಾಲ್ಕು ಗಣಗಳು ೩- ೬ನೇ ಪಾದಗಳಲ್ಲಿ ೪ ಮಾತ್ರೆಯ ಆರು ಗಣಗಳು ೧ ಗುರು ಬರುತ್ತದೆ.

ಉದಾ

೪	೪	೪	೪
ದುರಿತವ	ನಂ ಬೆಳೆ	ವುದಕೆ ಪೊ	ಲಂಕೊಳೆ
೪	೪	೪	೪
ಪರಕಲಿ	ಸಿದನವ	ದೋಹಳ	ಮನ್ನೃಪಂ

೪	೪	೪	೪	೪	೪	ಗು
ಪರಿಕಾ	ಲುದಕ ಮ	ದಕೆ ಕಳ	ವನ್ನ	ಸ್ತ್ರೀಸಂ	ಗಮಗೆ	ಯ್ಮೆ

ಕ್ರಿ.ಶ.ಸು. ೧೪೧೦ ರಲ್ಲಿ ರಚಿತವಾದ ದೇವರಾಜನ ಅಮರ ಶತಕದ ಭಾಷಾಂತರ, ಮಂಗರಸನ (೧೫೦೮) 'ಜಯನೃಪ ಕಾವ್ಯ' ಈ ಮಟ್ಟಿನಲ್ಲಿದೆ. ಈ ಷಟ್ಪದಿ ಮೊದಲು ಕಂಡುಬಂದುದು ಕುಮುದೇಂದು ರಾಮಾಯಣದಲ್ಲಿ. (೧೨೭೫.)

2.4.3.7. ವಾರ್ಧಕ ಷಟ್ಪದಿ

೧-೨, ೪-೫ನೇ ಪಾದಗಳಲ್ಲಿ ೫ ಮಾತ್ರೆಯ ನಾಲ್ಕು ಗಣಗಳು, ೩-೬ನೇ ಪಾದಗಳಲ್ಲಿ ೫ ಮಾತ್ರೆಯ ಆರು ಗಣಗಳು ೧ ಗುರು ಬರುತ್ತದೆ.

೫	೫	೫	೫				= ೨೦
ಎಳ್ಳನಿತು	ನಿನ್ನಮಾತಂ	ಕೇಳ್ವೆ	ನೆಂದೆಣಿಕ				
೫	೫	೫	೫				= ೨೦
ಗೊಳ್ಳದಿರು	ಪರಿಚರ್ಯೆ	ಮನೆ ವಾಳ್ತೆ	ಯೆಂದೆಂಬ				
೫	೫	೫	೫	೫	೫		ಗು= ೩೨
ತಳ್ವಿಯವ	ಳಲ್ಲ ನೀ	ನೆಂದುದಂ	ಮಾಡನೆಂ	ದಾ ಚಂಡಿ	ಚಂಡಿ	ಗೊಳ ಲು	

ರಾಘವಾಂಕ ಈ ಮಟ್ಟನ್ನು ಜನಪ್ರಿಯಗೊಳಿಸಿದ. ನಂತರ ಲಕ್ಷ್ಮೀಶ ಇದನ್ನು ಬಳಸಿ ಕಾವ್ಯವನ್ನು ಸೂರೆಗೊಂಡ. ಭಾಮಿನೀ ಮತ್ತು ವಾರ್ಧಕಗಳು ಲಯದ ದೃಷ್ಟಿಯಿಂದ, ಕಾವ್ಯಗಳ ದೃಷ್ಟಿಯಿಂದ ಬಹಳ ಮಹತ್ವವನ್ನು ಗಳಿಸಿಕೊಂಡಿವೆ.

2.4.3.8. ಉದ್ದಂಡ ಷಟ್ಪದಿ

ಇದರ ಬಗ್ಗೆ ವಿದ್ವಾಂಸರಲ್ಲಿ ಇನ್ನೂ ಚರ್ಚೆ ನಡೆಯುತ್ತಲೇ ಇದೆ. ಇದು ಮೇಲಿನ ಆರು ಷಟ್ಪದಿಗಿಂತ ಸ್ವಲ್ಪ ವಿಭಿನ್ನವಾದ ಗಣ ಸಂಯೋಜನೆಯಿಂದ ಕೂಡಿದೆ. ರಾಘವಾಂಕ 'ವೀರೇಶ ಚರಿತೆ' ಯನ್ನು ಈ ಷಟ್ಪದಿಯಲ್ಲೇ ರಚಿಸಿದ. ಬಸವಾಂಕ ನಂತರದಲ್ಲಿ, 'ಉದ್ಭಟದೇವ ಚರಿತೆ'ಯನ್ನು ರಚಿಸಿದ್ದು ಇದರಲ್ಲೆ. ಈ ಮಟ್ಟಿನ ಬಗ್ಗೆ ಗೊಂದಲ ಉಂಟಾಗಲು ಮುಖ್ಯ ಕಾರಣವೆಂದರೆ ವಾರ್ಧಕಷಟ್ಪದಿಗೆ ಉದ್ದಂಡವೆಂದು ಕೆಲವೆಡೆ ಬಳಸಿದ್ದು, ವಾರ್ಧಕದ ಹಿಂದಿನ ರೂಪವೋ ಅಥವಾ ಒಂದು ಪ್ರಭೇದವೋ ಆಗಿದೆ ಇದು.

೧-೨, ೪-೫ನೇ ಪಾದಗಳಲ್ಲಿ ೪ ಮಾತ್ರೆಯ ಐದು ಗಣಗಳು, ೩-೬ ನೇ ಪಾದಗಳಲ್ಲಿ ೪ ಮಾತ್ರೆಯ ೮ ಗಣಗಳು ಬರುವುದು ಇದರ ಸಾಮಾನ್ಯ ಲಕ್ಷಣ ಕ್ರಮವಾಗಿರುತ್ತದೆ.

ಈ ಷಟ್ಪದಿಯಲ್ಲಿ ಕಾವ್ಯ ಬರೆದ ಶ್ರೇಯಸ್ಸು ರಾಘವಾಂಕನಿಗೆ ಸಲ್ಲುತ್ತದೆ. ಈ ಷಟ್ಪದಿಯಲ್ಲಿ ರಾಗಲಾಪಕ್ಕೆ ಹೆಚ್ಚು ಅವಕಾಶವಿಲ್ಲ. ಈ ಕಾರಣದಿಂದಾಗಿ ರಾಘವಾಂಕ ನಂತರ ಮುಂದಿನ ಕವಿಗಳಾರು ಈ ಛಂದಸ್ಸನ್ನು ಬಳಸಿ ಕಾವ್ಯ ಬರೆಯಲಿಲ್ಲವೆಂದೂ ತೋರುತ್ತದೆ.

2.4.4. ತ್ರಿಪದಿ

ಪಾಂಡಿತ್ಯ ಪ್ರಧಾನ ಕಾವ್ಯಗಳಲ್ಲಿ ಕಂದಪದ್ಯಕ್ಕೆ ಸಂದ ಸ್ಥಾನ ಜನಪದ ಕಾವ್ಯಗಳಲ್ಲಿ 'ತ್ರಿಪದಿ'ಗೆ ಸಲ್ಲುತ್ತದೆ. ತ್ರಿಪದಿ ಅತ್ಯಂತ ಜನಪ್ರಿಯ ಅಚ್ಚಗನ್ನಡ ಛಂದಸ್ಸಿನ ಮಟ್ಟುಗಳಲ್ಲಿ ಒಂದು. 'ತ್ರಿಪದಿ

ಎಂದರೆ ಮೂರು ಪಾದಗಳುಳ್ಳದ್ದು. ಅಂದರೆ ಈ ಮಟ್ಟಿಗೆ ಮೂರು ಸಾಲುಗಳಿವೆ. ತ್ರಿಪದಿಯ ಲಕ್ಷಣವನ್ನು ನಾಗವರ್ಮ, ಜಯಕೀರ್ತಿ ಇಬ್ಬರೂ ಹೇಳಿದ್ದಾರೆ. ನಾಗವರ್ಮ ತ್ರಿಪದಿ ಲಕ್ಷಣದ ಜೊತೆಗೆ ಚಿತ್ರ, ವಿಚಿತ್ರ ಎಂಬ ಇನ್ನೆರಡು ಭೇದಗಳನ್ನು ಹೇಳುತ್ತಾನೆ. ಜಯಕೀರ್ತಿ ಈ ಅಂಶಗಳನ್ನು ಹೇಳುವ ಬದಲು ಮಾತ್ರೆಗಳನ್ನು ಹೇಳಿದ್ದಾನೆ.

ನಾಗವರ್ಮ ಬರೆಯುವ ತ್ರಿಪದಿಯ ಲಕ್ಷಣ ಲಕ್ಷ್ಯಪದ್ಯ ಹೀಗಿದೆ

ಬಿಸರುಹೋದ್ಭವಗಣಂ ರಸದಶಸ್ಥಾನದೊಳ್
ಬಿಸರುಹ ನೇತ್ರ ಗುಣಮೆಬರ್ಕುಟಿದುವು
ಬಿಸರುಹ ನೇತ್ರೇ ತ್ರಿಪದಿಗೆ||

ಈ ಪ್ರಕಾರ ತ್ರಿಪದಿಗೆ ಮೂರು ಪಾದಗಳಿರುತ್ತವೆ. ಬಿಸರುಹ-ತಾವರೆಯಿಂದ ಹುಟ್ಟಿದವನು ಅಂದರೆ ಬ್ರಹ್ಮಗಣ ಆರು ಮತ್ತು ಹತ್ತನೆಯ ಸ್ಥಾನದಲ್ಲಿ ರಸದಶಸ್ಥಾನದೊಳ್. ರಸ-ಷಡ್ರಸ ಆರು ರಸಗಳು. ಹುಳಿ, ಉಪ್ಪು, ಖಾರ, ಕಹಿ, ಸಿಹಿ ಇತ್ಯಾದಿ. ದಶ ಹತ್ತನೆ ಸ್ಥಾನದಲ್ಲಿ, ಬಿಸರುಹನೇತ್ರ-ತಾವರೆಯ ಕಣ್ಣುಳ್ಳವನು ವಿಷ್ಣುಗಣ ಉಳಿದವುಗಳಲ್ಲಿ ಬರುತ್ತವೆ ಎಂದಿದ್ದಾನೆ.

ಮೂರುಪಾದಗಳು, ಮೊದಲನೆಯ ಪಾದದಲ್ಲಿ ನಾಲ್ಕು, ಎರಡನೆಯ ಪಾದದಲ್ಲಿ ನಾಲ್ಕು ಮೂರನೆಯ ಪಾದದಲ್ಲಿ ಮೂರು ಒಟ್ಟು ಹನ್ನೊಂದುಗಣಗಳು, ಆರು ಮತ್ತು ಹತ್ತನೆಯಗಣ ಬ್ರಹ್ಮಗಣವಾಗಿರಬೇಕು. ಆದಿಪ್ರಾಸ ಸಾಮಾನ್ಯವಾಗಿರುತ್ತದೆ. ಒಳ ಪ್ರಾಸವೆಂದರೆ ಆದಿಪ್ರಾಸದಲ್ಲಿ ಒಂದು. ಅಂದರೆ ಪದ್ಯದ ಆರಂಭದ ಮೊದಲು ಎರಡು ಲಘುಗಳ ಮಧ್ಯದ ವರ್ಣ ಅಕ್ಷರವೇ ಮೂರನೇ ಗಣದ ಆರಂಭದಲ್ಲೂ ಬರುವುದಕ್ಕೆ ಹಾಗೆ ಹೇಳಲಾಗುತ್ತದೆ. (ಎಷ್ಟೊ ಜನಪದ ಗೀತೆಗಳಲ್ಲಿ ಇವೆರಡೂ ಇಲ್ಲದ್ದೂ ಕಂಡು ಬರುತ್ತದೆ). ಈಗ ಅದರ ಲಕ್ಷ್ಯವನ್ನು ನೋಡೋಣ.

ವಿ	ವಿ	ವಿ	ವಿ
UUU -	UUU-	UUU-	- U -
ಬಿಸರುಹೋ	ದ್ಭಗಣಂ	ರಸದಶ	ಸ್ಥಾನದೊಳ್

ವಿ	ಬ್ರ	ವಿ	ವಿ
UUUU	-U	UUU-	UUU
ಬಿಸರುಹ	ನೇತ್ರ	ಗಣಮೆಬ	ರ್ಕುಟಿದುವು

ವಿ	ಬ್ರ	ವಿ
UUUU	-U	UUUU
ಬಿಸರುಹ	ನೇತ್ರೆ	ತ್ರಿಪದಿಗೆ

ವಿ ವಿ ವಿ ವಿ
ವಿ ಬ್ರ ವಿ ವಿ
ವಿ ಬ್ರ ವಿ

ನಾಗವರ್ಮನು ಸಾಮಾನ್ಯ ತ್ರಿಪದಿಗೆ 'ಚಿತ್ರಂ' ಎಂದೂ, ಕೊನೆಯಗಣ ರುದ್ರ ವಾಗಿದ್ದರೆ, 'ವಿಚಿತ್ರಂ' ಎಂದೂ ಕರೆಯುತ್ತಾನೆ. ಜನಪದಗೀತೆಗಳಿಂದ ಒಂದೆರಡು ಉದಾಹರಣೆಗಳನ್ನು ಕೊಡಬಹುದು.

ಮೊಗ್ಗಿಲ್ಲವೆಂದು ಮೊಗ್ಗಿಗೆ ಹೋಗದಿರೋ
ಮೊಗ್ಗು ಲಕ್ಕವ್ವ ಗುಡಿ ಮುಂದೆ ಪೂಜಾರಿ
ಮೊಗ್ಗರಳಿ ಬಾಯ ಬಿಡುತವೆ (ಸೋಬಾನೆ ಚಿಕ್ಕಮ್ಮನ ಪದಗಳು)

ತ್ರಿಪದಿಯ ಹಾಡುಗಾರಿಕೆಯಲ್ಲಿ ಒಂದು ಮುಖ್ಯವಾದ ಅಂಶವಿದೆ. ಎರಡನೆಯ ಪಾದದ ಮೂರುಗಣಗಳವರೆಗೆ ಹೇಳಿ ಮತ್ತೊಮ್ಮೆ ಆ ಮೂರು ಗಣಗಳನ್ನು ಆವರ್ತಿಸಿ ನಾಲ್ಕನೆಯ ಗಣವನ್ನು ಹೇಳಬೇಕು. ಅಂದರೆ ಎರಡನೆಯ ಪಾದವನ್ನು ಇನ್ನೊಂದು ಪಾದವಾಗಿ ವಿಸ್ತರಿಸಿದಂತಾಗುತ್ತದೆ. ಬರೆಯುವಾಗ ಮೂರೇ ಪಾದವಾದರೂ ಹಾಡುವಾಗ ನಾಲ್ಕು ಪಾದಗಳಾಗುತ್ತದೆ.

ತ್ರಿಪದಿಯನ್ನು ಜನಪದಗಾಯತ್ರಿ ಎಂದು ಹೇಳುತ್ತಾರೆ. ಇದರಷ್ಟು ಜನಪ್ರಿಯವಾದ ಜನಪದ ಮಟ್ಟು ಮತ್ತೊಂದಿಲ್ಲ. ಇಂದಿಗೂ ಜನಪದರ ಬಾಯಲ್ಲಿ ಜೀವಂತವಾಗಿದೆ. ಇದಕ್ಕೆ ತ್ರಿಪದಿ, ತ್ರಿವುಡೆ, ತ್ರಿಪದಿಕಾ ಇದ್ದಂತೆ ತಿಳಿದು ಬರುತ್ತದೆ. ತ್ರಿಪದಿಯ ಮೂಲ 'ಏಳೆ' ಎಂದೂ ಊಹಿಸುತ್ತಾರೆ. ಎರಡು ಚರಣಗಳಿದ್ದ ಏಳೆ ಮತ್ತೊಂದು ಚರಣವಾಗಿ ಬೆಳೆಯಿತು ಎಂಬ ಮಾತಿಗೆ ಹೆಚ್ಚಿನ ಪುರಾವೆ ಸಿಗುತ್ತದೆ. ಏಳೆಗೂ ತ್ರಿಪದಿಯ ಎರಡು ಚರಣಗಳಿಗೂ ಪೂರ್ಣ ಸಾಮ್ಯವಿದೆ. ಏಳೆ ಕಾವ್ಯದ ವಸ್ತುವನ್ನು ಹೊರುವಾಗ ಶಕ್ತಿಯುಳ್ಳದ್ದಲ್ಲ. ಆ ಮಟ್ಟು, ಚಿಕ್ಕದು. ಅದು ಪ್ರಶ್ನೋತ್ತರಕ್ಕೆ ತೀರ ಸೊಗಸಾದ ಮಟ್ಟು. ಇಂದಿಗೂ ಪ್ರಶ್ನೋತ್ತರಕ್ಕೆ ಜನಪದ ಸಾಹಿತ್ಯದಲ್ಲಿ ಆ ಮಟ್ಟನ್ನು ಬಳಸುವುದು ಬಳಕೆಯಲ್ಲಿದೆ.

ತ್ರಿಪದಿಯ ಲಕ್ಷಣದಲ್ಲಿ ಜಯಕೀರ್ತಿಯ ಮಾತು ಹೆಚ್ಚು ಸಮಂಜಸವಾಗಿ ಕಾಣುತ್ತದೆ. ಮೂಲದಲ್ಲಿ ಎರಡೇ ಚರಣವಾಗಿದ್ದು ದ್ವಿಪದಿಯಾಗಿದ್ದುದು ಈಗನ ತ್ರಿಪದಿ ಅನಂತರ ಬೆಳೆದಿರಲು ಸಾಕು. ತಮಿಳಿನ ಕುಱುಳ್ ಈ ಬಗೆಯ ದ್ವಿಪದಿಗಳಿಂದ ರಚಿವಾಗಿದೆ.

ತ್ರಿಪದಿಯ ಅತಿ ಪ್ರಾಚೀನ ರಚನೆ ಕನ್ನಡ ಶಾಸನದಲ್ಲಿ ದೊರೆಯುತ್ತದೆ. ಕ್ರಿ.ಶ. ೭೦೦ ರ ಬಾದಾಮಿ ಶಾಸನದಲ್ಲಿದ್ದು ಅಂಶಗಣದಲ್ಲೇ ರಚಿತವಾಗಿದೆ. ಅದು ಹೀಗಿದೆ.

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಱನಲ್ಲ

ಈಗ ದೊರೆತ ಶಾಸನಗಳಲೆಲ್ಲ ಈ ತ್ರಿಪದಿ ಅತಿ ಪ್ರಾಚೀನವಾದುದು. ಆ ಮೇಲೆ ದೊರೆತ ಶಾಸನಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಸುಮಾರು ೧೨ನೆಯ ಶತಮಾನದ ಕೊನೆಯಲ್ಲಿ ಮಾತ್ರಾ ತ್ರಿಪದಿಯತ್ತ ಇದರ ಲಯ ತಿರಗಲು ಆರಂಭವಾಗಿರಬೇಕು.

ಸೇಡಿಯಾಪು ಕೃಷ್ಣಭಟ್ಟರು ಇದನ್ನು ದೀರ್ಘವಾಗಿ ಚರ್ಚಿಸಿ ಇಂದಿಗೂ ಅಂಶಗಣಾತ್ಮಕವಾಗಿದೆ ಎಂದು ಸಾಧಿಸುತ್ತಾರೆ. ತ್ರಿಪದಿಯಲ್ಲಿ ಸಾಮಾನ್ಯವಾಗಿ ೫ ಮಾತ್ರೆಗಳ ವಿಷ್ಣುಗಣಗಳೇ ಹೆಚ್ಚಾಗಿ ಬರುತ್ತವೆ. ೪ ಮಾತ್ರೆಯ ರುದ್ರಗಣದಿಂದ ಕೂಡಿದ ತ್ರಿಪದಿಗಳಲ್ಲಿ ಮಾತ್ರೆಗಳ ಲಯ ಎದ್ದು ಕಾಣುತ್ತದೆ. ಈ

ದೃಷ್ಟಿಯಿಂದ ಗಮನಿಸಿದಾಗ ಹಿಂದೆ ಹೇಳಿದಂತೆ ೧೨ನೇ ಶತಮಾನದ ಉತ್ತರಾರ್ಧದಲ್ಲಿಯೇ, ವಚನ ಸಾಹಿತ್ಯ ಉಚ್ಛ್ರಾಯಸ್ಥಿತಿಯಲ್ಲಿರುವಾಗಲೇ ಮಾತ್ರ ತ್ರಿಪದಿಯೂ ರಚನೆಗೊಂಡಂತೆ ಕಾಣುತ್ತದೆ. ಆಡುಭಾಷೆಯ ಸಮೀಪಕ್ಕೆ ಕಾವ್ಯವನ್ನು ತಂದ ವಚನಕಾರರು, ಜನಸಾಮಾನ್ಯರ ಮೆಚ್ಚಿನ ಮಟ್ಟಾದ ಈ ತ್ರಿಪದಿಯನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ.

ಅಕ್ಕಮಹಾದೇವಿ ಯೊಗಾಂಗ ತ್ರಿಪದಿಯಿಂದ ಒಂದು ಉದಾಹರಣೆ:
ಆರು ಮುಖ ಮುತ್ತನ್ನು ನೀರಲ್ಲಿ ಇರಿಸಲಿಕೆ
ನೀರಳಿದು ಮುತ್ತು ಉಳಿಯಿತ್ತು ಆ ಮುತ್ತು
ಸೇರಿಸಿದ ಎನ್ನ ಉದರದಲಿ

ಜನಪದ ಸಾಹಿತ್ಯವನ್ನು ಬಿಟ್ಟರೆ ಕಾವ್ಯಗಳಲ್ಲಿ ಅಂಶಗಣದ ಧಾಟಿಯಂತೆ ಮಾತ್ರಾಗಣದ ಧಾಟಿಯ ತ್ರಿಪದಿಗಳೂ ಪ್ರಾಚೀನ ಕಾವ್ಯಗಳಲ್ಲಿ ಬಳಕೆಯಾಗುತ್ತಿದ್ದು ಕಂಡು ಬರುತ್ತದೆ. ಅಷ್ಟೇ ಅಲ್ಲ, ಹೊಸಗನ್ನಡ ಕಾವ್ಯದಲ್ಲೂ ತ್ರಿಪದಿಗಳು ಬಳಕೆಯಾಗಿವೆ. ಬೇಂದ್ರೆಯವರ 'ಉಯ್ಯಾಲೆ' ಕವನ ಸಂಕಲನದ ಮಳೆ ಎಂಬ ಕವನದಲ್ಲಿ ತ್ರಿಪದಿಯನ್ನು ಬಳಕೆ ಮಾಡಿದ್ದಾರೆ. (ಅವಶ್ಯಕವಾಗಿ ನೀವು ಆ ಕವನಸಂಕಲನವನ್ನು ಒಮ್ಮೆ ಓದಿ.)

2.4.5 ಸಾಂಗತ್ಯ

ವಿದ್ಯಾರ್ಥಿ ಮಿತ್ರರೇ, ಇಲ್ಲಿಯವರೆಗೆ ನಾವು ಕರ್ನಾಟಕ ವಿಷಯ ಜಾತಿಯ ಮಟ್ಟುಗಳಲ್ಲಿ, ಮುಖ್ಯವಾಗಿ ಅಕ್ಕರ, ಚೌಪದಿ, ಏಳೆ, ಷಟ್ಪದಿ, ತ್ರಿಪದಿ ಇವುಗಳ ಬಗ್ಗೆ ವಿವರವಾಗಿ ತಿಳಿದುಕೊಂಡಿದ್ದೇವೆ. ಈಗ ಇನ್ನೊಂದು ಪ್ರಸಿದ್ಧ ದೇಶ್ಯಮಟ್ಟಾದ ಸಾಂಗತ್ಯದ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸೋಣ.

ಸಾಂಗತ್ಯದ ಹೆಸರು ನೀವು ಕೇಳಿದ್ದೀರಿ. ಅಂದ ಮೇಲೆ ಸಾಂಗತ್ಯ ಎಂದರೇನು? 'ಸಾಂಗತ್ಯ' ಎಂದರೆ ಸಂಗತಿಯಿಂದ ಕೂಡಿದ್ದು ಎಂದರ್ಥ. ಸಂಗತಿ ಎಂದರೆ ಮೇಳದೊಡನೆ ಸಾಗುವ ಗತಿ ಎಂದರ್ಥ ಆದ್ದರಿಂದಲೇ ಡಿ. ಎಸ್. ಕರ್ಕಿ ಅವರು ವಾದ್ಯ ವಿಶೇಷದೊಡನೆ ಸಾಗುವ ಹಾಡಾಗಿರುವುದರಿಂದಲೇ ಸಾಂಗತ್ಯವೆಂಬ ಹೆಸರನ್ನು ಪಡೆದಿರಬೇಕು ಎಂಬ ಮಾತನ್ನಾಡಿದ್ದಾರೆ. ಇದು ಒಪ್ಪತಕ್ಕ ಮಾತೇ. ಸಾಂಗತ್ಯ ಕನ್ನಡ ಮಟ್ಟುಗಳಲ್ಲೇ ಅನ್ವರ್ಥಗಣವನ್ನು ಪಡೆದುಕೊಂಡ ಮಟ್ಟು.

ತ್ರಿಪದಿಗೆ ಇರುವಷ್ಟು ಪ್ರಾಚೀನತೆ ಇದಕ್ಕೆ ಇಲ್ಲ. ತ್ರಿಪದಿಯ ಇತಿಹಾಸ ಬಾದಾಮಿ (ಕ್ರಿ. ಶ. ೭೦೦) ಶಾಸನದಿಂದಲೇ ಪ್ರಾರಂಭವಾಗುತ್ತದೆ. ಆದರೆ ಸಾಂಗತ್ಯ ಪ್ರಕಾರ ೧೨ ಶತಮಾನದಿಂದೀಚೆಗೆ ಪ್ರಯೋಗಕ್ಕೆ ಒಳಪಟ್ಟಿರುವಂತೆ ಕಾಣುತ್ತದೆ. ಆದ್ದರಿಂದಲೇ ನಾಗವರ್ಮ ಸಾಂಗತ್ಯದ ಬಗ್ಗೆ ಪ್ರಸ್ತಾಪಿಸಿಲ್ಲ. ಜಯಕೀರ್ತಿಯೂ ಹೇಳಿಲ್ಲ. ಹಾಗಾಗಿ ತ್ರಿಪದಿಯಿಂದಲೇ ಸಾಂಗತ್ಯ ಹುಟ್ಟಿರಬಹುದೆಂದು ತಿಳಿಯುವುದಕ್ಕೆ ಆಸ್ಪದವಿದೆ. ಸಾಂಗತ್ಯ ಹಾಡಲು ಸೊಗಸಾದ ಮಟ್ಟು. ಜನಪದ ಸಾಹಿತ್ಯದಲ್ಲಿ ಇದು ಕಂಡು ಬರುತ್ತದೆ ಎನ್ನಬಹುದಾದರೂ ತ್ರಿಪದಿಯಿಂದಲೇ ಸಾಂಗತ್ಯ ಹುಟ್ಟಿದೆ ಎಂದು ಖಡಾ ಖಂಡಿತವಾಗಿ ಹೇಳಲಿಕ್ಕೆ ಸಾಧ್ಯವಿಲ್ಲ. ತ್ರಿಪದಿಯಲ್ಲಿ ೬ ಮತ್ತು ೧೦ನೆಯ ಸ್ಥಾನದಲ್ಲಿ ಬ್ರಹ್ಮಗಣ ಬರುವುದರಿಂದ ಬರುವ ನಾದಲಯಕ್ಕೂ ಇಲ್ಲಿ ೭ ಮತ್ತು ೧೪ ಗಣ ಬ್ರಹ್ಮಗಣವಾಗುವುದರಿಂದ ಇಲ್ಲಿಯ ಲಯಕ್ಕೂ ಅಂತರ

ಬಹಳವಾಗುತ್ತದೆ. ಅಲ್ಲದೆ. ತ್ರಿಪದಿಗೂ ಸಾಂಗತ್ಯಕ್ಕೂ ಹೊರ ಮೈಯಲ್ಲಿ ಸೌಮ್ಯ ಕಂಡುಬಂದರೂ ಹಾಡುವಾಗ ಲಯ ಮಾಧುರ್ಯ ಭಿನ್ನವಾಗುತ್ತದೆ. ಆದ್ದರಿಂದಲೇ ತ್ರಿಪದಿಯಿಂದಲೇ ಸಾಂಗತ್ಯ ಹುಟ್ಟಿತೆಂದು ಹೇಳುವುದಕ್ಕೆ ಬರುವುದಿಲ್ಲ.

2.4.5.0 ಸಾಂಗತ್ಯದ ಲಕ್ಷಣ

ನಾಗವರ್ಮ ಜಯಕೀರ್ತಿಗಳಿಬ್ಬರೂ ಸಾಂಗತ್ಯದ ಲಕ್ಷಣ ಹೇಳಿಲ್ಲ. ಆದರೆ ಸಾಂಗತ್ಯದ ಪದ್ಯ ಈ ಲಕ್ಷಣದಿಂದ ಕೂಡಿರುತ್ತದೆ.

೧. ಸಾಂಗತ್ಯದಲ್ಲಿ ನಾಲ್ಕು ಪಾದಗಳಿರುತ್ತವೆ.

೨. ೧ ಮತ್ತು ೩ನೆಯ ಪಾದದಲ್ಲಿ ೪+೪ ವಿಷ್ಣುಗಣಗಳಿರುತ್ತವೆ.

೩. ೨ ಮತ್ತು ೪ ನೆಯ ಪಾದಲ್ಲಿ ೨ ವಿಷ್ಣು ೧ ಬ್ರಹ್ಮದ ಹಾಗೆ ೩+೩ ಗಣಗಳಿರುತ್ತವೆ.

೪. ಸಾಂಗತ್ಯದಲ್ಲಿ ಒಟ್ಟು ೧೬ ಗಣಗಳನ್ನು ಹೊಂದಿರುತ್ತದೆ. ಅದರಲ್ಲಿ ೭ ಮತ್ತು ೧೪ ನೇಯ ಗಣ ಬ್ರಹ್ಮಗಣವಾಗಿರುತ್ತದೆ. ಉಳಿದೆಲ್ಲ ಗಣಗಳು ವಿಷ್ಣುಗಣಗಳಾಗಿರುತ್ತವೆ.

ಇದರ ಗಣವಿನ್ಯಾಸ ಹೀಗಿರುತ್ತದೆ

ವಿ+ವಿ+ವಿ+ವಿ

ವಿ+ವಿ+ಬ್ರ

ವಿ+ವಿ+ ವಿ+ವಿ

ವಿ+ವಿ+ಬ್ರ

ಇದನ್ನು ಒಂದು ಉದಾಹರಣೆಯ ಪದ್ಯದ ಮೂಲಕ **ಈ ಅಂಶವನ್ನು ಸ್ಪಷ್ಟಪಡಿಸಿಕೊಳ್ಳಬಹುದು.**

ವಿ UUU - ಗರುಡ ಮಂ	ವಿ UU UU ತ್ರಕ ವಿಷ	ವಿ UU-U ವಿಳಿವಂತೆ	ವಿ UUU - ಭರತ ಭೂ	ವಿ+ವಿ+ವಿ+ವಿ
UUU - ವರನ ವಾ	UU - U ಕ್ಯವ ಕೇಳ	- U ಲಾಗಿ		ವಿ+ವಿ+ಬ್ರ
UUUU ಜರಿಜರಿ	- UU ದಂಗಜ	- UU ಗೆತ್ತಿದ	- - - ಕೋಪ ಪೈ	ವಿ+ವಿ+ವಿ+ವಿ
UUUU ಸರಿಸಿತು	UUU ಹೃದಯ	- - U ತಂಪಾಯ್ತು*		ವಿ+ವಿ+ಬ್ರ

ಇಲ್ಲಿ ಪ್ರಸ್ತಾರ ಹಾಕಿ ಗಣವಿಂಗಡಣೆ ಮಾಡಿರುವುದನ್ನು ನೀವು ನೋಡಿದರೆ ಗೊತ್ತಾಗುತ್ತದೆ. ೭ ಮತ್ತು ೧೪ನೇ ಗಣ ಬ್ರಹ್ಮಗಣವಾಗಿದೆ. (*ಈ ಚಿಹ್ನೆ ಇರುವ ಗಣ) ಉಳಿದೆಲ್ಲ ಗಣಗಳು ವಿಷ್ಣುಗಣಗಳಾಗಿವೆ.

(ಇದೇ ರೀತಿ ಕೆಲವು ಪದ್ಯಗಳನ್ನು ಆಯ್ದುಕೊಂಡು ಪ್ರಸ್ತಾರ ಹಾಕಿ ಗಣ ವಿಂಗಡಣೆ ಮಾಡುವುದನ್ನು ಅಭ್ಯಾಸಮಾಡಿ.)

ಸಾಂಗತ್ಯದಲ್ಲಿ ರಚಿತವಾದ ಮೊದಲ ಕೃತಿ ಶಿಶುಮಾಯಣನ (೧೨೩೨) 'ತ್ರಿಪದದಹನ ಸಾಂಗತ್ಯ'ವೆಂದು ಕೆಲವರು ಭಾವಿಸಿದ್ದರೆ, ಇನ್ನು ಕೆಲವರು ದೇಪರಾಜನ (೧೪೧೦) 'ಸೊಬಗಿನ ಸೊನೆ' ಎಂದೂ ತಿಳಿದಿರುವುದುಂಟು . ಆದರೆ ಸಂಶೋದನೆಯಿಂದ ದೇಪರಾಜನ 'ಸೊಬಗಿನ ಸೊನೆ' ಸಾಂಗತ್ಯ ಮೊದಲ ಕೃತಿ ಎಂದು ನಿರ್ಧಾರವಾಗಿದೆ. ಇವುಗಳ ಜೊತೆಗೆ ಸಾಂಗತ್ಯದಲ್ಲಿ ರಚಿತವಾಗಿರುವ ಪ್ರಮುಖ ಕೃತಿಗಳಲ್ಲಿ ಕಲ್ಯಾಣಕೀರ್ತಿಯ (೧೪೩೯) 'ಕರ್ಮಕಥೆ' ನಂಜುಂಡಕವಿಯ (೧೫೨೫) 'ರಾಮನಾಥ ಚರಿತ್ರೆ' (ಸಾಂಗತ್ಯದಲ್ಲಿ ಗಚಿತವಾದ ಮೊತ್ತಮೊದಲ ಐತಿಹಾಸಿಕ ಕಾವ್ಯ). ಸಂಚಿಹೊನ್ನಮ್ಮನ (ಸು. ೧೬೮೦) 'ಹದಿಬದಿಯೆ ಧರ್ಮ' ರತ್ನಾಕರವರ್ಣಿಯ 'ಭರತೇಶವೈಭವ' ಮುಂತಾದವನ್ನು ಹೆಸರಿಬಹುದು. ಹೊಸಗನ್ನಡದಲ್ಲಿ ಸಾಹಿತ್ಯದಲ್ಲಿ ಸಾಂಗತ್ಯದಲ್ಲಿ ಪದ್ಯರಚನೆ ಮಾಡಿದವರಲ್ಲಿ ಬೇಂದ್ರೆ, ಪು.ತಿ.ನ, ಎಸ್.ವಿ. ಪರಮೇಶ್ವರಭಟ್ಟ, ಮೊದಲಾದವರನ್ನು ಹೆಸರಿಸಬಹುದಾಗಿದೆ.

2.4.6. ಸ್ವಪರೀಕ್ಷಾ ಪ್ರಶ್ನೆಗಳು

೧. ಸಂಸ್ಕತ ಛಂದಸ್ಸಿನಲ್ಲಿ ಎಷ್ಟು ವಿಧ? ಹೆಸರಿಸಿ.

....

....

೨ ಲೌಕಿಕ ಈ ಛಂದಸ್ಸಿನ ವೃತ್ತಗಳಲ್ಲಿ ಎಷ್ಟು ಬಗೆ? ಹೆಸರಿಸಿ.

....

....

೩. ಖ್ಯಾತ ಕರ್ಣಾಟಕ ವೃತ್ತಗಳು ಯಾವುವು? ತಿಳಿಸಿ.

....

....

೪. ಉತ್ಪಲಮಾಲೆಯ ಲಕ್ಷಣವೇನು?

....

....

೫. ನಜಭಜಭಂಜರಂ ಎಂದು ಬಗೆಗೊಳ್ಳುತ್ತಿರೆ ಯಾವ ವೃತ್ತವಾಗುತ್ತದೆ?

....

....

೬. ಸ್ರಗ್ಧರಾ ಮಹಾಸ್ರಗ್ಧರಾ ವೃತ್ತಗಳ ಲಕ್ಷಣ ಸೂತ್ರವನ್ನು ತಿಳಿಸಿ?

....

....

೭. ಲಘುದ್ವಂದಂ ಗುರುದ್ವಂದಂಮಾಗಿರೆ ಅದು ಯಾವ ವೃತ್ತವೆನಿಸುತ್ತದೆ?

....

....

೮. 'ಅಲಾಕ್ಷಾಗೃಹದಾಹಮೊಂದೆ ವಿಷಸಂಯುಕ್ತಾನ್ನಮಂತೊಂದೆ ಪಾ' ಇದಕ್ಕೆ ಪ್ರಸ್ತಾರ ಹಾಕಿ ಗಣವಿಂಗಡಿಸಿ ಯಾವ ವೃತ್ತವೆಂದು ಕಂಡುಹಿಡಿಯಿರಿ.

....

....

೯. ಕಂದ ಪದ್ಯದಲ್ಲಿ ಎಷ್ಟು ಮಾತ್ರೆಗಳು ಅಥವಾ ಗಣಗಳು ಇರುತ್ತವೆ?

....

....

೧೦.ಕಂದಪದ್ಯದ ವಿಷಮಸ್ಥಾನದಲ್ಲಿ ಯಾವ ಗಣ ಬರಬಾರದು?

....

....

೧೧. ಕಂದಪದ್ಯದ ಲಕ್ಷಣವನ್ನು ತಿಳಿಸಿ.

....

....

೧೨. ರಗಳೆಯ ಲಕ್ಷಣವನ್ನು ತಿಳಿಸಿ.

....

....

೧೩. ರಗಳೆಯ ಪ್ರಭೇದಗಳು ಯಾವುವು? ತಿಳಿಸಿ.

....

....

೧೪. ಉತ್ಸಾಹರಗಳೆ ಎಂದರೇನು? ತಿಳಿಸಿ.

....

....

೧೫. ಮಂದಾನಿಲ ರಗಳೆಯ ಲಕ್ಷಣವನ್ನು ನಿರೂಪಿಸಿ.

....

....

೧೬. ಲಲಿತರಗಳೆ ಲಕ್ಷಣಕ್ರಮನ್ನು ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿ.

....

....

೧೭. ನಾಗವರ್ಮ ಹೇಳಿರುವ ಕರ್ಣಾಟಕ ವಿಷಯ ಜಾತಿ ವೃತ್ತಗಳು ಎಷ್ಟು? ಯಾವುವು ಹೆಸರಿಸಿ.

....

....

೧೮. ಅಕ್ಕರದಲ್ಲಿ ಎಷ್ಟು ಬಗೆಗಳು? ತಿಳಿಸಿ.

....

....

೧೯. ಪಿರಿಯಕ್ಕರದ ಲಕ್ಷಣವೇನು ತಿಳಿಸಿ.

....

....

೨೦ ಚೌಪದಿಯ ಬಗ್ಗೆ ಟಿಪ್ಪಣಿ ಬರೆಯಿರಿ.

....

....

೨೧. ಏಳೆಯ ಲಕ್ಷಣ ತಿಳಿಸಿ.

....

....

೨೨. ಅಂಶಷಟ್ಪದಿ ಎಂದರೇನು? ವಿವರಿಸಿ.

....

....

೨೩. ಭಾಮಿನೀ ಷಟ್ಪದಿಯ ಲಕ್ಷಣವೇನು? ತಿಳಿಸಿ.

....

....

೨೪. ಶರಷಟ್ಪದಿಯ ಬಗ್ಗೆ ಟಿಪ್ಪಣಿ ಬರೆಯಿರಿ.

....

....

೨೫. ತ್ರಿಪದಿ ಎಂದರೇನು? ಲಕ್ಷಣ ತಿಳಿಸಿ.

....

....

೨೬. ಸಾಂಗತ್ಯದ ಲಕ್ಷಣ ತಿಳಿಸಿ.

....

....

2.4.7. ಸಾರಾಂಶ

ವರ್ಣಗಳಿಂದ ಅಥವಾ ಅಕ್ಷರಗಳಿಂದ ಕೂಡಿ ಆದ ಗಣಕ್ಕೆ ವರ್ಣಗಣ ಅಥವಾ ಅಕ್ಷರಗಣ ಎಂದು ಕರೆಯುತ್ತಾರೆ. ಇಲ್ಲಿನ ಗಣವಿನ್ಯಾಸದಲ್ಲಿ ಎಂಟು ಬಗೆ. ಮನಭಯಜರಸತ ಇದು ಈ ಗಣಗಳ ಸಂಜ್ಞೆಗಳು. 'ಯಮಾತಾರಾಜಭಾನಸಲಗಂ' ಈ ಸೂತ್ರದ ಮೂಲಕ ಪ್ರತಿಯೊಂದು ವೃತ್ತದ ಗಣವಿನ್ಯಾಸ ಲಕ್ಷಣವನ್ನು ತಿಳಿಯಬಹುದಾಗಿದೆ. ಉಕ್ತೆಯಿಂದ ಉತ್ಕೃತಿಯವರೆಗಿನ ಇಪ್ಪತ್ತಾರು ಬಗೆಯ ವೃತ್ತಗಳನ್ನು ನಮ್ಮ ಕವಿಗಳು ಸಂಸ್ಕೃತದಿಂದ ಸ್ವೀಕರಿಸಿದ್ದಾರೆ. ಅವುಗಳಲ್ಲಿ ವಿಶೇಷವಾಗಿ ಆರು ವೃತ್ತಗಳನ್ನು ಹೆಚ್ಚಾಗಿ ಬಳಕೆ ಮಾಡಿದ್ದಾರೆ. ಇವನ್ನು 'ನಾಗವರ್ಮನು ಖ್ಯಾತ ಕರ್ಣಾಟಕಗಳು' ಎಂದು ಕರೆದಿದ್ದಾನೆ. ಚಂಪಕಮಾಲೆ, ಉತ್ಪಲಮಾಲೆ , ಶಾರ್ದೂಲ ವಿಕ್ರೀಡಿತ, ಮತ್ತೇಭ ವಿಕ್ರೀಡಿತ, ಸ್ರಗ್ಧರಾ ವೃತ್ತ, ಮಹಾಸ್ರಗ್ಧರಾ ವೃತ್ತ ಇವೇ ಆ ಆರು ವೃತ್ತಗಳು. ಇವು ಖ್ಯಾತ ಕರ್ಣಾಟಕಗಳೆಂದು ಪ್ರಸಿದ್ಧಿಯಾಗಿವೆ. ಇವು ವರ್ಣವೃತ್ತಗಳಾದರೆ , ಕಂದ ಮತ್ತು ರಗಳೆಗಳು ಮಾತ್ರಾವೃತ್ತಗಳು. ಕಂದದ ಮೇಲೆ ಆರ್ಯಗೀತೆ ಮತ್ತು ಸ್ಕಂಧಕ ಇವೆರಡರ ಪ್ರಭಾವು ಆಗಿದೆ. ರಗಳೆಯ ಪ್ರಾಕೃತದ ಪಜ್ಝಟಿಕಾದಿಂದ ಕನ್ನಡವಲ್ಲಿ

ರೂಪುಗೊಂಡಿರುವ ಛಂದೋಪ್ರಕಾರ. ಉತ್ಸಾಹ ರಗಳೆ, ಮಂದಾನಿಲ ರಗಳೆ, ಲಲಿತ ರಗಳೆ ಇವು ರಗಳೆಯ ಪ್ರಭೇದಗಳು. ಲಲಿತ ರಗಳೆಯೇ ತನ್ನ ಆದಿ ಮತ್ತು ಅಂತ್ಯ ಪ್ರಾಸವನ್ನು ಕಳಚಿಕೊಂಡು ಹೊಸಗನ್ನಡ ಛಂದಸ್ಸಿನಲ್ಲಿ 'ಸರಳರಗಳೆ' ಎಂಬ ಹೆಸರಿನಿಂದ ಪ್ರಚಲಿತದಲ್ಲಿದೆ.

ವರ್ಣವೃತ್ತಗಳು ವರ್ಣಗಣಾತ್ಮಕವಾದರೆ, ಮಾತ್ರಾ ವೃತ್ತಗಳೆಲ್ಲವೂ ಮಾತ್ರಾಗಣಾತ್ಮಕವಾದವು. ಹಾಗಯೇ ಅಂಶವೃತ್ತಗಳೆಲ್ಲವೂ ಅಂಶಗಣತ್ಮಕವಾದವುಗಳು. ವರ್ಣವೃತ್ತಗಳು ಸಂಸ್ಕೃತದಿಂದ ಕನ್ನಡಕ್ಕೆ ಬಂದಿದ್ದರೆ ಮಾತ್ರಾವೃತ್ತಗಳು ಸಂಸ್ಕೃತ ಪ್ರಾಕೃತ ಭಾಷೆಗಳ ಪ್ರಭಾವದಿಂದ ಕನ್ನಡದಲ್ಲಿ ರೂಪುಗೊಂಡವಾಗಿವೆ. ಆದರೆ ಅಂಶವತ್ತಗಳೆಲ್ಲವೂ ಶುದ್ಧದೇಶ್ಯ ಛಂದೋಪ್ರಕಾರಕ್ಕೆ ಸೇರಿದವುಗಳಾಗಿವೆ. ನಾಗವರ್ಮ ತನ್ನ ಛಂದೋಂಬುಧಿಯಲ್ಲಿ ಇವನ್ನು 'ಕರ್ಣಾಟಕ ವಿಷಯ ಜಾತಿ ಛಂದಸ್ಸು' ಎಂದು ಹೆಸರಿಸಿ ಅವುಗಳ ಲಕ್ಷಣ ಲಕ್ಷ್ಯ ವಿಚಾರಗಳನ್ನು ಪ್ರಸ್ತಾಪಿಸಿದ್ದಾನೆ. ಅಚ್ಚಗನ್ನಡ ಮಟ್ಟುಗಳೆಲ್ಲವೂ ಅಂಶಗಣಾತ್ಮಕವಾದವಾಗಿದ್ದರೂ ಕಾಲಕ್ರಮೇಣ ಅವು ಮಾತ್ರಾಗಣಾತ್ಮಕವಾಗಿ ಪರಿವರ್ತನೆ ಹೊಂದಿರುವುದು ಕಂಡುಬರುತ್ತದೆ. ಇದಕ್ಕೆ ತ್ರಿಪದಿ ಷಟ್ಪದಿ ಪ್ರಕಾರಗವಳೇ ಉತ್ತಮ ನಿದರ್ಶನ. ನಾಗವರ್ಮನ ಕಾಲಕ್ಕೆ ಮಾತ್ರಾಷಟ್ಪದಿಗಳ ಉಲ್ಲೇಖ ಕಂಡುಬರುವುದಿಲ್ಲ. ಹಾಗೆಯೆ ನಾಗವರ್ಮನಲ್ಲಿ ಸಾಂಗತ್ಯದ ಪ್ರಸ್ತಾಪವೂ ಇಲ್ಲ. ಒಟ್ಟಿನಲ್ಲಿ ತ್ರಿಪದಿ, ಷಟ್ಪದಿ ಸಾಂಗತ್ಯ ಪ್ರಕಾರಗಳು ಅತ್ಯಂತ ಜನಪ್ರಿಯ ಕನ್ನಡ ಮಟ್ಟುಗಳೆನಿಸಿವೆ. ತ್ರಿಪದಿ ಜನಪದ ಸಾಹಿತ್ಯದಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ತ್ರಿಪದಿಯೇ 'ಕನ್ನಡ ಛಂದಸ್ಸಿನ ತಲಕಾವೇರಿ' ಅಥವಾ 'ಕನ್ನಡ ಛಂದಸ್ಸಿನ ತಾಯಿಬೇರು' ಎಂಬ ಅಭಿಪ್ರಾಯವಿದೆ. ಅಷ್ಟರಮಟ್ಟಿಗೆ ತ್ರಿಪದಿಯ ಜನಪ್ರಿಯತೆಯನ್ನು ಮನಗಾಣಬಹುದು.

2.4.8 ಸ್ವಪರೀಕ್ಷೆ ಪ್ರಶ್ನೆಗಳಿಗೆ ಉತ್ತರಗಳು

೧. ಎರಡು ವಿಧ, ವೈದಿಕ ಛಂದಸ್ಸು ಲೌಕಿಕ ಛಂದಸ್ಸು ಎಂದು.

೨. ನಾಲ್ಕು ಬಗೆ, ಸಮ ವೃತ್ತಗಳು, ಅರ್ಧಸಮವೃತ್ತಗಳು, ವಿಷಮವೃತ್ತಗಳು, ದಂಡಕಗಳು ಎಂಬುದಾಗಿ.

೩. ಉತ್ಪಲಮಾಲೆ, ಚಂಪಕಮಾಲೆ, ಶಾರ್ದೂಲ ವಿಕ್ರೀಡಿತ, ಮತ್ತೇಭ ವಿಕ್ರೀಡಿತ, ಸ್ರಗ್ಧರಾ ವೃತ್ತ, ಮಹಾಸ್ರಗ್ಧರಾ ವೃತ್ತ ಇವೇ ಖ್ಯಾತ ಕರ್ಣಾಟಕಗಳು.

೪. ಉತ್ಪಲಮಾಲೆಯಪ್ಪುದು ಭರಂನಭರಲಗಂ ನೆಗೆಟ್ಟಿರಲ್.

೫. ಚಂಪಕ ಮಾಲೆ ವೃತ್ತದ ಲಕ್ಷಣವಿದು.

೬. ತೋಱಿಲ್ ಮರಂಭನಂ ಮುಯಗಣಮುದೆ ಸ್ರಗ್ಧರಾ ವೃತ್ತ ಮಕ್ಕುಂ.

ಸತತಂನಂಸಂರರಗಂ ನೆರೆದೆಸೆಯೆ ಮಹಾಸ್ರಗ್ಧರಾ ವೃತ್ತಮಕ್ಕುಂ ಹೀಗೆ ಇವುಗಳ ಲಕ್ಷಣ ಸೂತ್ರವಿದೆ.

೭. ಲಘುದ್ವಂದ್ವಂ ಗುರುದ್ವಂದ್ವವಾಗಿರೆ ಮತ್ತೇಭ ವಿಕ್ರೀಡಿತ ವೃತ್ತವಾಗುತ್ತದೆ.

೮. ಈ ಪದ್ಯಕ್ಕೆ ನೀವೇ ಪ್ರಸ್ತಾರ ಹಾಕಿ ಛಂದಸ್ಸನ್ನು ತಿಳಿದುಕೊಳ್ಳಿ.

೯. ಕಂದಪದ್ಯದಲ್ಲಿ ೬೪ ಮಾತ್ರೆಗಳು, ಅಥವಾ ೧೬ ಗಣಗಳು (೧೬X೪=೬೪)

೧೦. ಕಂದಪದ್ಯದ ವಿಷಮಸ್ಥಾನದಲ್ಲಿ ಜಗಣ ಬರಬಾರದು.

೧೧. ಪ್ರಶ್ನೆ ೧೧ ಮತ್ತು ಪ್ರಶ್ನೆ ೧೨ ಕ್ಕೆ ನೀವೇ ಘಟಕದ ಅಧ್ಯಯನದ ಹಿನ್ನೆಲೆಯಲ್ಲಿ ಉತ್ತರ ಬರೆಯಿರಿ.

೧೨. ಉತ್ಸಾಹರಗಳೆ, ಮಂದಾನಿಲರಗಳೆ, ಲಲಿತರಗಳೆ.

೧೩. ಪಾದವೊಂದರಲ್ಲಿ ೩ ಮಾತ್ರೆಯ ೪ ಗಣಗಳು ಒಟ್ಟು ೧೨ ಮಾತ್ರೆಗಳು ಬರುವುದು ಉತ್ಸಾಹರಗಳೆಯ ಮಾಲೆಯ ಸಾಮಾನ್ಯ ಲಕ್ಷಣಕ್ರಮ.

೧೪. ಈ ಪ್ರಶ್ನೆ ೧೫ ಮತ್ತು ೧೬ಕ್ಕೆ ನೀವೇ ಓದಿ ಉತ್ತರ ಬರೆಯಿರಿ.

೧೭. ನಾಗವರ್ಮ ಹೇಳಿರುವ ಕರ್ಣಾಟಕ ವಿಷಯ ಜಾತಿ ವೃತ್ತಗಳು ಹತ್ತು. ಅವುಗಳೆಂದರೆ, ೧. ಮದನವತಿ, ೨. ಅಕ್ಕರ, ೩. ಚೌಪದಿ, ೪. ಗೀತಿಕೆ, ೫. ಏಳೆ, ೬. ತ್ರಿಪದಿ, ೭. ಉತ್ಸಾಹ, ೮. ಷಟ್ಪದಿ, ೯. ಅಕ್ಕರಿಕೆ, ೧೦. ಛಂದೋವತಂಸ

೧೮. ಅಕ್ಕರದಲ್ಲಿ ಐದು ಬಗೆಗಳು ೧. ಪಿರಿಯಕ್ಕರ ೨. ದೊರೆಯಕ್ಕರ ೩. ನಡುವಣಕ್ಕರ ೪. ಎಡೆಯಕ್ಕರ ೫. ಕಿರಿಯಕ್ಕರ.

೧೯. ಪಿರಿಯಕ್ಕರ ನಾಲ್ಕು ಪಾದಗಳನ್ನುಳ್ಳದ್ದು.

೧. ಪ್ರತಿಪಾದದಲ್ಲಿ ೭ ಗಣಗಳಿರುತ್ತವೆ.

೩. ೧ ಬ್ರಹ್ಮಗಣ +೫ ವಿಷ್ಣುಗಣ + ೧ ರುದ್ರಗಣ ಹೀಗಿರುತ್ತದೆ.

ಬ್ರ +ವಿ +ವಿ+ ವಿ +ವಿ +ವಿ +ರು ಇದು ಅದರ ಗಣವಿನ್ಯಾಸ.

೪. ಕೆಲವೊಮ್ಮೆ ಬ್ರಹ್ಮಗಣದ ಸ್ಥಾನದಲ್ಲಿ ವಿಷ್ಣುಗಣ, ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮ ರುದ್ರಗಣಗಳೂ ಬರುವ ಸಾಧ್ಯತೆಯಿರುತ್ತದೆ.

೨೦. ಚೌಪದಿ ಪಾರಾಂತರ ಗೊಂದಲವಿಲ್ಲದ ಒಂದು ಅಚ್ಚಗನ್ನಡ ಮಟ್ಟು. ನಾಗವರ್ಮ ಇದರ ಲಕ್ಷಣವನ್ನು ತಿಳಿಸಿದ್ದಾನೆ. ಅದರಂತೆ ಚೌಪದಿಗೆ ನಾಲ್ಕು ಪಾದಗಳು. ಪ್ರತಿ ಪಾದದಲ್ಲಿ ೧ ವಿಷ್ಣು ಗಣ + ೧ ರುದ್ರಗಣ ಬರುತ್ತದೆ. ಇದಕ್ಕೆ ಚಂದ್ರರಾಜನ 'ಮದನ ತಿಲಕ' ದಲ್ಲಿ ಬರುವ ಪದ್ಯ ಉತ್ತಮ ನಿದರ್ಶನ. (ಪದ್ಯ ನೋಡಿ ಬರೆದು ಪ್ರಸ್ತಾರ ಹಾಕಿ.) ಆದರೆ ಚೌಪದಿಯಲ್ಲಿ ಯಾವುದೇ ಕಾವ್ಯಗಳು ರಚಿತವಾಗಿಲ್ಲ.

೨೧. 'ಏಳೆ' ಅಚ್ಚಗನ್ನಡ ಮಟ್ಟಿಗೆ ಸೇರಿದ ಛಂದೋಪ್ರಕಾರ. ಇದರಲ್ಲಿ ಎರಡು ಪಾದಗಳಿರುತ್ತವೆ. ಮೊದಲ ಪಾದದಲ್ಲಿ ನಾಲ್ಕು ವಿಷ್ಣುಗಣಗಳು, ಎರಡನೆಯ ಪಾದದಲ್ಲಿ ಎರಡು ವಿಷ್ಣುಗಣ ಒಂದು ಬ್ರಹ್ಮಗಣ ಬರುತ್ತದೆ. (ಪದ್ಯವನ್ನು ಆಯ್ದು ಪ್ರಸ್ತಾರ ಹಾಕಿ ಬರೆಯಬೇಕು.) ಏಳೆ ಪ್ರಾಚೀನ ಕಾವ್ಯಗಳಲ್ಲಿ ಕೃತಿಚಿತ್ತಾಗಿ ಬಳಕೆಗೊಂಡಿದೆ. ಇದರಲ್ಲಿ ಯಾವುದೇ ಒಂದು ಕೃತಿಯೂ ಸಂಪೂರ್ಣವಾಗಿ ರಚನೆಗೊಂಡಿಲ್ಲ. ಆದರೆ ಆಧುನಿಕ ಕನ್ನಡ ಕಾವ್ಯದಲ್ಲಿ ಏಳೆಯಲ್ಲಿ ಪದ್ಯಗಳು ರಚನೆಗೊಂಡಿವೆ. ಎಸ್. ವಿ. ಪರಮೇಶ್ವರ ಭಟ್ಟರ 'ತುಂಬೆ ಹೂ' ಕಾವ್ಯ ಸಂಕಲನ ಏಳೆಯಲ್ಲಿಯೇ ಇದೆ ಎಂಬುದು ಗಮನಾರ್ಹ ಸಂಗತಿ.

೨೨. ಇದೆ ರೀತಿ ಪ್ರಶ್ನೆ ೨೨ ರಿಂದ ೨೯ ರವರೆಗಿನ ಪ್ರಶ್ನೆಗಳಿಗೆ ಓದಿಕೊಂಡು ಉತ್ತರವನ್ನು ನೀವೇ ಬರೆಯಿರಿ.

2.4.9. ಪರಾಮರ್ಶನ ಗ್ರಂಥಗಳು

೧. ಕನ್ನಡ ಕೈ ಪಿಡಿ : ಪ್ರಕಾಶಕರು
ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

೨. ಸಮಾಲೋಕನ : ತಿ.ನಂ. ಶ್ರೀಕಂಠಯ್ಯ

೩. ಕನ್ನಡ ಛಂದಃಸ್ವರೂಪ : ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ

೪. ಕನ್ನಡ ಛಂದೋವಿಕಾಸ : ಡಿ. ಎಸ್. ಕರ್ಕಿ

೫. ಕನ್ನಡ ಛಂದಸ್ಸಿನ ಚರಿತ್ರೆ ಸಂಪುಟ ೧ ಮತ್ತು ಸಂಪುಟ ೨ : ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

೬. ಕನ್ನಡ ಛಂದಃಸಂಪುಟ : ಡಾ. ಎಲ್. ಬಸವರಾಜು

೭. ಕನ್ನಡ ಛಂದಸ್ಸಶಾಸ್ತ್ರ ಪರಿಚಯ : ಬಿ.ಎನ್. ನಾಗರಾಜಭಟ್

೮. ಕನ್ನಡ ಛಂದಸ್ಸಿನ ಪ್ರವೇಶಿಕೆ : ನೀ. ಗಿರಿಗೌಡ

ಟಿಪ್ಪಣಿಗಳು

ಸಂಚಿಕೆ - 6

ಛಂದಸ್ಸು

ಘಟಕ - 3

ಹೊಸಗನ್ನಡ ಛಂದಸ್ಸು : 1

ಗಣವಿನ್ಯಾಸ, ಸ್ವರಾಘಾತ, ಗಣಪರಿವೃತ್ತಿ

ಪರಿವಿಡಿ :

3.0 ಘಟಕದ ಉದ್ದೇಶ

3.1 ಪೀಠಿಕೆ

3.2 ಹೊಸಗನ್ನಡ ಛಂದಸ್ಸಿಗೊಂದು ಮುನ್ನುಡಿ

3.3 ಗಣವಿನ್ಯಾಸ ಮತ್ತು ಪ್ರಯೋಗಗಳು

  3.3.1 ಸ್ವರಾಘಾತ

  3.3.2 ಗಣಪರಿವೃತ್ತಿ

3.4 ಸ್ವಪರೀಕ್ಷಾ ಪ್ರಶ್ನೆಗಳು

3.5 ಸಾರಾಂಶ

3.0 ಘಟಕದ ಉದ್ದೇಶ

- ಸಂಸ್ಕೃತದಿಂದ ಭಿನ್ನವಾದ ಛಂದಸ್ಸಿನ ಮಟ್ಟುಗಳ ಅಧ್ಯಯನ.
- ಅಂಶಗಣದಿಂದ ಮಾತ್ರಾಗಣಗಳತ್ತ ಹೊರಳಿದ ಬಗ್ಗೆ ಅರಿವು.
- ಅಕ್ಷರ ವೃತ್ತ, ಮಾತ್ರಾವೃತ್ತ, ಅಂಶವೃತ್ತಗಳಿಂದ ಹೊಸ ಲಯ ಮತ್ತು ಗಣಗಳ ಹುಟ್ಟು.
- ಆಧುನಿಕ ಕನ್ನಡಕ್ಕೆ ಸಾಧ್ಯವಾಗುವ ಮಟ್ಟುಗಳ ಆವಿಷ್ಕಾರ.

3.1 ಪೀಠಿಕೆ

ಕನ್ನಡ ಸಾಹಿತ್ಯದಲ್ಲಿ ಛಂದಸ್ಸಿನ ಇತಿಹಾಸವನ್ನು ಗಮನಿಸಿದಾಗ ಕಾಲಕಾಲಕ್ಕೆ ಅಕ್ಕಪಕ್ಕದ ಭಾಷೆಗಳಿಂದ ತನ್ನ ಅಭಿವ್ಯಕ್ತಿಗೆ ಅನುಗಣವಾಗಿ ಹೊಸ ಹೊಸ ಲಯಗಾರಿಕೆಯನ್ನು ಪಡೆದುಕೊಂಡು ಸಾಹಿತ್ಯವನ್ನು ಜನರ ಸಮೀಪಕ್ಕೆ ತೆಗೆದುಕೊಂಡು ಹೋಗುತ್ತಿರುವುದನ್ನು ನಾವು ಗಮನಿಸಬಹುದು.

ಆರಂಭದಲ್ಲಿ ಅಂದರೆ ಹಲ್ಮಿಡಿ ಶಾಸನದಿಂದ ನಾಗಚಂದ್ರನ ವರೆಗೂ ಹೆಚ್ಚು ಕಮ್ಮಿ ಸಂಸ್ಕೃತ ಸಾಹಿತ್ಯದ ಅಭಿವ್ಯಕ್ತಿ ವಿಧಾನವನ್ನು ಸ್ವೀಕರಿಸಿದ್ದುದು ಎದ್ದು ಕಾಣುತ್ತದೆ. ಅನಂತರ ಬಂದ ವಚನ ಸಾಹಿತ್ಯ, ಜನ ಸಾಮಾನ್ಯರು ಸಾಹಿತ್ಯ ರಚಿಸುತ್ತಿದ್ದ ಕಾರಣದಿಂದಾಗಿ, ಜನಪದ ಮಟ್ಟುಗಳನ್ನು ತನ್ನ ಅಭಿವ್ಯಕ್ತಿಯ ಸಾಧ್ಯತೆಗಳನ್ನು ಕಂಡುಕೊಳ್ಳಲು ಬಳಸಿರಬೇಕು.

3.1 ಹೊಸಗನ್ನಡ ಛಂದಸ್ಸಿಗೊಂದು ಮುನ್ನುಡಿ

ಇಂಗ್ಲೀಷ್ ಸಾಹಿತ್ಯದ ಪ್ರಭಾವ ಸಾಹಿತ್ಯದ ಮೌಲ್ಯಗಳ ಮೇಲೆ ಮಾತ್ರ ಆಗಿಲ್ಲ, ಬಂಧದ ಮೇಲೂ ಆಗಿದೆ. ವರ್ಣವೃತ್ತಗಳು, ಅಂಶಗಣಗಳು, ಮಾತ್ರಾಗಣಗಳು ಕಾಲಕಾಲಕ್ಕೆ ಕಾವ್ಯಬಂಧದಲ್ಲಿ, ನಮ್ಮ ಸಾಹಿತ್ಯ ಸಾಕಷ್ಟು ಬದಲಾವಣೆಯನ್ನು ಕಂಡುಕೊಂಡಿದೆ. ಮೊದಲು ಸಂಸ್ಕೃತದ ಪ್ರಭಾವದಿಂದ, ನಂತರ ಪ್ರಾಕೃತದ ಪ್ರಭಾವದಿಂದ, ಜೊತೆಗೆ ಜನಪದ ಸಾಹಿತ್ಯದ ಪ್ರಭಾವಗಳಿಂದಾಗಿ ವಿಶಿಷ್ಟ ಮಟ್ಟುಗಳನ್ನು ಅರಗಿಸಿಕೊಂಡು ಕಾಲಕಾಲಕ್ಕೆ ಜೀವಂತವಾಗಿ ಮೂಡಿಬಂದ ಕನ್ನಡ ಸಾಹಿತ್ಯ ಜೀವಂತಿಕೆಗೆ ಸಾಕ್ಷಿಯಾಗಿದೆ. ಸ್ಥೂಲವಾಗಿ ಹತ್ತನೆಯ ಶತಮಾನ, ಹದಿಮೂರನೆಯ ಶತಮಾನ, ಹದಿನೈದನೆಯ ಶತಮಾನಗಳಲ್ಲಿ ಆಯಾಯ ಮಜಲುಗಳು ಕಾವ್ಯಬಂಧವನ್ನು ಹೊಸ ಜಾಡಿಗೆ ತಿರುಗಿಸಿದ್ದು ನಮಗೆ ತಿಳಿದ ಸಂಗತಿ. ಹಾಗೆಯೆ ಈ ಇಪ್ಪತ್ತನೆಯ ಶತಮಾನಗಳಲ್ಲಿ ಕಾವ್ಯಬಂಧ ಇನ್ನೊಂದು ಮಗ್ಗಲಿಗೆ ಸರಿದಿದ್ದನ್ನು ನಾವು ಗಮನಿಸಿದ್ದೇವೆ. ಮುಖ್ಯವಾಗಿ ಈ ಶತಮಾನದಲ್ಲಾದ ಬದಲಾವಣೆ ಹಿಂದಿನ ಬದಲಾವಣೆಗಿಂತ ತೀರ ಭಿನ್ನ ಎಂದು ಹೊರನೋಟದಲ್ಲಿ ಕಂಡರೂ ವಾಸ್ತವಿಕವಾಗಿ ಹಾಗೇನೂ ಆಗಿಲ್ಲ. ಮಾತ್ರಾಬಂಧ ಅಲ್ಪಸ್ವಲ್ಪ ಮಾರ್ಪಾಡಿನೊಂದಿಗೆ ಹೊಸ ಲಯವನ್ನು ಕಂಡುಕೊಂಡಿದ್ದು ಇಲ್ಲಿಯ ವೈಶಿಷ್ಟ್ಯ. ಆದರೆ ಈ ಮಾತನ್ನು ನವ್ಯ ಸಾಹಿತ್ಯಕ್ಕೆ ಹೇಳಲು ಬರುವುದಿಲ್ಲ.

ಬಿ.ಎಂ. ಶ್ರೀಯವರು "ಇಂಗ್ಲಿಷ್ ಗೀತೆ"ಯನ್ನು ಪ್ರಕಟಿಸಿದಾಗ ಈ ಬಗೆಯ ತಿರುವು ಎದ್ದು ಕಾಣಲು ಆರಂಭವಾಯಿತು. ಅಷ್ಟೆ? ಅಲ್ಲ. ಇದರ ಪರಿಣಾಮ ನವೋದಯ ಸಾಹಿತ್ಯದಲ್ಲೂ

ಆಯಿತೆಂಬುದನ್ನು ಮರೆಯುವಂತಿಲ್ಲ. ಈ ರೀತಿಯ ಬಂಧದ ಬದಲಾವಣೆ ಆಯಾ ಕಾಲಕ್ಕೆ ಆಗುವುದು ಸರಿ ಎಂದು ತೀ.ನಂ. ಶ್ರೀಕಂಠಯ್ಯನವರು ಸಮರ್ಥಿಸಿದ್ದಾರೆ. "ಕನ್ನಡ ಛಂದಸ್ಸು ನೀರು ನಿಂತ ಕೊಳದಂತೆ ಅಲ್ಲ; ಅದು ಒಂದು ನದಿಯಂತೆ. ಅಲ್ಲಲ್ಲಿ ಉಪನದಿಗಳನ್ನು ಸೇರಿಸಿಕೊಳ್ಳುತ್ತ ಒಂದು ಕ್ಷೀಣಿಸಿ ಮತ್ತೊಂದು ಪ್ರಬಲಿಸುವ ಶಾಖೆಗಳಾಗಿ ಒಡೆಯುತ್ತ, ಮುಂದು ಮುಂದಕ್ಕೆ ಹರಿಯುವ ನದಿಯಂತೆ ಈ ಛಂದಸ್ಸು ಬಲು ಹಿಂದಿನಿಂದ ಬೆಳೆಯುತ್ತಲೇ ಇದೆ; ಹೊಸ ಹೊಸ ಸಂಬಂಧಗಳನ್ನು ಗ್ರಹಿಸುತ್ತಲೇ ಇದೆ; ತನ್ನ ಜಾಯಮಾನಕ್ಕೆ ಬೆಳವಣಿಗೆಗೂ ಸರಿ ಬೀಳದ ಮಟ್ಟುಗಳನ್ನು ಕೈ ಬಿಡುತ್ತಲೇ ಇದೆ. ಕನ್ನಡದಲ್ಲಿ; ಆದಿಯಲ್ಲಿ ಬಂದ ದ್ರಾವಿಡ ಛಂದಸ್ಸಿನ ತಳಹದಿಯೇ ಬೇರೆ; ಅಲ್ಲಿಂದೀಚೆಗೆ ಬಂದು ಬೇರೂರಿ ಕನ್ನಡ ಚಂಪೂ ಕಾವ್ಯಗಳಲ್ಲೆಲ್ಲಿ ಉದ್ಘೋಷಿಸಿದ ಸಂಸ್ಕೃತದ ವೃತ್ತಗಳು, ಪ್ರಾಕೃತದ ಕಂದ ಇವುಗಳ ತಳಹದಿಯೇ ಬೇರೆ; ಇನ್ನೂ ಈಚೆಗೆ ಪ್ರಬಲಿಸಿ ನಮಗೆಲ್ಲ ಸುಪರಿಚಿತವಾಗಿರುವ ಷಟ್ಪದಿಗಳ ತಳಹದಿಯೇ ಬೇರೆ. ಇವೆಲ್ಲವೂ ಬೇರೆಬೇರೆಯ ಕಾಲಗಳಲ್ಲ ಕನ್ನಡಕ್ಕೆ ಬಂದವು, ಬೇರೆ ಬೇರೆಯ ನಿಯಮಗಳನ್ನು ಅನುಸರಿಸತಕ್ಕವು, ಒಂದನ್ನೊಂದು ಹಿಮ್ಮೆಟ್ಟಿಸಿರತಕ್ಕವು. ಈ ಕ್ರಮಕ್ಕೆ ಅನುಗುಣವಾಗಿ ಪ್ರಮುಖ ಸ್ಥಾನವು ಈಗ ಹೊಸ ಮಟ್ಟುಗಳಿಗೆ ದೊರೆತಿದೆ". ಎಂಬ ಮಾತುಗಳು ನಾನು ಹಿಂದೆ ಹೇಳಿದ ಮಾತಿಗೆ ಪುಷ್ಟಿ ನೀಡುತ್ತದೆ.

ಈ ಶತಮಾನದಲ್ಲಿ ಕಂಡುಬಂದ ಹೊಸ ಮಟ್ಟುಗಳು ಮೇಲು ನೋಟಕ್ಕೆ ಬಂಧರಹಿತ ವೆಂಬಂತೆ ಕಂಡರೂ ಅದು ಲಯದ ಧಾಟಿಗೆ ಅಂಟಿಕೊಂಡು ವಿಶಿಷ್ಟವಾದ, ನಿಯತವಾದ ಮಾತ್ರಾಗತಿಯನ್ನು ಪಡೆದು ಕೊಂಡಿರುವುದು ಅವುಗಳನ್ನು ವಿಶ್ಲೇಷಿಸಿದಾಗ ತಿಳಿದು ಬರುವ ಸತ್ಯ ಸಂಗತಿ. "ಹಿಂದಿನ ಛಂದಸ್ಸಿನಲ್ಲಿದ್ದಂತೆ ಪದ್ಯಕ್ಕೆ ಇಷ್ಟೇ ಚರಣ, ಚರಣಕ್ಕೆ ಇಷ್ಟೇ ಅಕ್ಷರ ಅಥವಾ ಮಾತ್ರೆ ಎಂಬ ಕಟ್ಟಳೆಯೇ ಕಾಣಿಸದೆ ಹೊಸ ಛಂದಸ್ಸಿನಲ್ಲಿ ಅನಾಯಕತೆ ತಾಂಡವ ವಾಡುತ್ತಿರುವಂತೆ ಭಾಸವಾಗಬಹುದು. ಆದರೆ ಒಳಹೊಕ್ಕು ಪರಿಶೀಲಿಸಿದರೆ, ಇಲ್ಲಿರುವುದು ವೈವಿಧ್ಯವೇ ಹೊರತು ಸ್ವಚ್ಛಂದತೆಯಲ್ಲವೆಂಬುದು ಸ್ಪಷ್ಟವಾಗುತ್ತದೆ" ಎಂಬ ತೀ.ನಂ. ಶ್ರೀಯವರ ಮಾತು ಗಮನಾರ್ಹವಾದುದು. ಇಲ್ಲಿ ಪಾದಗಳು ಮಾತ್ರಾ ವೃತ್ತಗಳಂತಾಗಲಿ, ಅಕ್ಷರ ವೃತ್ತಗಳಂತಾಗಲೀ ನಿಯಮಿತವಾಗಿ ಇಷ್ಟೇ ಇರಬೇಕೆಂಬ ಕಟ್ಟಳೆ ಇಲ್ಲ. ಆ ವಿಚಾರದಲ್ಲಿ ಕವಿಗೆ ಸ್ವಾತಂತ್ರ್ಯವಿದೆ. ಕವಿಗೆ ಹಿತವಾಗುವಂತೆ ೩ ಮಾತ್ರೆಯಿಂದ ಹಿಡಿದು ೮ ಮಾತ್ರೆಗಳ ಗಣಗಳವರೆಗೂ ಆತ ಸಂಯೋಜಿಸುತ್ತಾನೆ. ಕೆಲವೆಡೆ ಜಗಣ ಅಥವಾ ನಿಷಿದ್ಧವಾದ ಮಾತ್ರೆಗಳನ್ನು ಆರಂಭದಲ್ಲೋ ಮುಕ್ತಾಯದಲ್ಲೋ ತಂದು ವಿಶಿಷ್ಟವಾದ ಪಲುಕನ್ನು ಅಂಜದೇ ತರುತ್ತಾನೆ. ಅದರಿಂದ ಪದ್ಯಕ್ಕೆ ಭಾವಕ್ಕೆ ಒಂದು ಬಿಗಿಬರುತ್ತದೆ. ಒಟ್ಟಿನಲ್ಲಿ ಇಲ್ಲಿ ಕವಿಗೆ ಸ್ವಾತಂತ್ರ್ಯ ಹೆಚ್ಚಾಗಿದ್ದು ಭಾವ ಪ್ರಧಾನವಾಗಿ, ಭಾವದ ಓಟಕ್ಕೆ ನಡೆಗೆ ತಕ್ಕ ಬಂಧವನ್ನು ಜೋಡಿಸುತ್ತ ಸಾಗುತ್ತಾನೆ. ಇಲ್ಲಿ ಇನ್ನೊಂದು ಮುಖ್ಯ ವಿಷಯವನ್ನು ಗಮನಿಸಬೇಕಾಗುತ್ತದೆ. ಈ ಶತಮಾನ ವೀರ ಯುಗ ಅಲ್ಲ. ವೀರಕಾವ್ಯಗಳು ಬರುತ್ತಿರಲಿಲ್ಲ. ಅದಕ್ಕಿಂತ ಹೆಚ್ಚಾಗಿ ಭಾವಗೀತೆಗಳೇ ಹೆಚ್ಚಾಗಿ ಬರುತ್ತಿದ್ದರಿಂದ ಬಂಧದ ರಚನೆ ಅನಿವಾರ್ಯವಾಗಿ ದಾಸನಾಗಬೇಕಾಯಿತು.

ಕಾಲದಿಂದ ಕಾಲಕ್ಕೆ ಕಾವ್ಯ ತನ್ನ ವಿಶಿಷ್ಟ ಶಕ್ತಿಯಿಂದ ಮಾರ್ಪಾಡನ್ನು ಕಂಡುಕೊಳ್ಳುವುದು ಅನಿವಾರ್ಯವಾದಂತೆ ಈ ಶತಮಾನದ ಭಾವಗೀತೆಗಳೂ ಹಳೆಯ ಕಂದ, ವೃತ್ತಗಳಿಗೆ ಜೋತು ಬೀಳುವುದು ಸಾಧ್ಯವಾಗಲಿಲ್ಲ. ಆ ಬಗೆಯ ರಚನೆಗಳೂ ಬಂದವು. ಆದರೆ ಅವು ಹಲವಾರು ಕಾರಣಗಳಿಂದ ಯಶಸ್ವಿಯಾಗಲಿಲ್ಲ. ಇದಕ್ಕೆ ಪ್ರಮುಖ ಕಾರಣ ನಮ್ಮ ಆಡುನುಡಿಯಿಂದ ದೂರ ಉಳಿಯ ಬೇಕಾಗುವ ಸ್ಥಿತಿ, ಭಾಷೆ ತೀರ ಗ್ರಾಂಥಿಕವಾಗುವ ಸ್ಥಿತಿ ಬಂದದ್ದು ಎಂದು ಹೇಳಬಹುದು. ಈ ದೋಷವನ್ನು ಸುಧಾರಿತ

ಮಟ್ಟುಗಳಿಂದ ಬಹಳ ಸುಲಭವಾಗಿ ಪ[illegible]ಕೊಳ್ಳುವುದೂ ಸಾಧ್ಯವಾಯಿತು. ಹೊಸ ಮಟ್ಟುಗಳು ಎಲ್ಲಿಂದಲೋ ಇದ್ದಕ್ಕಿದ್ದಂತೆ ಮೂಡಿದವಲ್ಲ. ಅದು ನಮ್ಮ ಜಾಯಮಾನಕ್ಕೆ ಒಗ್ಗುವಂಥವು. ನಮ್ಮ ಪರಂಪರೆಯ ತಳಹದಿಯ ಮೇಲೆ ನಿಂತಂಥವು ಎಂಬುದನ್ನು ಬಹಳ ಸುಲಭದಲ್ಲಿ ಮನಗಾಣಬಹುದು. ಒಂದರ್ಥದಲ್ಲಿ ರಗಳೆ, ಕುಸುಮ. ಷಟ್ಪದಿ, ಭೋಗ ಷಟ್ಪದಿ, ವಾರ್ಧಕ ಷಟ್ಪದಿ, ಛಂದೋವತಂಸ, ಅಕ್ಕರ, ಧವಳ, ತ್ರಿಪದಿಯ ಮೂಲ ಮಟ್ಟುಗಳನ್ನೆ ಇಟ್ಟುಕೊಂಡು ಅವುಗಳ ಮಾತ್ರಾ ವಿನ್ಯಾಸಗಳಲ್ಲಿ, ಗಣ ವಿನ್ಯಾಸಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಯನ್ನು ತಂದುಕೊಂಡು, ಹೊಸ ಭಾವದ ಅಭಿವ್ಯಕ್ತಿಗೆ ಅನುಗುಣವಾಗುವಂತೆ ಧಾಟಿಯನ್ನು ಜೋಡಿಸಿಕೊಂಡದ್ದು ಹೊಸ ಬಗೆಯ ನಾದಕ್ಕೆ, ಮಟ್ಟಿಗೆ ಎಡೆಮಾಡಿಕೊಟ್ಟಿತು. ಹೊಸಗನ್ನಡ ಛಂದಸ್ಸಿಗೆ ನಿರ್ದಿಷ್ಟವಾದ ಲಯ, ವಿನ್ಯಾಸ, ಚಿಹ್ನೆಗಳನ್ನು ಮೊದಲ ಬಾರಿಗೆ ಹಾಕಿಕೊಟ್ಟವರು ತೀ.ನಂ. ಶ್ರೀಕಂಠಯ್ಯನವರು ಒಂದರ್ಥದಲ್ಲಿ ಅವರೆ ಹೊಸಗನ್ನಡ, ಛಂದಃ ಶಾಸ್ತ್ರದ ನಿರ್ಮಾಪಕರು, ಅವರು ನೀಡಿದ ಸೂಚನೆ ಇಂದಿಗೂ ಶಾಶ್ವತವಾಗಿ ಉಳಿದು ಅಪವಾದಕ್ಕೆ ಗುರಿಯಾಗಿದ್ದ ಹೊಸಗನ್ನಡ ಲಯಕ್ಕೆ ವಿಶಿಷ್ಟ ಸ್ಥಾನವನ್ನು ಕೊಡಿಸಿದ್ದ ಕೀರ್ತಿ ಅವರಿಗೆ ಸಲ್ಲುತ್ತದೆ. (ತೀ.ನಂ.ಶ್ರೀಯವರ ಸಮಾಲೋಕನದಲ್ಲಿ ಇದನ್ನು ಕುರಿತು ವಿವರವಾಗಿ ಚರ್ಚಿಸಿದ ಲೇಖನಗಳಿವೆ. ಅವನ್ನು ಓದಿ) ಹೆಚ್ಚಾಗಿ ಭಾವಗೀತೆಗಳೇ ಹೆಚ್ಚಾಗಿ ಬರುತ್ತಿದ್ದರಿಂದ ಬಂಧದ ರಚನೆ. ಗಣವಿನ್ಯಾಸಗಳನ್ನು ನಿರ್ದಿಷ್ಟವಾಗಿ ತೋರಿಸಿಕೊಟ್ಟಿದ್ದಾರೆ.

3.3 ಗಣ ವಿನ್ಯಾಸ ಮತ್ತು ಪ್ರಯೋಗಗಳು

ಈಗ ಆ ಮಟ್ಟುಗಳ ಲಯಗಳನ್ನು ವಿವರವಾಗಿ ಗಮನಿಸೋಣ. ಹೊಸಗನ್ನಡ ಕವಿತೆಗಳಲ್ಲಿ (ಮುಖ್ಯವಾಗಿ ನವೋದಯ ಸಾಹಿತ್ಯದಲ್ಲಿ) ಪ್ರಯೋಗವಾದ ಲಯಗಳನ್ನು ಗಮನಿಸಿದಾಗ ಆರು ಬಗೆಯ ಗಣಗಳ ಪ್ರಯೋಗ ಕಂಡುಬರುತ್ತದೆ. ಅವುಗಳು ೩,೪,೫,೬,೭,೮ ಮಾತ್ರೆಗಳಿಂದ ಕೂಡಿದ ಭಿನ್ನಭಿನ್ನವಾದ ಗಣಗಳಾಗಿರಲು ಸಾಧ್ಯವಿದೆ. ಸಾಮಾನ್ಯವಾಗಿ ೭,೮, ಮಾತ್ರೆಗಳಿರುವ ಗಣಗಳು ಅಖಂಡವಾಗಿ ಬರುವುದು ವಿರಳ. ಅವುಗಳನ್ನು ೩+೪, ೩+೫, ಎಂಬುದಾಗಿ ಒಡೆಯ ಬೇಕಾಗುತ್ತದೆ. ೭,೮ ಮಾತ್ರೆಗಳ ಗಣಗಳು ಲಯದ ದೃಷ್ಟಿಯಿಂದ ಅಷ್ಟೊಂದು ಕಿವಿಗೆ ಹಿತವಾಗುವುದಿಲ್ಲ.

ಈ ಬಗೆಯ ಒಂದೊಂದು ಗಣಗಳಿಗೂ ಕೆಲವು ಉದಾಹರಣೆಗಳನ್ನು ಗಮನಿಸಿ.

೩ ಮಾತ್ರೆಗಳಿಗೆ

ಸುಗ್ಗಿ | ಇರಲು | ಕುಣಿವ | ಬವದಿ |
ಚಿಗುರು | ದುಟಿಯು | ನಕ್ಕ | ದಿನದಿ |

ಕಡೆಂಗೋಡ್ಲು ಶಂಕರಭಟ್ಟ

೪ ಮಾತ್ರೆಗೆ

ಹಳದಿಯ | ಹೆಡೆಯನು | ಬಿಚ್ಚೋ | ಬೇಗಾ |
ಹೊಳಹಿನ | ಹೊಂದಲೆ | ತೂಗೋ | ನಾಗಾ |

ಪಂಜೆ ಮಂಗೇಶರಾವ್

೫ ಮಾತ್ರೆ

ಉದಯದಲಿ | ಕುಸುಮತಾ | ನರಳುವುದು | ತೆಳರುವುದು |
ಮುದದಿಂದ | ಬರುವುದಾ | ಮಧುಮಾಸ | ವಿಧಿಹಾಸ |

ಕುವೆಂಪು

೬ ಮಾತ್ರೆ

ಎಚ್ಚರಿಸಲು | ಕರುನಾಡನು |
ಎದೆಬಳಗವ | ಮೇಳವಿಸಲು |

೭ ಮಾತ್ರೆಗೆ

ಗಾನ | ಮೆಲುಪಿನ | ಕೊರಲು | ಕುಗ್ಗಲು
ಕೊಳಲು | ಕೊಡುವುದು | ಮನದೊಳು

ಇಲ್ಲಿ ಏಳು ಮಾತ್ರೆಯ ಗಣವಿದ್ದರೂ ಧಾಟಿ ೩- ೪ ರ ಹಾಗೆ ಬಡೆದಿದೆ. ಹಾಗೆಯೇ ಎಂಟು ಮಾತ್ರೆಯ ಗಣದಲ್ಲೂ ಸಾಮಾನ್ಯವಾಗಿ ೩- ೫ ಕ್ಕೆ ತಾಳ ಬೀಳುತ್ತದೆ.

ಮೇಲೆ ಹೇಳಿದ ಪದ್ಯಗಳು ಪೂರ್ತಿಯಾಗಿ ಇದೇ ಮಾತ್ರಾವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುತ್ತದೆಂದು ಹೇಳುವಂತಿಲ್ಲ. ಪಾದದಿಂದ ಪಾದಕ್ಕೆ ಭಿನ್ನವಾಗುವ ಸಾಧ್ಯತೆಯೂ ಕೆಲವು ವೇಳೆ ಇರುತ್ತದೆ.

೨ ಮಾತ್ರೆಗಳಿಗೆ ಒಂದು ಗಣವಾಗಿ ಮಾಡಿಕೊಳ್ಳುವ ಸಾಧ್ಯತೆಯನ್ನು ವಿಚಾರ ಮಾಡಿದಾಗ ಲಯದ ದೃಷ್ಟಿಯಿಂದ ಅತಿ ಚಿಕ್ಕ ಘಟಕವಾಗಿ ಲಯದ ಬಳುಕು ಕಾಣದಾಗುತ್ತದೆ. ೨ -೨ ಮಾತ್ರೆಗಳಂತೆ ಮಾಡಿಕೊಂಡಾಗ ನಾಲ್ಕು ಮಾತ್ರೆಯು ತಾನೇ ತಾನಾಗಿ ಅಲ್ಲಿರುವಾಗ ಅದನ್ನು ಈ ರೀತಿ ಒಡೆದಂತಾಗಿ ಲಯಕೆಡುವ ಸಾಧ್ಯತೆಯೇ ಹೆಚ್ಚು. ಹಾಗೆಯೇ ೯ ಮಾತ್ರೆಗಳ ಬಗ್ಗೆಯೂ ಹೇಳುವುದಾದರೆ ೮ ಮಾತ್ರೆ ಹೇಗೆ ಅಖಂಡವಾಗುತ್ತದೋ ಹಾಗೇ ಇದೂ ಆಗಿ ಲಯದ ಹಿಡಿತ ತಪ್ಪುತ್ತದೆ. ಆಗ ೪+೫ ರಂತೆ ಒಡೆದು ಓದಬೇಕಾದಾಗಲೂ ಮೂಲ ಲಯ ೪- ೫ ಮಾತ್ರೆಗಳದ್ದೆ ಇರುವುದರಿಂದ ಅಖಂಡ ಲಯ ಏರ್ಪಡುವುದು ಕಷ್ಟವಾಗುತ್ತದೆ.

ಅಂಶ ಛಂದಸ್ಸಿನ ಲಯವನ್ನು ಹಿಡಿದು ಬಿ.ಎಂ. ಶ್ರೀ, ಬೇಂದ್ರೆ, ಕುವೆಂಪು, ಮಧುರ ಚೆನ್ನ, ಶ್ರೀನಿವಾಸ ಮುಂತಾದವರು ಕವನಗಳನ್ನು ಬರೆದದ್ದು ಕಂಡುಬರುತ್ತದೆ. ಆದರೆ ಅಲ್ಲೂ ಮಾತ್ರೆಗಳ ಕಡೆಗೆ ಹೆಚ್ಚು ಘಾತ ಬೀಳುವುದು ಕಂಡುಬರುತ್ತದೆ.

ಈ ರೀತಿ ತಾಳಕ್ಕೆ ಅನುಗುಣವಾಗಿ ಗಣವನ್ನು ವಿಂಗಡಿಸುವಾಗ ಅರ್ಥ ಕೆಡದಂತೆ ಗಮನ ಇಡುವುದೂ ಮುಖ್ಯ. ಇಲ್ಲವಾದಲ್ಲಿ ಅಪಾರ್ಥ ಕಂಡುಬರುತ್ತದೆ.

ನೋಡಿ

ಧ್ವನಿಸಿ ಬಯಲಾಗುತಿಹ ಸುರಗಾನದಂತೆ
ಕನಸಿನಲಿ ಗೈದಿರುವ | ಮೃತಪಾನದಂತೆ

ಇಲ್ಲಿ "ವ" ಕಾರದ ಮೇಲೆ ಒತ್ತು ಬೀಳದಿದ್ದರೆ ಅರ್ಥ ಕೆಡುತ್ತದೆ ಹಾಗೆ ಬಿದ್ದರೆ ಗಣ ಕೆಡುತ್ತದೆ. ಇಂಥ ಸಂದರ್ಭದಲ್ಲಿ ಅರ್ಥ ಕೆಡದ ಹಾಗೆ ಹಿಂದು ಮುಂದಕ್ಕೆ ಮಾತ್ರೆಗಳನ್ನು ಹಂಚುವುದರ ಮೂಲಕ ಇಲ್ಲವೆ ಪದಗಳ ಸಂಧಿಯನ್ನು ಬಿಡಿಸುವುದರ ಮೂಲಕ ಸರಿ ಪಡಿಸಿ ಕೊಳ್ಳಬೇಕಾಗುತ್ತದೆ.

3.3.1 ಸ್ವರಾಘಾತ

ಗಣದ ವಿಂಗಡಣೆಗೆ ಅನುಗುಣವಾಗಿ, ಇದನ್ನೆ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಧಾಟಿ ಹಿಡಿದು ತಾಳ ಹಾಕಿದಂತೆಲ್ಲ ಗಣದ ಆರಂಭದ ವರ್ಣದ ಮೇಲೆ ಒತ್ತು ಬೀಳುತ್ತದೆ. ಈ ಒತ್ತನ್ನು ತಾಳಿಕೊಳ್ಳುವ ಶಕ್ತಿ ಅಕ್ಷರಕ್ಕೆ ಇರಬೇಕು ಎಲ್ಲ ಅಕ್ಷರಗಳಿಗೂ ಈ ಶಕ್ತಿ ಇರುವುದಿಲ್ಲ.

ಇಂಥಾ ದುರ್ಬಲ ವರ್ಣಗಳ ಮೇಲೆ ಆಘಾತ ಬಿದ್ದರೆ ತಾಳಕೆಡುವ ಸಂಭವ ಹೆಚ್ಚು. ಈ ಬಗೆಯ ಸ್ವರಾಘಾತ ಕನ್ನಡಕ್ಕೆ ಅಷ್ಟೊಂದು ಮುಖ್ಯವಲ್ಲವಾದರೂ ಅದನ್ನು ಕಡೆಗಣಿಸುವಂತಿಲ್ಲ.

ಈ ಪದ್ಯದಲ್ಲಿ ಸ್ವರಾಘಾತವನ್ನು ಗಮನಿಸಿ

| | | | | | | | |
ಗಿರಿಯ ಕೆಲದಿ ಬನದ ನಡುವೆ ಝುರಿಯ ತೆರದಿ ಸುಳಿದು ಬರುತೆ
| | | | | | | |
ತಳದ ಶಿಲೆಯ ನಿರಿದು ಕೊರೆದು ಕೆಲದ ನೆಲವ ನೆರೆದು ಮುರಿದು

೨ ಪದದ ಆದಿಯಲ್ಲಿ ಒಂದಕ್ಕಿಂತ ಹೆಚ್ಚಾಗಿ ಲಘುಸ್ವರಗಳಿದ್ದರೆ ಎರಡನೆಯ ಸ್ವರ ಅತಿ ದುರ್ಬಲವಾಗುತ್ತದೆ. ತಾಳದ ಆಘಾತವನ್ನು ತಾಳುವುದು ಕಷ್ಟ.

ಹೆದರುವೆನು ನಾನಿನ್ನ ಬಿನ್ನಾಣಕೆಲೆ ಹೆಣ್ಣೆ

ಹೆದರದಿರು ನೀನು ನನಗೆ

೩ ಪದದ ಕೊನೆಯಲ್ಲಿರುವ ಲಘುವಿನಿಂದಲೂ ಹೊಸ ಗಣ ಆರಂಭವಾಗಬಾರದು.

ಅದೊ ಹುಲ್ಲಿನ ಮಕಮಲ್ಲಿನ
ಪೊಸ ಪಚ್ಚೆಯ ಜಮಖಾನೆ

ಪಸರಿಸುತಿದೆ ಮೈ ಮುಚ್ಚಿರೆ
ಬೇರೆ ಬಣ್ಣ | ವನೆ ಕಾಣೆ

೪ ಗಣದಾದಿಯಲ್ಲಿ ಎರಡು ಲಘುಗಳು ಬಂದರೆ ತಾಳಕ್ಕೆ ಅಡಚಣೆ ಆಗದು

ನಿನ್ನ ಮೋಹದ ನಡುವನು ಬಳಸುವ
ಚಿನ್ನದ | ಕಟ್ಟಾ | ಗಲು ಬಯ | ಕೆ

೫ ದೀರ್ಘ ಮತ್ತು ಗುರುಪದದಲ್ಲಿ ಎಲ್ಲಿದ್ದರೂ ಒತ್ತನ್ನು ತಡೆದುಕೊಳ್ಳಬಹುದು.

|
ಅಗಣಿತ ತಾರಾ, ಗಣಗಳ ನಡುವೆ
| |
ನಿನ್ನನೆ ನೆಚ್ಚಿ ಹೆ ನಾನು
| |
ನನ್ನೀ ಜೀವನ ಸಮುದ್ರ ಯಾನಕೆ
| |
ಚಿರ ಧ್ರುವ ತಾರೆಯು ನೀನು

೬. ಗಣಗಳ ವಿಂಗಡಣೆ ಪ್ರಕೃತಿ ಪ್ರತ್ಯಯಗಳ ನಡುವೆ ಆಗಬಹುದು. ಪದದ ಮಧ್ಯೆ ಆದರೆ ಅರ್ಥಕೆಡುತ್ತದೆ. ನೋಡಿ

ಎಂಜಲಾಗದ ಮಧುರ ಮಧು ರಸವ ಸವಿಯೆ
ರಂಜಿಸುವ ಕಾಡುಮೇ | ಡುಗಳನಂ| ಡಲೆಯೆ

ಕನ್ನಡ ಛಂದಸ್ಸಿನ ಜಾಯಮಾನಕ್ಕೆ ಒಗ್ಗದ ಕೆಲವು ಬಗೆಯ ರಚನೆಗಳನ್ನು ಹಿಂದಿನಿಂದಲೂ ಗಮನಿಸಿಕೊಂಡು ಬಂದಿದ್ದಾರೆ. ಷಟ್ಪದಿಗಳಲ್ಲಿ U -, U -U, U - -, U - U U. ಈ ಬಗೆಯ ಗಣಗಳನ್ನು ಬಳಸಲಾಗರದೆಂದು ಹೇಳಿದೆ. ಕಂದ ಪದ್ಯದಲ್ಲಿ ವಿಷಮ ಸ್ಥಾನಗಳಲ್ಲಿ ಹೀಗೆ ನಿಷೇಧಿಸಿದ್ದಾರೆ. ಇದಕ್ಕೆ ಮುಖ್ಯವಾದ ಕಾರಣ ಗಣದ ಆರಂಭದ ಎರಡನೇ ಗುರುವಿನ ಹಿಂದಿರುವ ಲಘು ಸ್ವರಾಘಾತವನ್ನು ತಡೆದುಕೊಳ್ಳುವ ಮಟ್ಟದಲ್ಲಿರುವುದಿಲ್ಲ. ಆದರೆ ನವೋದಯದ ಕವಿಗಳು ಆ ರೀತಿ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಬಳಸುವ ಮೂಲಕ ಪದ್ಯಕ್ಕೆ ಹೊಸ ಶಕ್ತಿಯನ್ನೂ ತುಂಬಿದ್ದಾರೆ ಆದರೆ ಇದೇ ಹವ್ಯಾಸವಾದಾಗ ಬಂಧ ಶಿಥಿಲವಾಗುತ್ತದೆ. ಇದೇ ಭಾವಕ್ಕೆ ಪುಷ್ಟಿ ದೊರಕುವ ಕಡೆಗಳಲ್ಲಿ ಈ ರೀತಿ ಬರುವುದು ಔಚಿತ್ಯವೇ ಆಗುತ್ತದೆ. ಉದಾ -

ಬೊಬ್ಬೆಯ ಹಬ್ಬಿಸಿ ಒಂದೇ ಬಾರಿಗೆ
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ

U-U

ಬೊಬ್ಬುಳಿ ತೆರೆಯನು | ದಡಕ್ಕೆ ಹೊಮ್ಮಿಸಿ

ಅಬ್ಬರದಲಿ ಭೋರ್ ಭೋರನೆ ಗುಮ್ಮಿಸಿ....

ಪ್ರಾಚೀನ ಕಾವ್ಯಗಳಲ್ಲೂ ಕ್ವಚಿತ್ತಾಗಿ ಇಂಥಾ ಪ್ರಯೋಗ ನಡೆದದ್ದು ಅಲ್ಲಲ್ಲಿ ಗೋಚರಿಸುತ್ತದೆ.

ಕೆಲವು ವೇಳೆ ನಿರ್ದಿಷ್ಟ ಗಣಗಳ ಜೋಡಿಗಳು ಸಾಗುವಾಗ ಏಕತಾನತೆಯನ್ನು ಪರಿಹರಿಸಿಕೊಳ್ಳಲು ಈ ಬಗೆಯ ಪ್ರಯೋಗವನ್ನು ಮಾಡುತ್ತಾರೆ.

೧. ಬಂಡನುಂಡ ದುಂಬಿವಿಂಡು ಹಾಡುತಿಹವು ಹಾರುತ

U - U -

ಮತ್ತ ಮಧು ಮಾಸವಿದು ಬನ್ನಿರೆಂದು ಸಾರುತ

U -

೨. ಕುಣಿಯುವಂತೆ ಮತ್ತ ಶಿಖಿ

U -

ಕುಣಿಯುತಿಹನು ನೋಡೆ ಸಖಿ

ಈ ಮೇಲಿನ ಪದ್ಯಗಳಲ್ಲಿ ಹ್ರಸ್ವ ವರ್ಣಕ್ಕೆ ದೀರ್ಘದ ಬೆಲೆಕಟ್ಟಿದರೆ ಪದ್ಯದ ಸೊಗಸು ಹೆಚ್ಚುತ್ತದೆ.

3.2.2. ಗಣ ಪರಿವೃತ್ತಿ

ಒಂದು ಪದ್ಯದಲ್ಲಿ ನಿರ್ದಿಷ್ಟವಾದ ಯಾವುದೋ ಒಂದೇ ಗಣ ಹರಿದುಕೊಂಡು ಹೋಗುತ್ತಿರುವಾಗ ಏಕತಾನತೆಯನ್ನು ತಪ್ಪಿಸಲು ಗಣದ ಮೌಲ್ಯವನ್ನು ಹಾಗೇ ಉಳಿಸಿಕೊಂಡು ಆ ಗಣವನ್ನು ಎರಡಾಗಿ ಒಡೆದು ಹೊಸ ಲಯವನ್ನು ತಂದು ನಾದ ವೈವಿಧ್ಯವನ್ನು ತರಲು ಬಳಸುವ ಈ ಕ್ರಮಕ್ಕೆ "ಗಣ ಪರಿವೃತ್ತಿ" ಎಂದು ಹೆಸರು. ಉದಾ ಅಖಂಡ ಆರು ಮಾತ್ರೆಯ ಗಣದ ಓಟವಿದ್ದು ಅದನ್ನು ೪+೨ ನ್ನು ಅಥವಾ ೩+೩ ರಂತೆ ಒಡೆದು ರಚಿಸುವುದು, ಇನ್ನೊಂದು ಬಗೆಯೆಂದರೆ ಮೂರು ಮಾತ್ರೆಯ ಓಟವಿದ್ದಾಗ ೩+೩ರ ಬದಲು ೪+೨ನ್ನು ತಂದು ಎರಡು ಗಣಗಳ ಏಕನಾದವನ್ನು ಮುರಿದು ವಿಭಿನ್ನ ನಾದವನ್ನುಂಟು ಮಾಡುವುದು. ಇಲ್ಲಿ ನೋಡಿ ಉದಾಹರಣೆಯನ್ನು

ಗಂಗೆ ಯಮುನೆ ಕೂಡಿ ಹರಿದು

<u>ಸಂಗಮ ಜಲ</u> | ಬಿಳಿದು ಕರಿದು

<u>ತಿಂಗಳ ನಗ</u> | ಮೇರೆ ಪರಿದು

ಬೇರೆ ಮಿರುಗು ನೀರಿಗು

ಎರಡನೇ ಪಾದದಲ್ಲಿ ತ್ರಿಮಾತ್ರಾ ಗಣದ ಧಾಟಿಯನ್ನು ತಪ್ಪಿಸಲು ಎರಡು ಗಣವನ್ನು ಅಖಂಡವಾಗಿ ಸ್ವೀಕರಿಸಿ ಅದರಲ್ಲಿ ೪ - ೨ ರಂತೆ ಗಣಗಳನ್ನು ಜೋಡಿಸಿದೆ.

ಒಳ್ಳೆ ಮಗಳು ಒಳ್ಳೆಯ ಗೆಳತಿ
ಒಳ್ಳೆಯ ಸೊಸೆ ಬಹು ಒಳ್ಳೆಯ ಹೆಂಡತಿ
ಚೆಲುವು | ಹೆಚ್ಚೋ ಗುಣ | ಹೆಚ್ಚೋ ಎಂಬುದು
ತಿಳಿಯದೂ ಅವಳನು ನೋಡಿದ ಜನಕ
ಮಲ್ಲಮ್ಮಾ ಮಲ್ಲಮ್ಮಾ
ಇಲ್ಲವಾದೆಯ ಮಲ್ಲಮ್ಮಾ

ಮೂರನೆಯ ಪಾದದಲ್ಲಿ ೪ ಮಾತ್ರೆಯ ಗಣದ ಬದಲು ಅಖಂಡ ೮ ಮಾತ್ರೆಗಳ ೩+೫ ಮಾತ್ರೆಯ ಬಂಧವನ್ನು ಜೋಡಿಸಲಾಗಿದೆ.

3.4 ಸ್ವಪರೀಕ್ಷಾ ಪ್ರಶ್ನೆಗಳು

೧. ಹೊಸಗನ್ನಡ ಛಂದಸ್ಸು ಕಾಣಿಸಿಕೊಳ್ಳಲು ಕಾರಣವೇನು?

....

....

೨. ಬಿ.ಎಂ.ಶ್ರೀ ಯವರ 'ಇಂಗ್ಲೀಷ್ ಗೀತೆ' ಗಳು ಛಂದಸ್ಸಿನ ಮೇಲೆ ಮಾಡಿದ ಪರಿಣಾಮಗಳೇನು?

....

....

೩. 'ಸ್ವರಾಘಾತ' ಎಂದರೇನು?

....

....

೪. ೩, ೪ ಗಣವಿನ್ಯಾಸ ಎಂದರೇನು?

....

....

೫. ೪. ೫ ಗಣವಿನ್ಯಾಸಕ್ಕೊಂದು ಉದಾಹರಣೆ ಕೊಡಿ.

....

೬. ಸ್ವರಾಘಾತವನ್ನು ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿ ಹೊಸಗನ್ನಡ ಛಂದಸ್ಸನ್ನು ಕಟ್ಟುವಲ್ಲಿ ಬಿ.ಎಂ.ಶ್ರೀ ಯವರ ಪ್ರಭಾವವೇನು?

....

....

೭. ಗಣಪರಿವೃತ್ತಿ ಎಂದರೇನು ?

....

....

3. 5 ಸಾರಾಂಶ

ಒಟ್ಟಿನಲ್ಲಿ ಕನ್ನಡ ಸಾಹಿತ್ಯ ಕಾಲದಿಂದ ಕಾಲಕ್ಕೆ, ಜನಜೀವನ ಮತ್ತು ಸಾಹಿತ್ಯದ ಅಭಿವ್ಯಕ್ತಿಗೆ ಸ್ಪಂದಿಸಿದ್ದುದು ಎದ್ದು ಕಾಣುವ ಅಂಶ. ಕನ್ನಡ ಸಾಹಿತ್ಯವನ್ನು ಸಾಮಾನ್ಯ ಜನರಿಂದ ದೂರವಾಗದಂತೆ ಛಂದಸ್ಸು ತನ್ನ ಬಂಧದಲ್ಲಿ ಮತ್ತು ಹಿಡಿದಿರಿಸಿಕೊಂಡುದು ಬಹಳ ಮುಖ್ಯವಾದ ವಿಚಾರ. ಹಾಗಾಗಿಯೇ ಛಂದಸ್ಸಿನ ಅಧ್ಯಯನವೆಂದರೆ ಕೇವಲ ತಾಳ ಲಯಗಳ ಅಧ್ಯಯನವಲ್ಲ ಒಂದು ಸಂಸ್ಕೃತಿಯ ಮಾನಸಿಕ ಅಧ್ಯಯನವೂ ಆಗುತ್ತದೆ.

ಆದರೆ ಒಂದೇ ಬಗೆಯ ಲಯಗಾರಿಕೆ, ಅಭಿವ್ಯಕ್ತಿಯಿಂದ ಸಾಹಿತ್ಯದಲ್ಲಿ ಉಂಟಾಗುವ ಕ್ಲೀಷೆ, ಏಕತಾನತೆಯನ್ನು ಹೋಗಲಾಡಿಸಲು ಕವಿಗಳು ಆಗಾಗ ಹೊಸ ಬಗೆಯ ಪ್ರಯೋಗ ಮಾಡಿದ ಬಗ್ಗೆ ಸಾಹಿತ್ಯದಲ್ಲಿ ಸಾಕಷ್ಟು ಪುರಾವೆಗಳು ದೊರಕುತ್ತವೆ.

ಇಂಗ್ಲಿಷ್ ಸಾಹಿತ್ಯ ಕನ್ನಡ ಸಾಹಿತ್ಯದ ಮೇಲೆ ಇಂಥದ್ದೇ ಒಂದು ಮಹತ್ವದ ಪರಿಣಾಮ ಮಾಡಿದುದನ್ನು ಅಲ್ಲಗಳೆಯುವಂತಿಲ್ಲ.

ಘಟಕ - 4
ಹೊಸಗನ್ನಡ ಛಂದಸ್ಸು - 7
ಮಾತ್ರೆ ಮುಡಿ ಪದ್ಮಗಣ

ಪರಿವಿಡಿ :

4.0 ಘಟಕದ ಉದ್ದೇಶ

4.1 ಪೀಠಿಕೆ

4.2 ಮಾತ್ರೆಯ ಸ್ವರೂಪ

4.2.1 ಲಘು ಗುರು ಸ್ವರೂಪ

4.2.2 ಕಂಪಿತ

4.3 ಮೌನದ ಮಾದರಿ

4.4 ಅನಾಗತ ಎಂದರೇನು

4.5 ಮುಡಿಯ ಕ್ರಮ

4.6 ಪದಗಣದ ಸ್ವರೂಪ

4.6.1 ಮುಡಿ ಪದ್ಮ ಗಣ

4.7 ಪರಿಸಮಾಪ್ತಿ

4.0 ಘಟಕದ ಉದ್ದೇಶ

- ಹೊಸಗನ್ನಡ ಮಟ್ಟುಗಳ ಬಗ್ಗೆ ಅರಿವು
- ಹೊಸಗನ್ನಡ ಮಟ್ಟುಗಳಲ್ಲಿ ವೈವಿಧ್ಯ
- ಭಾವಗೀತೆಗಳ ಛಂದಸ್ಸಿನ ಪರಿಜ್ಞಾನ
- ಆಧುನಿಕ ಅನುಭವ, ಭಾಷೆ, ಪರಿಕರಗಳಿಗೆ ಒಗ್ಗುವ ಛಂದಸ್ಸಿನ ನಿರ್ಮಾಣ
- ಮಧುರವಾದ ಭಾವನೆಗಳಿಗೆ ಮಧುರವಾದ ಮಟ್ಟುಗಳು
- ಅರ್ಥಕ್ಕೆ ಅನುಗುಣವಾಗಿ ತಾಳಲಯಗಳ ಬಳಕೆ
- ಛಂದಸ್ಸು ಕೇವಲ ಶಾಸ್ತ್ರವಲ್ಲ, ನಿತ್ಯೋಪಯೋಗಿ, ಕಾವ್ಯೋಪಯೋಗಿ.

4.1 ಪೀಠಿಕೆ

ಸಾಹಿತ್ಯ ನಿಂತ ನೀರಲ್ಲ, ಕಾಲದಿಂದ ಕಾಲಕ್ಕೆ, ಅನುಭವಗಳಿಂದ ಅನುಭವಗಳಿಗೆ ಬದಲಾಗುತ್ತ, ತನ್ನ ಪಾತಳಿಗಳನ್ನು ಹಿಗ್ಗಿಸುತ್ತ, ಕಿರಿದಾಗಿಸುತ್ತ, ಬದಲಾಯಿಸುತ್ತ, ಹೊಸ ಹೊಸ ಕವಲುಗಳನ್ನುಂಟು ಮಾಡುತ್ತ, ತನಗೆ ಬೇಕಾದ ಹಾಗೆ, ಸಂದರ್ಭಕ್ಕೆ ತಕ್ಕಹಾಗೆ, ವಾತಾವರಣಕ್ಕೆ ಅನುಕೂಲಕರವಾಗುವ ಹಾಗೆ, ಓದುಗರಿಗೆ ರಂಜನೆಯನ್ನುಂಟು ಮಾಡುವ ಹಾಗೆ, ಕವಿಗೆ ಹೊಸ ಸ್ಪೂರ್ತಿಯನ್ನು, ದೃಷ್ಟಿಕೋನವನ್ನು ತಂದು ಕೊಡುತ್ತ ಮೈದುಂಬಿ ಹರಿಯುವುದು ಗಮನಿಸಬೇಕಾದುದು. ಹಾಗಾಗಿ ಒಂದು ಸಾಹಿತ್ಯದ ಅಧ್ಯಯನ ಒಂದು ಸಮಾಜದ ಅಧ್ಯಯನವಾಗುತ್ತದೆ, ವ್ಯಾಕರಣದ ಅಧ್ಯಯನವಾಗುತ್ತದೆ, ಛಂದಸ್ಸಿನ ಅಧ್ಯಯನವಾಗುತ್ತದೆ; ಸಾಂಸ್ಕೃತಿಕ ಅಧ್ಯಯನವಾಗುತ್ತದೆ. ಆದ್ದರಿಂದಲೇ ಸಾಹಿತ್ಯ ಬದಲಾಗುವುದು ಕೇವಲ ಕವಿಯ ತುರ್ತು ಅಲ್ಲ. ಅದು ಸಮಾಜಯ ತುರ್ತು ಸಹೃದಯನ ತುರ್ತು ಕೂಡ ಹೌದು. ಒಂದು ಕಾವ್ಯ ರಚನೆಯೆಂದರೆ ಅದನ್ನು ಮೇಲೆ ಕಾಣಿಸಿದ ಎಲ್ಲ ವಿಭಾಗದ ವಿದ್ವಾಂಸರೂ ಆಯಾ ದೃಷ್ಟಿಯಿಂದ ಅದನ್ನು ಅಧ್ಯಯನಕ್ಕೆ ಒಳಪಡಿಸುತ್ತಾರೆ. ಹಾಗೆ ಅಧ್ಯಯನ ಮಾಡುವಾಗ ಛಂದಃ ಶಾಸ್ತ್ರಿಗಳು ಕಾವ್ಯದ ಛಂದ ಸ್ವರೂಪವನ್ನು ಅಭ್ಯಾಸ ಮಾಡುತ್ತಾರೆ. ಹಾಗೆ ಅಧ್ಯಯನ ಮಾಡಿ ಕವಿಯ ಪ್ರಯೋಗ ಸಾಧುವಾದುದೆ, ಅಪ ಪ್ರಯೋಗವೆ, ಮಹಾಕವಿ ಪ್ರಯೋಗವೆ ಎಂದು ನಿರ್ಧರಿಸಿ ಅದನ್ನು ಸೂತ್ರೀಕರಿಸಿ ಆ ಬಗೆಯ ಪ್ರಯೋಗದಿಂದ ಕಾವ್ಯಕ್ಕೆ ಮಹತ್ವದ ಲಾಭ ಆಗುವುದಾದರೆ ಅದನ್ನು ಜನಪ್ರಿಯ ಗೊಳಿಸಲು ಜೊತೆಗೆ ಅದಕ್ಕೆ ಶಾಸ್ತ್ರದ ಚೌಕಟ್ಟನ್ನು ಕೊಡಲು ಯತ್ನಿಸುತ್ತಾರೆ.

ಕನ್ನಡದಲ್ಲಿ ಸಂಸ್ಕೃತ ಛಂದಸ್ಸಿನ ಮಾದರಿಯಲ್ಲಿ ಮೊದಮೊದಲು ಕಾವ್ಯ ರಚನೆಗೊಂಡರೂ ಕ್ರಮೇಣ ದೇಸೀ ಛಂದಸ್ಸಿನತ್ತ ಹೊರಳಿ ಒಂದು ಅಪೂರ್ವವಾದ ಸಾಧನೆ ಮಾಡಿದ್ದನ್ನು ಮರೆಯುವಂತಿಲ್ಲ.

'ನಾಗವರ್ಮನ ಛಂದೋಂಬುದಿ' ನಮಗೆ ಬಹಳ ಮುಖ್ಯವಾದ ಛಂದೋ ಗ್ರಂಥ. ಆದರೆ ಅದು ಅಂಶಗಣದವರೆಗೂ ತನ್ನ ವ್ಯಾಖ್ಯಾನವನ್ನು ಕೊಡಲು ಸಮರ್ಥವಾದುದು. ಅಂದರೆ ಅವರ ಕಾಲದಲ್ಲಿದ್ದ ಗ್ರಂಥಗಳ ಬಗ್ಗೆ ನಿಖರವಾಗಿ ವಿಶ್ಲೇಷಿಸಿ ಛಂದಸ್ಸಿನ ಅಂಶಗಳ ಬಗ್ಗೆ ವಿವರವಾದ ಲಕ್ಷಣಗಳನ್ನು ಹೇಳಲು ಶಕ್ತನಾದ. ಆದರೆ ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದಾಗಿ ಹುಟ್ಟಿಕೊಂಡ ಹೊಸ ಬಗೆಯ

ಸಾಹಿತ್ಯಾಭಿವ್ಯಕ್ತಿಗೆ ಆ ಮಾನದಂಡ ಸರಿಬೀಳಲಿಲ್ಲ. ಹಾಗಾಗಿ ಅದನ್ನು ತೀ.ನ.ಶ್ರೀ ಅವರು ಬಹಳ ಯಶಸ್ವಿಯಾಗಿ ನಿರ್ವಹಿಸಿ ಇದಕ್ಕೊಂದು ಶಾಸ್ತ್ರೀಯ ಚೌಕಟ್ಟನ್ನು ತಂದು ಕೊಟ್ಟಿದ್ದು ಕನ್ನಡ ಛಂದಸ್ಸಿನ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಅದನ್ನೆ ಇಲ್ಲಿ ಇನ್ನಷ್ಟು ವಿವರವಾಗಿ ಅಧ್ಯಯನ ಮಾಡಲಾಗಿದೆ .

4. 2 ಮಾತ್ರೆಯ ಸ್ವರೂಪ

4.2.1 ಲಘು ಗುರು ಸ್ವರೂಪ

ಲಘುವನ್ನು ಒಂದು ಮಾತ್ರೆಯನ್ನಾಗಿಯೂ ದೀರ್ಘ ಅಥವಾ ಗುರುವನ್ನು ಎರಡು ಮಾತ್ರೆಗಳನ್ನಾಗಿಯೂ ಪ್ಲುತವನ್ನು ಮೂರು ಮಾತ್ರೆಗಳನ್ನಾಗಿಯೂ ಪರಿಗಣಿಸುತ್ತ ಬರಲಾಗಿದೆ. ಸಾಮಾನ್ಯವಾಗಿ ಲಘು ಗುರುಗಳ ಪ್ರಯೋಗ ಛಂದಸ್ಸಿನಲ್ಲಿ ಕಂಡುಬಂದರೂ ಪ್ಲುತದ ಪ್ರಯೋಗ ಅಷ್ಟಾಗಿ ಇಲ್ಲ. ಗಣಗಳನ್ನಾಗಿ ವಿಂಗಡಿಸುವಾಗ ಲಘು ಗುರುಗಳ ಮೌಲ್ಯವನ್ನು ಮಾತ್ರವೇ ಸ್ವೀಕಾರ ಮಾಡಿದ್ದಾರೆ. ಹಾರಾಮಾ ಎಂದು ಸೀತೆ ಬಾಯಳದಟ್ತುಳ್; 'ದೇವತಾ ದ್ವಾರದೇಶದೊಳಿರ್ದು ಶಂಖಮಂ ಭು ಭೂ ಭೂ ಎಂದು ಪೊರ್ಯಸಿದಂ' ಎಂಬುದಾಗಿ ಪ್ಲುತಕ್ಕೆ ಕೇಶಿರಾಜ ಉದಾಹರಣೆಯನ್ನು ಕೊಟ್ಟರೂ ಪ್ಲುತವನ್ನು ಮಾತ್ರೆಯ ದೃಷ್ಟಿಯಲ್ಲಿ ಪರಿಗಣಿಸಬೇಕೆಂಬ ಕಲ್ಪನೆಯನ್ನು ಮೊದಲಿಗೆ ತಂದು ಕೊಟ್ಟವರು ಪ್ರೊ.ತೀ.ನಂ. ಶ್ರೀಕಂಠಯ್ಯನವರು ಪ್ಲುತವನ್ನು " S" ಚಿನ್ನೆಯಿಂದ ಸೂಚಿಸಲಾಗಿದೆ. ಗಣ ವಿನ್ಯಾಸದಲ್ಲಿ ಅದರಲ್ಲೂ ವಿಶೇಷವಾಗಿ ಹೊಸಗನ್ನಡ ಲಯದಲ್ಲಿ ಅದಕ್ಕೆ ಮಹತ್ವದ ಸ್ಥಾನವಿದೆ.

೧. ಮೂಡಲ ಮನೆಯ ಮುತ್ತಿನ ನೀರಿನ ಎರಕ್ವವ ಹೊಯ್ದು
ನುಣ್ಣನ್ನೆರಕ್ವವ ಹೊಯ್ದು

೨. ಕುಣಿಯೋಣು ಬಾರಾs ಕುಣಿಯೋಣು ಬಾs
ಬೇಂದ್ರೆಯವರ ಕೃತಿಗಳಲ್ಲಿ ಇದು ವಿಶೇಷವಾಗಿ ಕಂಡು ಬರುತ್ತದೆ.

4.2.2 ಕಂಪಿತ ;

ಒಂದೇ ಅಕ್ಷರ ಕೆಲವು ವೇಳೆ ಪ್ಲುತವನ್ನು ಮೀರಿ ಅಂದರೆ ಮೂರು ಮಾತ್ರೆಗಳ ಪ್ರಮಾಣವನ್ನು ಮೀರಿ ನಿಲ್ಲುವ ಸಾಧ್ಯತೆಯಿದೆ. ಆ ಬಗೆಯ ಅಕ್ಷರಕ್ಕೆ ಕಂಪಿತವೆಂದು ಕರೆದಿದ್ದಾರೆ. ಕಂಪಿತಕ್ಕೆ "ಉ" ಈ ಬಗೆಯ ಚಿನ್ನೆಯನ್ನು ಬಳಸಲೂ ತೀ. ನಂ. ಶ್ರೀ ಯವರೇ ಸಲಹೆ ಮಾಡಿದ್ದಾರೆ.

೧. ನಿನ್ನ ಬೆಳ್ಳಿಯ ಕೂದಲಂದ
ನನ್ನ ಕಣ್ಣಿಗದೇನು ಚಂದ
ಮೂಡ ಬೆಳ್ಳಿಯ ಥಳುಕು ಮಂದ

೨. ನನ್ನ ಮೇ | ರಿ
ಪಂಪನ ನೋದುವ ನಿನ್ನಾ ನಾಲಗೆ

ಕನ್ನಡ | ವೇ | ಸತ್ಯ
ಕುಮಾರ ವ್ಯಾಸನ ನಾಲಿಪ ಕಿವಿಯದು

ಕನ್ನಡ| ವೇ ನಿತ್ಯ

3 ಲಘುವಿಗೆ ಗುರುವಿನ ಸ್ಥಾನ

ಕೆಲವು ವೇಳೆ ಗಣಗಳನ್ನು ಸರಿಹೊಂದಿಸಲು ಲಘುವನ್ನು ಗುರುವಾಗಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆ ಸಂದರ್ಭದಲ್ಲಿ ಸಾಮಾನ್ಯವಾಗಿ ಆ ಲಘು ಗಣಾಂತವಾಗಿದ್ದು, ಗುರುವಾಗುವ ಸಾಮರ್ಥ್ಯವನ್ನು ಹೊಂದಿರಬೇಕಾದುದು ಬಹಳ ಮುಖ್ಯವಾಗುತ್ತದೆ. ನವೋದಯ ಕಾಲದ ಎಷ್ಟೋ ಪದ್ಯಗಳು ಈ ರೀತಿ ಮಾಡಿಕೊಳ್ಳುವುದರಿಂದ ಒಂದು ನಿರ್ದಿಷ್ಟ ಗಣದ ವ್ಯಾಪ್ತಿಗೆ ಗುರಿ ಪಡಿಸಲು ಅನುಕೂಲವಾಗಿ ಅಲ್ಲಿಯ ಬಂದಕ್ಕೆ ಛಂದಃ ಶಾಸ್ತ್ರದ ದೃಷ್ಟಿಯಿಂದ ಅರ್ಥ ಬರುತ್ತದೆ.

ಸುತ್ತಿನ ದಳದಂದದಿ ನಾಕಂ ಪಂದದಿ ನೀನು*
ಕಿರಣಗತೆರ ನಾನಾಗಲು ಕಾಂತಿಯ ತೆರೆ ನೀನು*
(* ಈ ಚಿನ್ಹೆಯನ್ನು ಬಳಸಿದ ಕಡೆ ಲಘುವಿಗೆ ಗುರುವಿನ ಬೆಲೆಯನ್ನು ಕೊಡಲಾಗಿದೆ)

ಕೊನೆಯ ಗಣವನ್ನು ನಾಲ್ಕು ಮಾತ್ರೆಯ ವ್ಯಾಪ್ತಿಗೆ ಹಿಗ್ಗಿಸಬೇಕಾಗಿದೆ. ಆ ಸಂದರ್ಭದಲ್ಲಿ 'ನು' ಕಾರಕ್ಕೆ ಒಂದು ಮಾತ್ರೆಯ ಶಕ್ತಿಯನ್ನು ಹೆಚ್ಚಿಗೆ ತುಂಬಿ ಗುರುವಾಗಿಸಿ ಕೊಳ್ಳಬೇಕು.

4 ಗುರುವಿಗೆ ಲಘುವಿನ ಸ್ಥಾನ

ಕೆಲವು ಸಂದರ್ಭಗಳಲ್ಲಿ ಗುರುವಿಗೆ ಲಘುವಿನ ಮೌಲ್ಯ ಸಿಗುತ್ತದೆ. ಆ ಸಂದರ್ಭದಲ್ಲಿ ದೀರ್ಘಸ್ವರಗಳನ್ನು ತ್ವರಿತವಾಗಿ ಉಚ್ಚರಿಸಿ ಒಂದು ಮಾತ್ರೆಯ ಬೆಲೆಯನ್ನು ತರಬೇಕಾಗುತ್ತದೆ. ಹಾಗೆಯೆ ಒತ್ತಕ್ಷರದ ಹಿಂದಿನ ಅಕ್ಷರ ಗುರುವಾಗುವುದರಿಂದ ಅಂಥ ಕಡೆಗಳಲ್ಲೆಲ್ಲ ಈ ಕ್ರಮ ಕೈಗೊಳ್ಳಬೇಕಾಗುತ್ತದೆ. ಇದನ್ನು ಶಿಥಿಲ ದ್ವಿತ್ವವೆಂದು ಕೇಶಿರಾಜ ಹೇಳುತ್ತಾನೆ.

ಮೊದಸೆಯದಕ್ಕೆ

೧. ಚಿಮ್ಮುತ ನಿರಿಯನು ಬನದಲಿ ಬಂದಳು
ಜಿಂಕದ ಸಿಂಗಾ*ರಿ
ಹೊಮ್ಮಿದ ಹಸುರಲಿ ಮೆರೆಯಿತು ಹಕ್ಕಿ
ಕೊರಲಿನ ದನಿದೋ*ರಿ

೨. ಎದೆಯ ಬನಕೆ ಬಾರೊ*ನೀ
ಗೋಪ ಬಾಲನೆ

ಎರಡನೆಯದಕ್ಕೆ

೧. ಮಾವಿನ ಸೊಂಪು ಮಲ್ಲಿಗೆ ಬಯಲೆ*ಲ್ಲ ಕಂಪು
ಗಾಳಿಯ ತಂಪು ಜನಗಳ ಜಾತ್ರೆಯ ಗುಂಪು

೨. ಏನು ಕೋಮಲ ಕಾಯ
ಹೊಳಪು ಹೊಸ * ಪ್ರಾಯ

* ಈ ಚಿಹ್ನೆಗಳನ್ನು ಬಳಸಿದ ಕಡೆ ಗುರುವಿಗೆ ಲಘುವಿನ ಬೆಲೆ ಕೊಡಲಾಗಿದೆ.

4.3 ಮೌನದ ಮಾದರಿ

ಗಣ ವಿಭಾಗ ಮಾಡುವಾಗ ಯತಿಗೆ ಭಂಗ ಬರುವಂಥ ಎಡೆಗಳಲ್ಲಿ ಅಖಂಡವಾದ ಪಾದವೊಂದರಲ್ಲಿ ವಿರಾಮಕ್ಕೆ ತಕ್ಕ ಅವಕಾಶವಿರುವ ಕಡೆ 'ಮೌನ' ಅಥವಾ 'ವಿರಾಮ' ವನ್ನು ಯೋಚಿಸಿ ಲಯವನ್ನು ಸರಿದೂಗಿಸಬಹುದು. ವಿರಾಮ ಬರಬೇಕಾದಾಗ ಭಾವಕ್ಕೆ ಭಂಗ ಬಾರದೆ ಪೂರಕವಾಗುವಂತಿರಬೇಕು. ಈ ಬಗೆಯ ಮೌನವನ್ನು ಜೋಡಿಸಿದಾಗ ಅದು ಹಿಂದು ಮುಂದಿನ ಗಣದ, ಅಥವಾ ಧಾಟಿಯ ಬೆಲೆ ಅದಕ್ಕೆ ಬಂದು ಬಿಡುತ್ತದೆ. ಇಂಥ ಸಂದರ್ಭದಲ್ಲಿ ಅರ್ಥದಲ್ಲಿಯೂ ವಿರಾಮ ಬೇಕು. ಮೌನದ ಸಂಕೇತವನ್ನು ^ ಈ ರೀತಿ ತೋರಿಸುತ್ತಾರೆ.

ಉದಾ

ಮಂಜಿ| ಬ್ಬನಿಗಳು| ಎರೆಯುವ| ತಾವು ^
ಬೆಟ್ಟದ| ಕೋಡಲಿ| ಬೆಳೆದಿತು| ಹೂವು ^

ಇಲ್ಲಿ ನಾಲ್ಕು ಮಾತ್ರೆಯ ಗಣಗಳಾದ್ದರಿಂದ ಕೊನೆಯ ಗಣದಲ್ಲಿ ಒಂದು ಮಾತ್ರೆಯ ಮೌನವನ್ನು ಸೇರಿಸಿಕೊಂಡು ನಾಲ್ಕು ಮಾತ್ರೆಗಳಾಗಿ ಸರಿದೂಗಿಸಿಕೊಳ್ಳಬೇಕು.

ಎದೆಯ ಬನಕೆ ಬಾರೋ| ನೀ^
ಗೋಪ ಬಾಲ ^ ನೇ|
ಮುದದಿ ಶಶಿಯ ಕಿರಣ| ನಿನ್ನ
ಕರೆಯು ತಿರುವು| ದು ^

ಮೇಲಿನ ಪದ್ಯಗಳಲ್ಲೆಲ್ಲ ಮೌನವನ್ನು ತರುವುದರ ಮೂಲಕ ಹಿಂದು ಮುಂದಿನ ಗಣದ ಬೆಲೆಯನ್ನು ತಂದು ಕೊಡಲಾಗಿದೆ.

4.4 ಅನಾಗತ ಎಂದರೇನು

ಪದ್ಯದ ಪಾದವೊಂದನ್ನು ಹಾಡಲು ಎತ್ತಿಕೊಂಡ ತಕ್ಷಣವೆ ಆರಂಭದಲ್ಲೆ ಮೊದಲ ತಾಳ ಬೀಳುತ್ತದೆ. ಆದರೆ ಕೆಲವು ವೇಳೆ ಮೊದಲ ಅಕ್ಷರ ಮುಗಿದ ನಂತರದಲ್ಲಿ ತಾಳ ಬೀಳುತ್ತದೆ. ಎರಡನೆಯ ಅಕ್ಷರ ಗುರುವಾಗಿದ್ದಾಗ ಸಾಮಾನ್ಯವಾಗಿ ಹೀಗೆ ಆಗುತ್ತದೆ. ತಾಳ, ಸ್ವರಾಘಾತ ಅದರ ಮೇಲೆ ಬೀಳುತ್ತದೆ. ಮೊದಲ ಅಕ್ಷರ ತಾಳವನ್ನು ಎತ್ತಿ ಕೊಡುತ್ತದೆ. ಆದರೆ ತಾಳ ಅದರ ಮೇಲೆ ಬೀಳುವುದಿಲ್ಲ. ಅಂಥ ಅಕ್ಷರಗಳಿಗೆ 'ಅನಾಗತ' ಎಂದು ಹೆಸರು.

ನೋಡಿ ಉದಾರಹಣೆಯನ್ನು

೧. ಅ] ನಾಥ ಇವ | ಳಿನ್ನೊಬ್ಬ
ಳೀ ಜನ್ಮ ರೋಸಿ
ವೇಧೆಯನು ತಾಳದೆಯೆ
ಮುಳುಗಿದಳು ಹೊಳೆಗೆ

೨. ಚ] ಳುಕ್ಯ ರಾಷ್ಟ್ರ ಕೂಟರಲ್ಲಿ
ಗಂಗರಾ ಕದಂಬರಲ್ಲಿ

ಮೊದಲ ಪದ್ಯದಲ್ಲಿ 'ಅ' ಎರಡನೆಯದರಲ್ಲಿ 'ಚ' ಎರಡೂ ಅನಾಗತಾಕ್ಷರ. ಇವೆರಡೂ ತಾಳಗಳನ್ನು ಎತ್ತಿ ಕೊಡುತ್ತವೆ. ೧. ಈ ಬಗೆಯ ಗಣ ವಿನ್ಯಾಸ ವಿಷೇಧವಾದರೂ ಇಲ್ಲಿ ಬಂದಿರುವುದರಿಂದ ವಿಶೇಷವಾದ ಬಳುಕನ್ನು ಪಡೆದು ಕೊಳ್ಳಲು ಸಹಾಯವಾಗಿದೆ.

4.5 ಮುಡಿಯ ಕ್ರಮ

'ಮುಡಿ' ಎಂಬ ಮಾತು ಕನ್ನಡ ಛಂದಃ ಶಾಸ್ತ್ರಕ್ಕೆ ಹೊಸದು. ಇದನ್ನು ಶ್ರೀ ಕಂಠಯ್ಯನವರು ಮೊದಲಿಗೆ ಬಳಸಿದರು. ಪಾದದ ಕೊನೆಯಲ್ಲಿ ಅಥವಾ ಒಂದು ಗಣಕ್ಕಿಂತ ಹೆಚ್ಚಾಗಿ ಆ ಗಣದ ಚೌಕಟ್ಟಿನಿಂದ ಹೊರಗೆ ಉಳಿದು ಹಿಂದು ಮುಂದಿನ ಗಣಗಳಿಗೆ ಬೆರಕೆಯಾಗದ ಸಂದರ್ಭದಲ್ಲಿ, ಅದು ಲಘುವಾಗಲಿ ಅಥವಾ ಗುರುವೇ ಆಗಲಿ ಅದಕ್ಕೆ ಇಡೀ ಗಣದ ಸ್ಥಾನ ಸಲ್ಲಬೇಕಾಗುತ್ತದೆ. ಅಂದರೆ ಆ ಅಕ್ಷರವನ್ನು ಒಂದು ಗಣದಷ್ಟಾದರೂ ಎಳೆಯಬಹುದು. (ಅವಕಾಶವಿದ್ದರೆ) ಇಲ್ಲವೆ ಉಳಿದ ಮಾತ್ರೆಗಳನ್ನು ಮೌನದಿಂದಲಾದರೂ ಭರ್ತಿ ಮಾಡಿಕೊಳ್ಳಬಹುದು. ಈ ರೀತಿಯಲ್ಲಿ ಪಾದದ ಕೊನೆಗೆ ಬಿಗಿಯಾಗಿ ನಿಂತು (ಅಥವಾ ಗಣದ ಕೊನೆಗೆ ನಿಂತು) ಅದಕ್ಕೆ ಮುಕ್ತಾಯವನ್ನುಂಟು ಮಾಡುವ ಅಕ್ಷರಕ್ಕೆ 'ಮುಡಿ' ಎಂದು ಹೆಸರು. ಮುಡಿ ಎಲ್ಲ ಕಡೆಯಲ್ಲೂ ಒಂದೇ ಬಗೆಯಲ್ಲಿರುವುದಿಲ್ಲವೆಂಬುದನ್ನು ನೆನಪಿಡಬೇಕು. ಅದರ ಬೆಲೆ ಹಿಂದು ಮುಂದಿನ ಗಣವನ್ನು ಅನುಸರಿಸಿರುತ್ತದೆ.

೧. ಬೊಬ್ಬುಳಿ | ಗಿಡದಲಿ | ಗುಬ್ಬಳಿ | ಸುತ್ತಿದೆ
ಮು
ಒಬ್ಬಂ| ಟಗ ಬೋ| ರೆ
ಮು

೨. ಕಡಲ| ತೀರ| ದಲ್ಲಿ |ದೊಂದು| ತಾಜ |ಮಹಲು| ಹೋಟ | ಲು
ಮು
ಕಾಲ| ನವನೆ| ಚಾಲ |ಕನು| ತಿನಿಸು| ತಿಂಡಿ |ರೋಟ| ಲು

ಈ ಎರಡೂ ಪದ್ಯಗಳಲ್ಲೂ ಗಣಗಳಿಂದ ಹೊರಗುಳಿದ ಅಕ್ಷರ ಮುಡಿಯಾಗಿದೆ.

೩. ಸುಗ್ಗಿ ಇರಲು ಕುಣಿವ ಬನದಿ
ಚಿಗುರು ದುಟಿಯ ನಕ್ಕ ದಿನದಿ
ಮು
ವಿಶ್ವವೇ ವಸಂತ ನದಿಯೆ ಹಾಸಿನಂತೆ ಹರಡೀತು

೪. ಪಾದಗಳ ನಡುವೆ ಬರುವುದಕ್ಕೆ ಉದಾ
ಮು ಮು
ಇರಳು ಹಗಲೊ | ಳು, ಹರುಷ ವೆನ್ನೊ | ಳು
ತೊರೆದೆ ಹೋಯಿ | ತೋ, ಹೋಯಿ | ತೋ

ಮುಡಿ ಛಂದಸ್ಸಿನಲ್ಲಿ ಹೊಸದೇನಲ್ಲ. ಹಿಂದೆ ಷಟ್ಪದಿಗಳ ಕೊನೆಯಲ್ಲಿ ಗಣವಾದ ನಂತರ ಬರುತ್ತಿದ್ದ ಒಂದು ಗುರು ಗಣದ ಲೆಕ್ಕದಲ್ಲಿ ಸೇರದೆ ಹೊರಗೆ ಉಳಿಯುತ್ತಿತ್ತು. ಹಾಗೆಯೆ ಹೊಸಗನ್ನಡದಲ್ಲಿ ಗಣಕ್ಕೆ ಹೊರತಾಗಿ ಉಳಿದಾಗ ಇದು ಪದಘಲ ಮಧ್ಯೆಯೂ ಬರುವ ಸಾಧ್ಯತೆ ಇರುವುದರಿಂದ, ಗುರುವಾಗ ಬೇಕಾದರೆ ಪ್ರತ್ಯೋಕ ನಿಯಮವಿರುವುದರಿಂದ ಅದಕ್ಕು ಇದಕ್ಕು ನಡುವೆ ಅಂತರ ಸ್ಪಷ್ಟವಾಗಲು ಈ ಪದ ಬಳಸಲಾಗಿದೆ.

4.6 ಪದ್ಮಗಣದ ಸ್ವರೂಪ

ಕನ್ನಡ ಛಂದಸ್ಸಿನಲ್ಲಿ ಬ್ರಹ್ಮ, ವಿಷ್ಣು, ರುದ್ರಗಣಗಳಂತೆ ಹೊಸ ಗನ್ನಡದಲ್ಲಿ ಪದ್ಮಗಣ ವನ್ನು ಬಳಕೆಗೆ ತರಲಾಗಿದೆ. ಪದ್ಮಗಣ ಎಂಬ ಹೆಸರು ಹೊಸದು. ಆದರೆ ಇದರ ವಿನ್ಯಾಸವಾಗಲೀ, ಲಯವಾಗಲೀ, ಹೊಸದಲ್ಲ. ಅಂಶಗಣದಲ್ಲಿ ಬರುತ್ತಿದ್ದ ಬ್ರಹ್ಮಗಣವೆ ರೂಪಾಂತರದಿಂದ ಇಲ್ಲಿ ಕಾಣಿಸಿಕೊಂಡಿದೆ ಎಂದು ಒಂದು ಮಾತಿನಲ್ಲಿ ಹೇಳಬಹುದು.

ಬ್ರಹ್ಮಗಣದ ಅಂಶ ಈ ರೀತಿ ಇದೆ - U, UU -, - -, U UU ಈ ರೀತಿಗಳಲ್ಲಿ ಬರಲು ಸಾಧ್ಯ. ಇದನ್ನು ಮಾತ್ರೆಗಳ ಪ್ರಮಾಣದಲ್ಲಿ ಹೇಳಬಾಕಾದರೆ ಗರಿಷ್ಠ ಪ್ರಮಾಣದಲ್ಲಿ ಹೇಳಬೇಕಾದರೆ ಗರಿಷ್ಠ ಪ್ರಮಾಣ ನಾಲ್ಕು ಮಾತ್ರೆಗಳಾದರೆ ಕನಿಷ್ಠ ಪ್ರಮಾಣ ಮೂರು ತ್ರಿಪದಿಗಳಲ್ಲಿ ಸಾಮಾನ್ಯವಾಗಿ ೬, ೧೦ನೇ ಸ್ಥಾನದಲ್ಲು ಸಾಂಗತ್ಯದಲ್ಲಿ ೭, ೧೪ನೇ ಸ್ಥಾನದಲ್ಲೂ, ಪಿರಿಯಕ್ಕರದಲ್ಲಿ ಮೊದಲ ಗಣವಾಗಿಯೂ ಉತ್ಸಾಹದಲ್ಲಿ ಏಳೂ ಬ್ರಹ್ಮಗಣಗಳಾಗಿಯೂ ಬರುತ್ತದೆ.

ಅಂಶಗಣವು ಮಾತ್ರಗಣವಾಗಿ ಪರಿವರ್ತಿತವಾಗುವ ಕಾಲಕ್ಕೆ ವಿಷ್ಣುಗಣ ೫ ಮಾತ್ರೆಗಣವಾಗಿಯೂ, ಬ್ರಹ್ಮಗಣ ೩ ಮಾತ್ರೆಯ ಗಣವಾಗಿಯೂ ನಿಂತವು. ಇದನ್ನೇ ಪದ್ಮಗಣ ಎಂಬ ಹೆಸರಿನಿಂದ ತೀ.ನಂ.ಶ್ರೀ ಯವರು ಕರೆದಿದ್ದಾರೆ. ಸಾಮಾನ್ಯವಾಗಿ ಮಾತ್ರಾಗಣ ಮೂರ ಮಾತ್ರೆಯ ಗಣದಿಂದ ಆರಂಭವಾಗುವುದರಿಂದ ೪, ೫, ೬, ೭ ಮುಂತಾದ ಗಣಗಳ ಚೌಕಟ್ಟಿನಲ್ಲಿ ಮಾತ್ರ ಈ ಪದ್ಮಗಣ ಬರಲು ಸಾಧ್ಯ. ಮೂರು ಮಾತ್ರೆಯಲ್ಲಿ ಇದು ಕಾಣಿಸಿಕೊಂಡರೆ ಇದೂ ಒಂದು ೩ ಮಾತ್ರೆ ಗಮವಾಗಿ ಗಣಿಸಲ್ಪಡುತ್ತದೆಯೇ ಹೊರತು ವಿಶಿಷ್ಟವಾಗುವುದಿಲ್ಲ. ಜೊತೆಗೆ ಪದ್ಮಗಣ ಬಂದಾಗ ಮುಕ್ತಾಯದಲ್ಲಿ ಸಾವಕಾಶ ಗತಿ ಒಂದು ನಿಲುಗಡೆಯನ್ನು ತೋರಿಸುತ್ತದೆ.

4.6.1 ಮುಡಿ ಪದ್ಮಗಣ

ಮುಡಿಗೀಂತಲೂ ಅಕ್ಷರ ಪ್ರಮಾಣದಲ್ಲಿ ಉದ್ದವಾದ ಮುಕ್ತಾಯದ ಭಾವನೆಯನ್ನು ಅದಕ್ಕಿಂತ ಸಾವಕಾಶವಾಗಿ ತರುವ ಲಕ್ಷಣದ ವಿಶೇಷ ಗಣಕ್ಕೆ ಪದ್ಮಗಣ ಎಂಬ ಹೆಸರನ್ನು ಇಲ್ಲಿ ಕೊಟ್ಟಿದೆ. (ತೀ.ನಂ. ಶ್ರೀ. ಸಮಾಲೋಕನ, ಪು ೨೭೩) ಮುಡಿಯಲ್ಲಿ ಪದ್ಮಕ್ಕೆ ಹೋಲಿಸಿದರೆ ಗತಿ ಚುರುಕಾಗಿರುತ್ತದೆ. ಆದರೆ ಪದ್ಮ ಬಂದಾಗ ಸಾವಕಾಶವಾದ ನಡೆ ಇರುತ್ತದೆ.

ಪದ್ಮಗಣಕ್ಕೆ ಉದಾಹರಣೆಗಳನ್ನು ನೋಡಿ

೫ ೫ ೫ ೫
೧. ಎಚ್ಚರೆ ಚ್ಚುರುಮಾರ ಮೂಜಗದ ಸಿಂಗಾರ
೫ ೫ ೫
ಮನಮನದ ಬಂಗಾರ ಎಚ್ಚರೈ (ಐದು ಮಾತ್ರೆಗಣಗಳ ನಡೆ)

೨. ಬೆಳದಿಂಗ ಳಿಳಿತಂದು ಸೋಕುತಲೆ ಹೊಮ್ಮಿ
ಸೆಳೆದಲೆಗ ಳಪ್ಪುವುದು ಹೀಗ್ಗಿಬಿ ಮ್ಮಿ
(ಐದು ಮಾತ್ರೆಗಣಗಳ ನಡೆ)

ಈ ಮೇಲಿನ ಉದಾಹರಣೆಗಳಿಂದ ಪದ್ಮಗಣದ ಸ್ಥಾನ ಎಲ್ಲಿ ಹೇಗೆ ಎಂಬುದನ್ನು ಸುಲಭವಾಗಿ ಗುರುತಿಸಬಹುದು. ಒಂದೇ ಬಗೆಯ ಗಣಗಳು ಬಂದಾಗ ಅರ್ಥದ ದೃಷ್ಟಿಯಿಂದ ಒಂದು ನಿಲುಗಡೆಗೆ ಬರುವ ಹೊತ್ತಿನಲ್ಲಿ, ಸಮ ಮಾತ್ರೆಗಳ ಗಣಗಳಿಂದ ಹೊರಗುಳಿದಾಗ ಇದನ್ನು ಗುರುತಿಸಬಹುದು. ಮೊದಲನೆಯ ಉದಾಹರಣೆಯಲ್ಲಿ ' ಎಚ್ಚೈ ' ಎಂಬುದನ್ನು ಮೌನದಿಂದ ತುಂಬಿ ಮಾತ್ರೆಗಳನ್ನಾಗಿ ವಿಂಗಡಿಸಬಹುದಾದರೂ ಅರ್ಥದ ದೃಷ್ಟಿಯಿಂದ ಗಣದ ನಿಲುಗಡೆಯ ದೃಷ್ಟಿಯಿಂದ ಹಾಗೆ ಮಾಡಲು ಬರುವುದಿಲ್ಲ. ಮೊದಲಾಗಿ ಐದು ಮಾತ್ರೆಗಳ ಗಣಗಳನ್ನು ಒಡೆಯುವ ದೃಷ್ಟಿಯಿಂದಲೇ ತಂದ ಈ ಮೂರು ಮಾತ್ರೆ ಗಣ ಸಹಜವಾಗಿಯೇ ಹೊರಗುಳಿದು ಬಿಡುತ್ತದೆ. ಹಾಗೆಯೆ ಎರಡನೆಯ ಉದಾಹರಣೆಯಲ್ಲಿ ಮೊದಲ ಪಾದದ ಕೊನೆಗೆ ಬಂದ ಪದ್ಮಗಣಕ್ಕೂ ಎರಡನೆಯ ಪಾದದ ಕೊನೆಗೆ ಬಂದ ಮುಡಿಗು ಇರುವ ಅಂತರವನ್ನು ಗಮನಿಸಿ. ಒಂದರಲ್ಲಿ ಸಾವಧಾನವಾದ ನಡೆ. ಇನ್ನೊಂದರಲ್ಲಿ

ಅವಸರದ ನಡೆ. ಎರಡೂ ಅಯಾಯ ಭಾಗದ ಮುಕ್ತಾಯ ಸ್ಥಿತಿಯನ್ನೇ ಹೇಳುತ್ತದೆ. 'ಹೊಮ್ಮಿ' ' ಚಿಮ್ಮಿ' ಮಾತ್ರೆಗಳ ದೃಷ್ಟಿಯಿಂದ ಒಂದೇ ಆದರೂ ಹಿಂದಿನ ಗಣಗಳ ಕೂಟದೊಂದಿಗೆ ಬೆರೆಯದೆ 'ಹೊಮ್ಮಿ' ನಿಲ್ಲುವುದು. 'ಚಿಮ್ಮಿ' ಎಂಬುದು ಹಿಂದಿನ ಗಣದ ಸಂಗಡ ಹಂಚಿ ಕೊಂಡಾಗ ಒಂದಕ್ಷರ (ಗುರು) ಮಾತ್ರ ಬಿಡಿಯಾಗಿ ನಿಲ್ಲುವುದು.

ಪದ್ಮ ಪಾದದ ನಡುವೆಯೂ ಬರಬಹುದೆಂಬುದಕ್ಕೆ ಉದಾ

ಮು

ಮೇಲೊಂದು|ಗರುಡ|ಹಾರುತಿಹು ದು

ಜ+ಪ+ಜ+ಮು

ಮು

ಕೆಳಗದರ|ನೆರಳ| ಒಡುತಿಹು|ದು

ಜ+ಪ+ಜ+ಮು

ಸರಳ ರಗಳೆಗಳಲ್ಲಿ ಐದೈದು ಮಾತ್ರೆಗಳ ಗಣಕಟ್ಟು ಇರುತ್ತದೆ. ಇದರಲ್ಲಿ ವೈವಿಧ್ಯವನ್ನು ತರುವುದಕ್ಕಾಗಿ ಅರ್ಥದ ವಿರಾಮವನ್ನು ಪಾದದ ಬೇರೆ ಬೇರೆ ಕಡೆ ತರುತ್ತಾರೆ. ಇದು ಒಂದು ಬಗೆಯಾದರೆ ಐದು ಮಾತ್ರೆಯ ಗಣಗಳ ನಡುವೆ ಮೂರು ಮಾತ್ರೆಯ ಪದ್ಮ ಗಣವೊಂದನ್ನು ತಂದು ವೈವಿಧ್ಯವನ್ನು ಸಾಧಿಸುತ್ತಾರೆ. ಆಗ ಪದ್ಯದ ಲಯ, ಪಲುಕು ಅಂದ ಇನ್ನೂ ಹೆಚ್ಚುತ್ತದೆ.

ಉದಾ

ಪ ಪ

ಬೆನಕನಂ|ಕರೆದಳ್| ಒರೆಯಳ್ |ಭವಾನಿ ; ನಡೆ
ವಿನಾಯಕ ಪ್ರಫುಲ್ಲಿಸು ರಘೂತ್ತಮ ಮನೋಂಬುಜದಿ
ಅಭವ ಸಂಜ್ಞಾನ ಮಹದಿಚ್ಛೆಯುಂ........

"ಪದ್ಮಗಣದ ಉಚ್ಚಾರಣೆಯ ಕಾಲ ಇಷ್ಟೆ ಮಾತ್ರೆಗಳೆಂದು ಖಚಿತವಲ್ಲ, ಅದು ಯಾವ ಬಗೆಯ ಮಾತ್ರಾ ಗಣಗಳೊಡನೆ ಸೇರಿಬರುತ್ತದೆಯೊ ಅವುಗಳ ಕಾಲವನ್ನು ಅವಲಂಬಿಸುತ್ತದೆ. ಆದರೆ ಅದರ ರಚನೆ ಮಾತ್ರ ನಿಯತ ಬ್ರಹ್ಮಗಣದಂತೆಯೇ ಅದರಲ್ಲಿ ಇಂದಿಗೆ ಕೂಡ ಎರಡೇ ಅಂಶಗಳು (U UU) ಇರುತ್ತವೆ. " (ತೀ.ನಂ.ಶ್ರೀ ಸಮಾಲೋಕನ, ಪು.೨೩೨)

4.7 ಪರಿಸಮಾಪ್ತಿ

ಇಲ್ಲಿಯವರೆಗೆ ಹೊಸಗನ್ನಡ ಮಟ್ಟುಗಳ ಬಗ್ಗೆ ನೀವು ಸಾಕಷ್ಟು ವಿವರವಾಗಿ ವ್ಯಾಸಂಗ ಮಾಡಿದ್ದೀರಿ ಹೊಸಗನ್ನಡ ಕವಿತೆಗಳನ್ನು ಅಧ್ಯಯನ ಮಾಡಿ ತೀ.ನಂ.ಶ್ರೀ ಯವರು ಲೇಖನ ಬರೆಯುವುದಕ್ಕಿಂತ ಮುಂಚೆ ಬಹಳ ಜನ ಹಳೆಗನ್ನಡ ಛಂದಸ್ಸನ್ನು ಬಲ್ಲಂಥವರು, ಹೊಸಗನ್ನಡ ಕವಿತೆಗಳ ಬಗ್ಗೆ, ಅಂದರೆ

ಅದರ ಬಂಧದ ಬಗ್ಗೆ (ಯತಿ, ವಿಲಂಘನ, ಆದಿಪ್ರಾಸ ಕೈ ಬಿಟ್ಟದ್ದು, ಪಾದ ನಿಯಮದಲ್ಲಿ ಸಡಿಲಾದದ್ದು) ಗಮನಿಸಿ ವ್ಯಂಗ್ಯ ಕುಹಕದಿಂದ ಟೀಕೆ ಮಾಡುತ್ತಿದ್ದುದು ಸಾಮಾನ್ಯವಾಗಿತ್ತು. ಆದರೆ ಬಿ.ಎಂ.ಶ್ರೀ ಯವರ ಇಂಗ್ಲಿಷ್ ಗೀತೆ ಬಂದ ನಂತರ ಈ ಬಗೆಯ ಟೀಕೆಗಳಿಗೆ ಉತ್ತರವೋ ಎಂಬಂತೆ ಹೊಸ ಲಯಗಳ ಸಾಧ್ಯತೆಗಳನ್ನು ಅವರು ತೋರಿಸಿಕೊಟ್ಟರು. ತೀ.ನಂ.ಶ್ರೀ ಯವರು ಇಲ್ಲಿಯ ಛಂದಸ್ಸನ್ನು ಶಾಸ್ತ್ರೀಯ ಚೌಕಟ್ಟಿಗೆ ಒಳಪಡಿಸಿ ಅಧ್ಯಯನ ಮಾಡಿ ಒಂದು ಸಾಮಾನ್ಯ ಸೂತ್ರವನ್ನು ರೂಪಿಸಿದ ನಂತರ ಟೀಕೆ, ವ್ಯಂಗ್ಯ ನಿಂತು ಈ ಬಗೆಯ ಛಂದಸ್ಸಿನ ಪ್ರಯೋಗಕ್ಕೆ ಮಹತ್ವ ಬಂದಿತು.

ಒಂದು ಪದ್ಯವನ್ನು ಎತ್ತಿಕೊಂಡು ಅದರ ಅರ್ಥ ಮತ್ತು ಲಯ ಕೆಡದಂತೆ ಅದನ್ನು ವಿಶ್ಲೇಷಿಸುವುದರಿಂದ ಅದು ತೀ.ನಂ.ಶ್ರೀ ಯವರು ಹುಡುಕುವಂತೆ, ಹೇಳುವಂತೆ ತನಗೆ ತಾನೇ ಕವಿಗೆ ತಿಳಿಯದಂತೆ ಒಂದು ಬಗೆಯ ತಾಳ ಲಯದ ಚೌಕಟ್ಟಿಗೆ ಒಳಗಾಗಿರುತ್ತದೆ. ಕವಿ ಇಂಥ ವೃತ್ತವೆಂದು ಹಳಗನ್ನಡ ಕವಿಗಳು ತಿಳಿಸಿದಂತೆ ತಿಳಿಸದಿದ್ದರೂ ಅದು ಮೇಲು ನೋಟಕ್ಕೆ ಎಷ್ಟು ಮಾತ್ರೆಯ ಚೌಕಟ್ಟಿನದೆಂಬುದು ಆ ನಿಯಮಕ್ಕೆ ಸಾಕಷ್ಟು ಬದ್ಧವಾಗಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ.

ಬಹಳ ಮುಖ್ಯವಾಗಿ ಹೊಸಗನ್ನಡ ಸಾಹಿತ್ಯಕ್ಕೆ ಒಂದು ಶಾಸ್ತ್ರೀಯ ಛಂದಸ್ಸನ್ನು ಕಲ್ಪಿಸಿ ಕೊಟ್ಟ ಕೀರ್ತಿ ತೀ.ನಂ. ಶ್ರೀ ಯವರಿಗೆ ಸಲ್ಲುತ್ತದೆ.

ಇಲ್ಲಿಯವರೆಗೆ ಕನ್ನಡ ಛಂದಸ್ಸಿನ ಬಗ್ಗೆ ಸಾಕಷ್ಟು ಚರ್ಚಿಸಿದ್ದಾಯಿತು. ವಿದ್ಯಾರ್ಥಿಗಳಾದ ನೀವು ಈ ಪಾಠವನ್ನೆ ನೆಚ್ಚಿಕೊಂಡರೆ ಏನೂ ಸಾಲದು. ಇದು ನಿಮಗೆ ಸ್ಥೂಲವಾಗಿ ಮಾರ್ಗದರ್ಶನ ಮಾಡುತ್ತದೆ. ಡಿ.ಎಸ್.ಕರ್ಕಿಯವರ ಛಂದೋವಿಕಾಸವನ್ನು ಮತ್ತೆ ಮತ್ತೆ ಓದಿ. ಅದು ನಿಮಗೆ ಹೆಚ್ಚು ಉಪಯುಕ್ತವಾಗುತ್ತದೆ. ಅಲ್ಲಿ ಛಂದಸ್ಸಿನ ಬೆಳವಣಿಗೆ ಬಗ್ಗೆ ಸಾಕಷ್ಟು ಉದಾಹರಣೆಗಳೊಂದಿಗೆ ಚರ್ಚಿಸಿದ್ದಾರೆ. ಟಿ.ವಿ.ವೆಂಕಟಾಚಲ ಶಾಸ್ತ್ರಿಗಳ ಕನ್ನಡ ಛಂದಸ್ಸು ನಿಮ್ಮ ವ್ಯಾಸಾಂಗವನ್ನು ಗಟ್ಟಿ ಮಾಡುವ ಕೃತಿ. ಹಾಗಾಗಿ ನೀವು ಅವಶ್ಯವಾಗಿ ಈ ಎರಡೂ ಗ್ರಂಥಗಳನ್ನು ಓದಲೇಬೇಕು. ಇಲ್ಲಿ ಮುಖ್ಯಾಂಶವನ್ನು ಮಾತ್ರ ನಿಮಗೆ ತಿಳಿಸಿದ್ದೇನೆ. ಉಳಿದುದನ್ನು ನೀವು ಓದಿ ನಿಮ್ಮ ತಿಳುವಳಿಯ ಪರಧಿಯನ್ನು ಹಿಗ್ಗಿಸಿಕೊಳ್ಳಬೇಕು.

ಇದು ಶಾಸ್ತ್ರ ಗ್ರಂಥ ನೀರಸ ಎನ್ನಿಸಬಹುದು. ವಾಸ್ತವವಾಗಿ ಅದು ಬಹಳ ತಪ್ಪು ತಿಳುವಳಿಕೆ ಓದುತ್ತಿದ್ದಂತೆ, ಮನನ ಮಾಡುತ್ತಿದ್ದಂತೆಲ್ಲ ನೀವು ಇದರಿಂದ ಬಹಳ ಆಕರ್ಷಿತರಾಗುತ್ತೀರಿ, ಆನಂದಿಸುತ್ತೀರಿ. ನೀವು ಹೆಚ್ಚು ಹೆಚ್ಚು ಓದದಿದ್ದಾಗ ನಿಮಗಿದು ನೀರಸವಾಗುತ್ತದೆ. ಆದ್ದರಿಂದ ಇದು ನೀರಸವಾಗಲು ಕಾರಣ ನಿಮ್ಮ ವ್ಯಾಸಂಗದ ಆಧಾರವಷ್ಟೇ ಹೊರತು ಈ ಶಾಸ್ತ್ರವಲ್ಲ. ಒಂದೆಲ್ಲ ಎರಡು ಬಾರಿ ಓದಿದಾಗ, ಜ್ಞಾಪಕದಲ್ಲಿಟ್ಟು ಕೊಂಡಾಗ ಖಂಡಿತ ಇದು ಬಹಳ ಸುಲಭವಾಗುತ್ತದೆ ಎಂಬುದು ಕ್ರಮೇಣ ನಿಮ್ಮ ಅನುಭವಕ್ಕೆ ಬರುತ್ತದೆ.

ಪರೀಕ್ಷಾ ದೃಷ್ಟಿಯಿಂದ ಈ ಪತ್ರಿಕೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಲು ಸಾಧ್ಯ. ಇದೊಂದು ರೀತಿಯಲ್ಲಿ ಗಣಿತವಿದ್ದಂತೆ. ಅತ್ಯಧಿಕ ಅಂಕವನ್ನು ಪಡೆದುಕೊಳ್ಳಬಲ್ಲಿರಿ. ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ಇದರಲ್ಲಿ ಖಂಡಿತ ದೊರೆಯುತ್ತದೆ.

ಟಿಪ್ಪಣಿಗಳು

ಟಿಪ್ಪಣಿಗಳು

ಆದೇಶ ಸಂಖ್ಯೆ : ಕರಾಮುವಿ/ಸಿಪಾವಿ/4-813/2007-08, ಚೈತ್ರ ಎಂಟರ್‌ಪ್ರೈಸಸ್, ಬೆಂಗಳೂರು ತಾ।। 08.06.2007
ಕಾಗದ : 60 ಜಿ.ಎಸ್.ಎಂ. - ಎಂ.ಪಿ.ಎಂ. ಮುಖಪುಟ 170 ಜಿ.ಎಸ್.ಎಂ. ಆರ್ಟ್
ಪರಿಮಾಣ : 1200 ಪ್ರತಿಗಳು (ಸಂಖ್ಯೆ 1ರಿಂದ 1200)


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಹಾಗೂ ಅಧ್ಯಯನ ಕೇಂದ್ರಗಳು

Regional and Study Centres of Karnataka State Open University



(ನಮೂದಿಸಿರುವ ಅಂಕಿ - ಜಿಲ್ಲೆಯಲ್ಲಿರುವ ಒಟ್ಟು ಅಧ್ಯಯನ ಕೇಂದ್ರಗಳ ಸಂಖ್ಯೆಯನ್ನು ಸೂಚಿಸುತ್ತದೆ.)

(The Number indicate the total number of study Centres existing in that districts.)


Feedback : improvement, revision and launching of new programmes
Multimedia learning material
Academic and other support
Evaluation - methods and modes
STUDENTS
INSTRUCTIONAL SYSTEM